ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ NIMMURU SUDDI

ಸಂಪಾದಕರು: ಸುಂದರ್ Editor : Sundar

ಏಕ ಕಾಲಕ್ಕೆ ಬಳ್ಳಾರಿ, ಕೊಪ್ಪಳ, ಯಾದಗಿರಿ, ರಾಯಚೂರು, ಕಲಬುರ್ಗಿ, ಬೀದರ, ವಿಜಯನಗರ ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 211 RNI Number : KNKAN/25/A2770 11-08-2026 Tuesday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :211 ರಾಯಚೂರು 11-08-2026 ಮಂಗಳವಾರ ಪುಟ 04 ಬೆಲೆ ರೂ.2/- ಮೊ:8660146563

ಕಾಮನ್‌ವೆಲ್ತ್ ಪದಕ ವಿಜೇತರೊಂದಿಗೆ ಪ್ರಧಾನಿ ಮೋದಿ ಸಂವಾದ

ನವದೆಹಲಿ,ಆ.10-

ಗ್ಲಾಸ್ಗೋದಲ್ಲಿ ಇತ್ತೀಚೆಗೆ ಮುಕ್ತಾಯಗೊಂಡ 2026ರ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಭಾರತದ ಕೀರ್ತಿ ಹೆಚ್ಚಿಸಿದ ಪದಕ ವಿಜೇತ ಕ್ರೀಡಾಪಟುಗಳೊಂದಿಗೆ ಪ್ರಧಾನಿ ನರೇಂದ್ರಮೋದಿ ನಡೆಸಿದ ಸಂವಾದ ಹಲವು ಭಾವನಾತಕ ಹಾಗೂ ಹಾಸ್ಯಭರಿತ ಕ್ಷಣಗಳಿಗೆ ಸಾಕ್ಷಿಯಾಯಿತು.

ಕ್ರೀಡಾಕೂಟದ ವೇಳೆ ಭಾರತದ ವಿರೂಪಗೊಂಡ ನಕ್ಷೆಯನ್ನು ಪ್ರಶ್ನಿಸಿದ ಬಾಕ್ಸರ್ ಲವ್ಲಿನಾ ಬೊರ್ಗೊಹೈನ್ ಅವರ ಧೈರ್ಯವನ್ನು ಪ್ರಧಾನಿ ಶ್ಲಾಘಿಸಿದರೆ, ನಾಲ್ಕು ವರ್ಷಗಳ ಕಠಿಣ ಹೋರಾಟದ ಬಳಿಕ ಚಿನ್ನ ಗೆದ್ದ ವೇಟ್‌ಲಿಫ್ಟರ್ ಮೀರಾಬಾಯಿ ಚಾನು ಅವರ ಭಾವನಾತಕ ಅನುಭವವನ್ನು ಆಲಿಸಿದರು.

ದೆಹಲಿಯ ತಮ ನಿವಾಸದಲ್ಲಿ ನಡೆದ ಈ ವಿಶೇಷ ಭೇಟಿಯಲ್ಲಿ ಪ್ರಧಾನಿ ಮೋದಿ ಅವರು ಕ್ರೀಡಾಪಟುಗಳೊಂದಿಗೆ ಗ್ಲಾಸ್ಗೋ ಕ್ರೀಡಾಕೂಟದ ಸಿದ್ಧತೆ, ಸ್ಪರ್ಧೆಯ ಅನುಭವ ಹಾಗೂ ಗೆಲುವಿನ ಕ್ಷಣಗಳ ಕುರಿತು ಮಾತುಕತೆ ನಡೆಸಿದರು. ಪ್ರಧಾನಿಯವರೊಂದಿಗಿನ ಸಂವಾದದ ವಿಡಿಯೋವನ್ನು ಪ್ರಧಾನ ಮಂತ್ರಿ ಕಚೇರಿ ಇಂದು ಬಿಡುಗಡೆ ಮಾಡಿದೆ.



ಲವ್ಲಿನಾ ನಡೆಗೆ ಮೋದಿ ಮೆಚ್ಚುಗೆ :

ಗ್ಲಾಸ್ಗೋದಲ್ಲಿ ಭಾರತೀಯ ಕ್ರೀಡಾಪಟುಗಳು ತಮ ಗೆಲುವನ್ನು ಸಂಭ್ರಮಿಸುತ್ತಿದ್ದ ಸಂದರ್ಭದಲ್ಲಿ, ತಾವು ತೆರಳಿದ್ದ ರೆಸ್ಟೋರೆಂಟ್‌ನಲ್ಲಿ ಭಾರತದ ನಕ್ಷೆಯನ್ನು ವಿರೂಪಗೊಳಿಸಿರುವುದನ್ನು ಗಮನಿಸಿದ ಲವ್ಲಿನಾ ಬೊರ್ಗೊಹೈನ್ ಅದಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದರು. ಅವರು ರೆಸ್ಟೋರೆಂಟ್ ಸಿಬ್ಬಂದಿಗೆ ಸೌಜನ್ಯದಿಂದ ವಿಷಯ ತಿಳಿಸಿ, ನಕ್ಷೆಯನ್ನು ಸರಿಪಡಿಸುವಂತೆ ಮನವಿ ಮಾಡಿದ್ದರು. ನಂತರ ಸಿಬ್ಬಂದಿ ನಕ್ಷೆಯಲ್ಲಿ ಬದಲಾವಣೆ ಮಾಡಿದ್ದರು.

ಈ ಘಟನೆ ಕುರಿತು ಪ್ರಧಾನಿ ಮೋದಿ ಅವರು ಲವ್ಲಿನಾ ಅವರನ್ನು ನೇರವಾಗಿ ಪ್ರಶ್ನಿಸುತ್ತಾ, ಏನಾಯಿತು, ನೀವು ಆ ರೆಸ್ಟೋರೆಂಟ್‌ನವರೊಂದಿಗೆ ಜಗಳವಾಡುತ್ತಿದ್ದೀರಾ? ಎಂದು ಹಾಸ್ಯಭರಿತವಾಗಿ ಪ್ರಶ್ನಿಸಿದರಲ್ಲದೆ, ತಮ ಗೆಲುವಿನ ಸಂಭ್ರಮದ ನಡುವೆಯೂ ದೇಶದ ಭೌಗೋಳಿಕ ಅಖಂಡತೆಯಂತಹ ಸೂಕ್ಷ್ಮ ವಿಚಾರವನ್ನು ಗಮನಿಸಿ ಪ್ರತಿಕ್ರಿಯಿಸಿದ್ದಕ್ಕಾಗಿ ಲವ್ಲಿನಾ ಅವರನ್ನು ಪ್ರಶಂಸಿಸಿ ಅವರಿಗೆ ಲಾಡು ತಿನ್ನಿಸಿ ಶುಭ ಹಾರೈಸಿದರು.

ಪಾಕಿಸ್ತಾನಿ ಬಾಕ್ಸರ್‌ನ ತಮಾಷೆ:

+90 ಕೆಜಿ ವಿಭಾಗದಲ್ಲಿ ಪದಕ ಗೆದ್ದ ಬಾಕ್ಸರ್ ನರೇಂದರ್ ಬೆರ್ವಾಲ್ ಅವರು 2015ರ ಮಿಲಿಟರಿ ವರ್ಲ್ಡ್ ಗೇಮ್ಸ್‌ನ

3 ನೇ ಪುಟಕ್ಕೆ

ಅಭಿರುದ್ಧಿ ಕಾರ್ಯಗಳನ್ನು ಮಾಡಲು ಕಾಯುತ್ತಿರುವ ನೂತನ ಸಚಿವರಿಗೆ ಇನ್ನೂ ಸಿಕ್ಕಿಲ್ಲ ಖಾತೆ ಭಾಗ್ಯ

ಬೆಂಗಳೂರು, ಆ.10-

ಸಂಪುಟದ ನೂತನ ಸಚಿವರಿಗೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇಂದು ಖಾತೆ ಹಂಚಿಕೆ ಮಾಡಲಿದ್ದು, ಹಾಲಿ ಸಚಿವರ ಪೈಕಿ ಕೆಲವರ ಖಾತೆಗಳು ಅದಲು-ಬದಲಾಗಲಿವೆ. ಆಗಸ್ಟ್ 3ರಂದು ಸಂಪುಟ ವಿಸ್ತರಣೆಯಾಗಿದ್ದು, 8 ದಿನ ಕಳೆದರೂ, ಖಾತೆ ಇಲ್ಲದೆ ಸಚಿವರು ಜಿಲ್ಲೆಗಳಲ್ಲಿ ಬರ ಅಧ್ಯಯನದ ಪ್ರವಾಸ ಮಾಡುತ್ತಿದ್ದಾರೆ. ವಿಧಾನಮಂಡಲ ಅಧಿವೇಶನಕ್ಕೆ ಮೂರು ದಿನ ಮಾತ್ರ ಬಾಕಿಯಿದ್ದು, ಖಾತೆಗಳ ಮಾಹಿತಿ ತಿಳಿಯದೆ ನೂತನ ಸಚಿವರು ಗೊಂದಲದಲ್ಲಿದ್ದಾರೆ.

ನಿನ್ನೆ ದೆಹಲಿಗೆ ತೆರಳಿದ್ದ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಡರಾತ್ರಿ ಒಂದು ಗಂಟೆಯವರೆಗೂ ಪಕ್ಷದ ವರಿಷ್ಠರನ್ನೂ ಭೇಟಿ ಮಾಡಿ, ಖಾತೆ ಹಂಚಿಕೆ ಕುರಿತು ಚರ್ಚೆ ನಡೆಸಿದ್ದಾರೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕರ್ನಾಟಕ ಕಾಂಗ್ರೆಸ್‌ನ ಉಸ್ತುವಾರಿ ನಾಯಕ ರಣದೀಪ್ ಸಿಂಗ್ ಸುರ್ಜೇವಾಲಾ ಅವರನ್ನು ನಿನ್ನೆ ತಡರಾತ್ರಿಯೇ ಭೇಟಿ ಮಾಡಿ ಚರ್ಚೆ ನಡೆಸಿರುವ ಡಿ.ಕೆ.ಶಿವಕುಮಾರ್ ಅವರು, ಇಂದು ಬೆಳಗ್ಗೆ ಕೆ.ಸಿ ವೇಣುಗೋಪಾಲ್ ಅವರ ಮನೆಗೆ ಭೇಟಿ ನೀಡಿ ಸಮಾಲೋಚನೆ ನಡೆಸಿದ್ದಾರೆ.

ಖಾತೆ ಹಂಚಿಕೆ, ವಿಧಾನಸಭೆ, ವಿಧಾನ ಪರಿಷತ್ತಿನ ಅಧ್ಯಕ್ಷರ ಆಯ್ಕೆ ಸಂಪುಟದಲ್ಲಿ ಖಾಲಿಯಿರುವ ಒಂದು ಸ್ಥಾನಕ್ಕೆ ನೇಮಕಾತಿ ಮತ್ತು ನಿಗಮ-ಮಂಡಳಿಗಳ ಅಧ್ಯಕ್ಷರ ಆಯ್ಕೆಯ ಬಗ್ಗೆ ಚರ್ಚೆ ನಡೆಸಿದ್ದಾರೆ.

ವಿಧಾನಸಭಾ ಅಧ್ಯಕ್ಷ ಸ್ಥಾನಕ್ಕೆ ಈ ಮೊದಲು ಜಿ.ಎಸ್.ಪಾಟೀಲ್ ಅವರನ್ನು ಅಧ್ಯಕ್ಷರೆಂದು ಘೋಷಿಸಲಾಗಿತ್ತು. ಆದರೆ ಟಿ.ಬಿ.ಜಯಚಂದ್ರ ಅವರನ್ನು ಸಮಾಧಾನ ಪಡಿಸಲು ವಿಧಾನಸಭೆಯ ಅಧ್ಯಕ್ಷ ಸ್ಥಾನ ನೀಡುವ ಚರ್ಚೆಗಳಾಗಿವೆ. ಜಿ.ಎಸ್.ಪಾಟೀಲ್ ಅವರನ್ನು ಸಮಾಧಾನ ಪಡಿಸುವ ಹೊಣೆಗಾರಿಕೆಯನ್ನು ಎಚ್.ಕೆ.ಪಾಟೀಲ್ ಅವರಿಗೆ ವಹಿಸಲಾಗುತ್ತಿದೆ.

ಸಚಿವ ಸಂಪುಟದ ಖಾತೆ ಹಂಚಿಕೆ ಬಗ್ಗೆ ಹೈಕಮಾಂಡ್ ನಾಯಕರು ಡಿ.ಕೆ.ಶಿವಕುಮಾರ್ ಅವರಿಗೆ ಕೆಲ ನಿರ್ದೇಶನಗಳನ್ನು ನೀಡಿದ್ದು, ಪ್ರಸ್ತಾವಿತ ಪಟ್ಟಿಗೆ ಅನುಮೋದನೆ ನೀಡಿದ್ದಾರೆ ಎಂದು ತಿಳಿದು ಬಂದಿದೆ.

3 ನೇ ಪುಟಕ್ಕೆ

ಅರಣ್ಯ ಜಾಗಕ್ಕೆ ವಸತಿ ವಿನ್ಯಾಸದ ಮುದ್ರೆ!

3 ಎಕರೆ 29 ಗುಂಟೆ ಒತ್ತುವರಿ ಆರೋಪ; 33 ಎಕರೆ 38 ಗುಂಟೆ ಜಾಗ 37 ಎಕರೆ 27 ಗುಂಟೆಯಾದದ್ದು ಹೇಗೆ?

ರಾಯಚೂರು,ಆ.10-

ರಾಯಚೂರು ನಗರದ ಹೊರವಲಯದ ಅನುಷಾ ನಗರದಲ್ಲಿ ಅರಣ್ಯ ಇಲಾಖೆಗೆ ಸೇರಿದ 3 ಎಕರೆ 29 ಗುಂಟೆ ಜಾಗವನ್ನು ವಸತಿ ವಿನ್ಯಾಸದ ವ್ಯಾಪ್ತಿಗೆ ಸೇರಿಸಿ ಅನುಮೋದನೆ ಪಡೆಯಲಾಗಿದೆ ಎಂಬ ಗಂಭೀರ ಆರೋಪಕ್ಕೆ ಸಂಬಂಧಿಸಿದ ದಾಖಲೆಗಳು ಬೆಳಕಿಗೆ ಬಂದಿವೆ. ಅರಣ್ಯ ಜಾಗದ ಒತ್ತುವರಿ ಕುರಿತು ನಗರಾಭಿವೃದ್ಧಿ ಪ್ರಾಧಿಕಾರದ ಸಭೆಯಲ್ಲಿಯೇ ಆಕ್ಷೇಪ ವ್ಯಕ್ತವಾಗಿದ್ದು, ಜಾಗವನ್ನು ಹಿಂಪಡೆಯುವಂತೆ ಜಿಲ್ಲಾಡಳಿತಕ್ಕೆ ವರದಿ ಸಲ್ಲಿಸಿರುವ ಅಂಶವೂ ದಾಖಲೆಗಳಲ್ಲಿ ಉಲ್ಲೇಖವಾಗಿದೆ.

ರಾಯಚೂರು ನಗರದ ಸರ್ವೆ ನಂ.1139ರ 10 ಎಕರೆ 20 ಗುಂಟೆ, 1140ರ 4 ಎಕರೆ 24 ಗುಂಟೆ ಹಾಗೂ 1164ರ 18 ಎಕರೆ 34 ಗುಂಟೆ ಸೇರಿದಂತೆ ಒಟ್ಟು 33 ಎಕರೆ 38 ಗುಂಟೆ ಜಮೀನನ್ನು ವಸತಿ ಉದ್ದೇಶಕ್ಕಾಗಿ ಬಿನ್‌ಶೇತ್ಕಿ ಮಾಡಲಾಗಿದೆ. ಆದರೆ ದಾಖಲೆಗಳ ಪ್ರಕಾರ, ಇದಕ್ಕೆ ಹೆಚ್ಚುವರಿಯಾಗಿ 3 ಎಕರೆ 29 ಗುಂಟೆ ಜಾಗವನ್ನು ಸೇರಿಸಿಕೊಂಡು ಒಟ್ಟು 37 ಎಕರೆ 27 ಗುಂಟೆ ಪ್ರದೇಶಕ್ಕೆ ವಸತಿ ಉದ್ದೇಶದ ಅನುಮೋದನೆ ಪಡೆಯಲಾಗಿದೆ ಎಂಬುದು ಪ್ರಕರಣದ ಪ್ರಮುಖ ಅಂಶವಾಗಿದೆ.

ಅರಣ್ಯ ಜಾಗವೇ ಆಗಿದ್ದರೆ ವಸತಿ ವಿನ್ಯಾಸಕ್ಕೆ ಹೇಗೆ ಸೇರಿತು?



ಅರಣ್ಯ ಇಲಾಖೆಗೆ ಸೇರಿದ ಜಾಗದ ಸುತ್ತಮುತ್ತಲೂ ಅರಣ್ಯ ಇಲಾಖೆಯ ಜಮೀನುಗಳೇ ಇರುವಾಗ, ಹೆಚ್ಚುವರಿಯಾಗಿ 3 ಎಕರೆ 29 ಗುಂಟೆ ಪ್ರದೇಶ ವಸತಿ ವಿನ್ಯಾಸದ ವ್ಯಾಪ್ತಿಗೆ ಬಂದಿದ್ದು ಹೇಗೆ ಎಂಬ ಪ್ರಶ್ನೆ ಈಗ ಸಾರ್ವಜನಿಕ ವಲಯದಲ್ಲಿ ತೀವ್ರವಾಗಿ ಕೇಳಿಬರುತ್ತಿದೆ.

ದಾಖಲೆಗಳಲ್ಲಿಯೇ ಈ ಹೆಚ್ಚುವರಿ ಜಾಗದ ಕುರಿತು ಆಕ್ಷೇಪ ವ್ಯಕ್ತವಾಗಿದ್ದು, ಅದು ಅರಣ್ಯ ಇಲಾಖೆಗೆ ಸೇರಿದ ಜಮೀನು ಎಂದು

3 ನೇ ಪುಟಕ್ಕೆ

ದಿ.28 :ಮಹಾತಪಸ್ವಿ ಶ್ರೀ ಕುಮಾರಸ್ವಾಮಿ ಪ್ರಶಸ್ತಿ ಪ್ರದಾನ ಸಮಾರಂಭ

ರಾಯಚೂರು,ಆ.10-

ದೇವದುರ್ಗ ತಾಲೂಕಿನ ಗಬ್ಬೂರು ಗ್ರಾಮದ ಮಹಾಶೈವ ಧರ್ಮಪೀಠ ಕೊಡಮಾಡುವ ಮಹಾತಪಸ್ವಿ ಶ್ರೀ ಕುಮಾರಸ್ವಾಮಿ ಪ್ರಶಸ್ತಿಗಳಿಗೆ 2026ನೇ ಸಾಲಿಗಾಗಿ ಸಾಹಿತ್ಯ, ಪತ್ರಿಕೋದ್ಯಮ ಮತ್ತು ಸಮಾಜಸೇವೆ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದ ವ್ಯಕ್ತಿಗಳನ್ನು ಆಯ್ಕೆ ಮಾಡಲಾಗಿದೆ ಎಂದು ಮಹಾಶೈವ ಧರ್ಮಪೀಠದ ಸಾಂಸ್ಕೃತಿಕ ಸಮಿತಿಯ ಸದಸ್ಯ ಬಸವರಾಜ ಸಿನ್ನೂರ ಹೇಳಿದರು.

ಅವರಿಂದು ನಗರದ ಸುದ್ದಿಗಾರರೊಂದಿಗೆ ಮಾತನಾಡಿ, ಮಹಾಶೈವ ಧರ್ಮಪೀಠದ ಪೀಠಾಧ್ಯಕ್ಷರಾದ ಶ್ರೀ ಮುಕ್ಕಣ್ಣ ಕರಿಗಾರ ಅವರು ಅವರ ಅಧ್ಯಾತ್ಮಿಕ ಗುರುಗಳಾದ ಧಾರವಾಡದ ತಪೋವನದ ಮಹಾ



ತಪಸ್ವಿ ಶ್ರೀ ಕುಮಾರಸ್ವಾಮಿ ಗಳವರ ಹೆಸರಿನಲ್ಲಿ ಕುಮಾರಸ್ವಾಮಿಗಳವರ ಹುಟ್ಟುಹಬ್ಬವಾದ ನೂಲ ಹುಣ್ಣಿಮೆಯಂದು ಸಾಹಿತ್ಯ, ಪತ್ರಿಕೋದ್ಯಮ ಮತ್ತು ಸಮಾಜಸೇವಾ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದ ಅವರಿಗೆ ಪ್ರಶಸ್ತಿ ನೀಡಿ, ಗೌರವಿಸಲಾಗುವುದು ಎಂದರು.

2026 ನೇ ಸಾಲಿನ ಮಹಾತಪಸ್ವಿ ಶ್ರೀ ಕುಮಾರಸ್ವಾಮಿ ಸಾಹಿತ್ಯ ರತ್ನ ಪ್ರಶಸ್ತಿಯನ್ನು ಕನ್ನಡದ ಹಿರಿಯ ವಿದ್ವಾಂಸರೂ ಬೆಂಗಳೂರಿನ ಸಂಸ್ಕೃತ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪ ತಿಗಳಾದ ಪ್ರೊ.ಮಲ್ಲೇಪುರಂ ಜಿ ವೆಂಕಟೇಶ,

ಮಹಾತಪಸ್ವಿ ಶ್ರೀ ಕುಮಾರ ಸ್ವಾಮಿ ಪತ್ರಿಕಾಭೂಷಣ ಪ್ರಶಸ್ತಿಗೆ ಪ್ರಜಾಪ್ರಸಿದ್ಧ ದಿನಪತ್ರಿಕೆಯ ಉಪ ಸಂ ಪಾದಕರಾದ ರಘುನಾಥರೆಡ್ಡಿ ಮನ್ಸ ಲಾಪುರ ಹಾಗೂ ಮಹಾ ತಪಸ್ವಿ ಶ್ರೀ ಕುಮಾರಸ್ವಾಮಿ ಸೇವಾಭೂಷಣ ಪ್ರಶಸ್ತಿಗೆ ಗಮಕ ಕಲೆಯನ್ನು ನಾಡಿನಾದ್ಯಂತ ಪರಿಚಯಿಸುತ್ತಿರುವ ಖಾಸೀಮ್ ಮಲ್ಲಿಗೆ ಮಡುವು ಅವರನ್ನು ಆಯ್ಕೆ ಮಾಡಲಾಗಿದೆ ಎಂದರು.

ಈ ಸಂದರ್ಭದಲ್ಲಿ ಸಮಿತಿಯ ಅಧ್ಯಕ್ಷ ಡಾ.ಎನ್.ಎಚ್. ಪೂಜಾರ ಧಾರವಾಡ, ಸದಸ್ಯರಾದ ಎಚ್. ಎಚ್.ಮೇಟಿ ಧಾರವಾಡ ಸೇರಿದಂತೆ ಉಪಸ್ಥಿತರಿದ್ದರು.

ಹಂಪನಗೌಡ ಬಾದರ್ಲಿಗೆ ಸಚಿವ ಸ್ಥಾನಕ್ಕೆ ಆಗ್ರಹಿಸಿ ರಾಯಚೂರಿನಲ್ಲಿ ಬೃಹತ್ ಪ್ರತಿಭಟನೆ

ವೀರಶೈವ ಲಿಂಗಾಯತರ ಸಮುದಾಯ, ಜಿಲ್ಲೆಯನ್ನು ಕಾಂಗ್ರೆಸ್ ಸರ್ಕಾರ ಕಡೆಗಣಿಸಿದೆ; ಸಚಿವ ಸ್ಥಾನ ನೀಡದಿದ್ದರೆ ಹೋರಾಟ ತೀವ್ರ - ಎಚ್ಚರಿಕೆ





ರಾಯಚೂರು,ಆ.10-

ಕಾಂಗ್ರೆಸ್ ಸಚಿವ ಸಂಪುಟದಲ್ಲಿ ರಾಯಚೂರು ಜಿಲ್ಲೆಯ ವೀರಶೈವ ಲಿಂಗಾಯತ ಸಮುದಾಯದ ಶಾಸಕರಿಗೆ ಸಚಿವ ಸ್ಥಾನ ನೀಡದಿರುವುದನ್ನು ಖಂಡಿಸಿ ಹಾಗೂ ಜಿಲ್ಲೆಯ ಹಿರಿಯ ಶಾಸಕ ಹಂಪನಗೌಡ ಬಾದರ್ಲಿ ಅವರಿಗೆ ಸಚಿವ ಸ್ಥಾನ ನೀಡುವಂತೆ ಒತ್ತಾಯಿಸಿ ವೀರಶೈವ ಲಿಂಗಾಯತ ಸಮುದಾಯದ ವತಿಯಿಂದ ಸೋಮವಾರ ನಗರದಲ್ಲಿ ಬೃಹತ್ ಪ್ರತಿಭಟನೆ ನಡೆಯಿತು.

ನಗರದ ವೀರಶೈವ ಲಿಂಗಾಯತ ಬಿ.ಇಡಿ. ಕಾಲೇಜು ಮೈದಾನದಲ್ಲಿ ನಡೆದ ಪ್ರತಿಭಟನಾ ಸಭೆಯಲ್ಲಿ ಸಹಸ್ರಾರು ಸಂಖ್ಯೆಯಲ್ಲಿ ಸಮುದಾಯದ ಜನರು ಪಾಲ್ಗೊಂಡು, ಹಂಪನಗೌಡ ಬಾದರ್ಲಿ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಆಗ್ರಹಿಸಿದರು. ಬಳಿಕ ಪ್ರಮುಖ ರಸ್ತೆಯಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಿ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಸಮುದಾಯದ ಮುಖಂಡ ಹಾಗೂ ಮಾಜಿ ಜಿಲ್ಲಾ ಪಂಚಾಯಿತಿ ಸದಸ್ಯ ಬಸವರಾಜ ಹಿರೇಗೌಡ ಮಾತನಾಡಿ, ರಾಜಕೀಯದಲ್ಲಿ ಗುಲಾಮಗಿರಿಗೆ ಹೆಚ್ಚಿನ ಮಹತ್ವ ನೀಡಬಾರದು. ಸರ್ಕಾರ ನಮ್ಮ ಪರವಾಗಿಲ್ಲ ಎಂದಾದರೆ ಅದರ ಪರಿಣಾಮ ಏನಾಗುತ್ತದೆ ಎಂಬುದನ್ನು ತೋರಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಹಂಪನಗೌಡ ಬಾದರ್ಲಿ ಅವರು ರಾಯಚೂರು, ಕೊಪ್ಪಳ ಹಾಗೂ ಬಳ್ಳಾರಿ ಜಿಲ್ಲೆಗಳಲ್ಲಿ ತಮ್ಮದೇ ಆದ ರಾಜಕೀಯ ವರ್ಚಸ್ಸು ಹೊಂದಿದ್ದಾರೆ. ಅವರಿಗೆ ಸಚಿವ ಸ್ಥಾನ ನೀಡುವ ವಿಶ್ವಾಸವನ್ನು ಹೈಕಮಾಂಡ್ ಮೂಡಿಸಿತ್ತು. ಆದರೆ ಕೊನೆಯ ಕ್ಷಣದಲ್ಲಿ ಸಚಿವ ಸ್ಥಾನ ಕೈತಪ್ಪಿರುವುದಕ್ಕೆ ಕಾರಣವೇನು ಎಂಬುದು ತಿಳಿಯುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ರಾಯಚೂರು ಗ್ರಾಮೀಣ ಶಾಸಕ ಬಸನಗೌಡ ದದ್ದಲ್ ಹಾಗೂ ವಿಧಾನ ಪರಿಷತ್ ಸದಸ್ಯ ಎ.ವಸಂತಕುಮಾರ್ ಅವರು ಕೂಡ ಹಂಪನಗೌಡ ಬಾದರ್ಲಿ ಅವರಿಗೆ ಸಚಿವ ಸ್ಥಾನ ನೀಡುವಂತೆ ಒತ್ತಾಯಿಸಿದ್ದಾರೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಿ ಕೂಡಲೇ ಸಚಿವ ಸ್ಥಾನ ನೀಡಬೇಕು ಎಂದು ಮುಖಂಡರು ಆಗ್ರಹಿಸಿದರು.

ಅಖಿಲ ಭಾರತ ವೀರಶೈವ ಮಹಾಸಭಾದ ಅಧ್ಯಕ್ಷ ಚಂದ್ರಶೇಖರ ಮಿರ್ಜಾಪುರ ಮಾತನಾಡಿ, ಹಂಪನಗೌಡ ಬಾದರ್ಲಿ ಅವರು ಹಿರಿಯ ಹಾಗೂ ಅನುಭವಿ ರಾಜಕಾರಣಿಯಾಗಿದ್ದು, ಅವರಿಗೆ ಸಚಿವ ಸ್ಥಾನ ನೀಡುವುದು ಸೂಕ್ತ.

3 ನೇ ಪುಟಕ್ಕೆ

ಕನಿಷ್ಠ ವೇತನ ಜಾರಿಗೆ ಆಗ್ರಹಿಸಿ ಬೃಹತ್ ಪ್ರತಿಭಟನೆ

ಅಂಗನವಾಡಿ, ಕಾರ್ಮಿಕರು, ರೈತರು, ಮಹಿಳೆಯರು ಸೇರಿ ವಿವಿಧ ಸಂಘಟನೆಗಳ ಹೋರಾಟ; ತಾಲೂಕು ಕಚೇರಿಗೆ ಮುತ್ತಿಗೆ ಯತ್ನ, ಪ್ರತಿಭಟನಾಕಾರರು ಪೊಲೀಸ್ ವಶಕ್ಕೆ







ರಾಯಚೂರು,ಆ.10-

ರಾಜ್ಯ ಸರ್ಕಾರ ಪರಿಷ್ಕರಿಸಿರುವ ಕನಿಷ್ಠ ವೇತನವನ್ನು ಕೂಡಲೇ ಜಾರಿಗೊಳಿಸಬೇಕು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಸಂಯುಕ್ತ ಹೋರಾಟ ಕರ್ನಾಟಕ ಹಾಗೂ ಕಾರ್ಮಿಕ ಸಂಘಗಳ ಜಂಟಿ ಸಮಿತಿ ಜಿಲ್ಲಾ ಘಟಕದ ನೇತೃತ್ವದಲ್ಲಿ ಸೋಮವಾರ ನಗರದಲ್ಲಿ ಬೃಹತ್ ಪ್ರತಿಭಟನೆ ಹಾಗೂ ಜೈಲ್‌ಭರೋ ಚಳವಳಿ ನಡೆಯಿತು.

ಹಳೆ ಜಿಲ್ಲಾಧಿಕಾರಿ ಕಚೇರಿ ಎದುರಿನಿಂದ ತಾಲೂಕು ದಂಡಾಧಿಕಾರಿಗಳ ಕಚೇರಿವರೆಗೆ ಪ್ರತಿಭಟನಾಕಾರರು ಮೆರವಣಿಗೆ ನಡೆಸಿ, ತಾಲೂಕು ದಂಡಾಧಿಕಾರಿಗಳ ಕಚೇರಿಗೆ ಮುತ್ತಿಗೆ ಹಾಕಲು ಮುಂದಾದರು. ಈ ವೇಳೆ ಪೊಲೀಸರು ಪ್ರತಿಭಟನಾಕಾರರನ್ನು ವಶಕ್ಕೆ ಪಡೆದು ಮಹಾತ್ಮ ಗಾಂಧಿ ಕ್ರೀಡಾಂಗಣಕ್ಕೆ ಕರೆದೊಯ್ದು ಬಿಡುಗಡೆ ಮಾಡಿದರು.

ಪ್ರತಿಭಟನೆಯ ನೇತೃತ್ವ ವಹಿಸಿದ್ದ ಕೆ.ಜಿ.ವಿರೇಶ ಹಾಗೂ ಡಿ.ಎಸ್.ಶರಣಬಸವ ಮಾತನಾಡಿ, ಕಾರ್ಮಿಕ ಸಂಘಟನೆಗಳ ನಿರಂತರ ಹೋರಾಟದ ಫಲವಾಗಿ ಮೇ 22, 2026ರಂದು ವೈಜ್ಞಾನಿಕ ಲೆಕ್ಕಾಚಾರ

3 ನೇ ಪುಟಕ್ಕೆ

ಕೊಲೆ ಪ್ರಕರಣದಿಂದ ಭೀಮರಾಯ ಹದ್ದಿನಾಳ ಕೈಬಿಡಲು ಎನ್. ರಘುವೀರ ನಾಯಕ ಆಗ್ರಹ



ರಾಯಚೂರು,ಆ.10-

ದೇವದುರ್ಗ ತಾಲೂಕಿನ ಸುಂಕೇಶ್ವರಹಾಳ ಗ್ರಾಮದಲ್ಲಿ ನಡೆದ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಹಿರಿಯ ಪತ್ರಕರ್ತ ಹಾಗೂ ಸಂಪಾದಕ ಭೀಮರಾಯ ಹದ್ದಿನಾಳ ಅವರನ್ನು ದುರುದ್ದೇಶಪೂರ್ವಕವಾಗಿ ಪ್ರಕರಣದಲ್ಲಿ ಸಿಲುಕಿಸಲಾಗಿದೆ ಎಂಬ ಅನುಮಾನವಿದ್ದು, ಸಮಗ್ರ ತನಿಖೆ ನಡೆಸಿ ಅವರ ವಿರುದ್ಧದ ಆರೋಪವನ್ನು ಕೈಬಿಡಬೇಕು ಎಂದು ಹೈದರಾಬಾದ್ ಕರ್ನಾಟಕ ಪ್ರದೇಶ ವಾಲ್ಮೀಕಿ ನಾಯಕ ಸಂಘದ ವಿಭಾಗೀಯ ಕಾರ್ಯದರ್ಶಿ ಎನ್. ರಘುವೀರ ನಾಯಕ ಆಗ್ರಹಿಸಿದರು.

ನಗರದ ಪತ್ರಿಕಾ ಭವನದಲ್ಲಿ ಸೋಮವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗಬ್ಬೂರು ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣ ಸಂಖ್ಯೆ 104/2026ರಲ್ಲಿ ಭೀಮರಾಯ ಹದ್ದಿನಾಳ ಅವರನ್ನು 8ನೇ ಆರೋಪಿಯನ್ನಾಗಿ ಸೇರಿಸಲಾಗಿದೆ. ಮಧ್ಯಾಹ್ನ 3 ಗಂಟೆಗೆ ದಾಖಲಾದ ಪ್ರಾಥಮಿಕ ಎಫ್‌ಐಆರ್‌ನಲ್ಲಿ ಅವರ ಹೆಸರು ಇರಲಿಲ್ಲ. ಬಳಿಕ ಸಂಜೆ 6 ಗಂಟೆಗೆ ಎಫ್‌ಐಆರ್ ತಿದ್ದುಪಡಿ ಮಾಡಿ ಹೆಸರು ಸೇರ್ಪಡೆ ಮಾಡಲಾಗಿದೆ ಎಂದು ಆರೋಪಿಸಿದರು.

ಪ್ರಕರಣಕ್ಕೆ ಯಾವುದೇ ಸಂಬಂಧವಿಲ್ಲದ

3 ನೇ ಪುಟಕ್ಕೆ

ವರ್ಷಧಾರೆಯಿಲ್ಲದೆ ಬರಗಾಲ; ವಲಸೆ ತಡೆಗೆ ವಿಬಿ - ಜಿ ರಾಮ್ ಜಿ ಆಸರೆ - ಪರಿಣಾಮಕಾರಿ ಅನುಷ್ಠಾನಕ್ಕೆ ಸಚಿವ ಈಶ್ವರ ಬಿ. ಖಂಡ್ರೆ ಸೂಚನೆ



ಬಳ್ಳಾರಿ,ಆ.10-

ಜಿಲ್ಲೆಯಲ್ಲಿ ಮಳೆಯ ಪ್ರಮಾಣ ಕಡಿಮೆಯಾಗಿದ್ದು, ಕೃಷಿ ಚಟುವಟಿಕೆಗಳು ಕ್ಷೀಣಿಸಿರುವುದರಿಂದ ಜನರು ಉದ್ಯೋಗ ಅರಸಿ ನಗರಗಳಿಗೆ ವಲಸೆ ಹೋಗುವ ಸಾಧ್ಯತೆಯಿದೆ. ಗ್ರಾಮೀಣ ಭಾಗದಲ್ಲೇ ಪ್ರತಿಯೊಬ್ಬ ಅರ್ಹ ಕೂಲಿಕಾರನಿಗೆ ವಿ ಬಿ - ಜಿ ರಾಮ್ ಜಿ ಯೋಜನೆಯಡಿ ಕೆಲಸ ನೀಡುವ ಮೂಲಕ ವಲಸೆಯನ್ನು ತಡೆಯಬೇಕು ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಬಿ. ಖಂಡ್ರೆ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಗರದ ಜಿಲ್ಲಾ ಪಂಚಾಯತ್ ನ ಹೊಸ ಅಬ್ದುಲ್ ನಜೀರ್ ಸಾಬ್ ಸಭಾಂಗಣದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿ ಗ್ರಾಮೀಣ ಭಾಗದ ಜನರಿಗೆ ಸ್ಥಳೀಯವಾಗಿಯೇ ಉದ್ಯೋಗ ಒದಗಿಸುವ ನಿಟ್ಟಿನಲ್ಲಿ 'ವಿಕಸಿತ್ ಭಾರತ್ - ಗ್ಯಾರಂಟಿ ಫಾರ್ ರೋಜ್‌ಗಾರ್ ಮತ್ತು ಆಜೀವಿಕಾ ಮಿಷನ್ (ಗ್ರಾಮೀಣ)' ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಬೇಕು ಎಂದು ತಿಳಿಸಿದರು.

ಜಿಲ್ಲೆಯಲ್ಲಿ ಜೂನ್ ತಿಂಗಳವರೆಗೆ ನಿಗದಿಪಡಿಸಿದ್ದ ಮಾನವ ದಿನಗಳ ಸೃಷ್ಟಿಯ ಗುರಿಯಲ್ಲಿ ಶೇ. 46 ರಷ್ಟು ಮಾತ್ರ ಸಾಧನೆಯಾಗಿದ್ದು, ನಿರೀಕ್ಷಿತ ಮಟ್ಟ ತಲುಪದಿರುವ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ ಸಚಿವರು, ಜಿಲ್ಲೆಯಲ್ಲಿ ಪ್ರಸಕ್ತ ವರ್ಷಕ್ಕೆ ಒಟ್ಟು 51.30 ಲಕ್ಷ ಮಾನವ ದಿನಗಳ ಸೃಷ್ಟಿಯ ಗುರಿ ಹೊಂದಲಾಗಿದೆ. ಜುಲೈ ತಿಂಗಳಿನಿಂದ ಉದ್ಯೋಗ ಸೃಷ್ಟಿ ವೇಗವನ್ನು ಹೆಚ್ಚಿಸಬೇಕಿದ್ದು, ಪ್ರತಿ ತಿಂಗಳು ಕನಿಷ್ಠ 5 ರಿಂದ 6 ಲಕ್ಷ ಮಾನವ ದಿನಗಳನ್ನು ಸೃಷ್ಟಿಸುವಂತೆ ಸಚಿವರು ನಿರ್ದೇಶನ ನೀಡಿದರು.

ಜಿಲ್ಲೆಯಲ್ಲಿ ಒಟ್ಟು 1.84 ಲಕ್ಷ ಸಕ್ರಿಯ ಜಾಬ್ ಕಾರ್ಡ್‌ಗಳಿದ್ದು, 4.60 ಲಕ್ಷ ಕಾರ್ಮಿಕರಿದ್ದಾರೆ. ಇದರಲ್ಲಿ ಸುಮಾರು 1.30 ಲಕ್ಷ ಜಾಬ್ ಕಾರ್ಡ್‌ಗಳಿಗೆ ಇ-ಕೆವೈಸಿ ಪ್ರಕ್ರಿಯೆ ಪೂರ್ಣಗೊಂಡಿದೆ. ಆದಷ್ಟು ಬೇಗ ಬಾಕಿ ಇರುವ ಪ್ರಕ್ರಿಯೆ ಮುಗಿಸುವಂತೆ ತಿಳಿಸಿದರು.

★ಬಳ್ಳಾರಿ ತಾಲೂಕು ಸಾಧನೆಗೆ ಅಸಮಾಧಾನ:★

ಬಳ್ಳಾರಿ ತಾಲೂಕಿನಲ್ಲಿ 48,000 ಸಕ್ರಿಯ ಜಾಬ್ ಕಾರ್ಡ್‌ಗಳಿದ್ದರೂ ದಿನಕ್ಕೆ ಕೇವಲ 11,000 ದಷ್ಟು ಕಾರ್ಮಿಕರಿಗೆ ಮಾತ್ರ ಕೆಲಸ ನೀಡುತ್ತಿರುವುದಕ್ಕೆ ಸಚಿವರು ಅಸಮಾಧಾನ ವ್ಯಕ್ತಪಡಿಸಿದರು. ಇದಕ್ಕೆ ಬಳ್ಳಾರಿ ತಾಲೂಕು ಇಓ ಪ್ರತಿಕ್ರಿಯಿಸಿ, ಹಳೆಯ ಕಾಮಗಾರಿಗಳು ಪೂರ್ಣಗೊಂಡಿದ್ದು, ಹೊಸ ಕಾಮಗಾರಿಗಳಿಗೆ ಆಕ್ಷನ್ ಪ್ಲಾನ್ ಸಿದ್ಧಪಡಿಸಿ ಉದ್ಯೋಗ ನೀಡುವುದರಲ್ಲಿ ವಿಳಂಬವಾಗುತ್ತಿದೆ ಎಂದು ವಿವರಿಸಿದರು. ಇದಕ್ಕೆ ಸಚಿವರು ಸಾಬೂಬುಗಳನ್ನು ನೀಡದೆ ವೈಯಕ್ತಿಕ ಹಾಗೂ ಸಮುದಾಯ ಆಧಾರಿತ ಕಾಮಗಾರಿಗಳನ್ನು ತಕ್ಷಣವೇ ಪ್ರಾರಂಭಿಸಬೇಕು ಎಂದು ಎಚ್ಚರಿಸಿದರು.

ವಿ ಬಿ - ಜಿ ರಾಮ್ ಜಿ ಯೋಜನೆಯ ಸ್ವರೂಪ ಬದಲಾವಣೆಯಿಂದಾಗಿ ಆರಂಭದಲ್ಲಿ ಕೆಲವೊಂದು ಗೊಂದಲಗಳಿದ್ದವು. ಆದರೆ, ಈಗ ಆ ಗೊಂದಲಗಳಿಗೆ ಸ್ಪಷ್ಟೀಕರಣ ದೊರೆತಿದ್ದು, ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲಾಗಿದೆ. ಈವರೆಗೆ ಬೃಹತ್ ಪ್ರಮಾಣದ ಅನುದಾನ ವೆಚ್ಚಮಾಡಲಾಗಿದೆ. ಪ್ರಸಕ್ತ ಸಾಲಿನಲ್ಲಿ ಬಲವಾದ ಹಣಕಾಸು ಬೆಂಬಲ ಒದಗಿಸಲಾಗಿದ್ದು, ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರದ ಅನುದಾನದ ಸಹಯೋಗದೊಂದಿಗೆ ಯೋಜನೆ ಮುನ್ನಡೆಯುತ್ತಿದೆ ಎಂದು ತಿಳಿಸಿದರು.

★ಅಧಿಕಾರಿಗಳೇ ಹೊಣೆ:★

ಜಿಲ್ಲೆಯಲ್ಲಿ ಬಡವರು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಗಳ ಜನರು ಕೆಲಸ ಅರಸಿ ಬೇರೆಡೆ ವಲಸೆ ಹೋಗುವುದನ್ನು ತಡೆಯುವುದು ಸರ್ಕಾರದ ಪ್ರಮುಖ ಆದ್ಯತೆಯಾಗಿದೆ. ಯಾವುದೇ ಪ್ರದೇಶದಿಂದ ಜನರು ಕೆಲಸ ಸಿಗದೆ ವಲಸೆ ಹೋದರೆ, ಅದಕ್ಕೆ ಸಂಬಂಧಪಟ್ಟ ಇಓ, ಪಿಡಿಓ ಅಧಿಕಾರಿಗಳನ್ನೇ ಜವಾಬ್ದಾರರನ್ನಾಗಿ ಮಾಡಲಾಗುವುದು. ಜನರು ವಲಸೆ ಹೋಗಿದ್ದರೆ, ಅವರು ಯಾವ ಕಾರಣಕ್ಕಾಗಿ ತೆರಳಿದ್ದಾರೆ ಎಂಬುದಕ್ಕೆ ಅಧಿಕಾರಿಗಳು ಸ್ಪಷ್ಟ ವಿವರಣೆ ಮತ್ತು ಮಾಹಿತಿ ನೀಡಬೇಕಾಗುತ್ತದೆ ಎಂದು ಎಚ್ಚರಿಸಿದರು.

★ನಿಗಾ ಮತ್ತು ಶೀಘ್ರ ವೇತನ ಪಾವತಿ:★

ಉದ್ಯೋಗ ಖಾತರಿ ಯೋಜನೆಯಡಿ ನಿರಂತರ ನಿಗಾ ವಹಿಸಬೇಕು. ಬಡ ಕಾರ್ಮಿಕರಿಗೆ ಗ್ರಾಮ ಮಟ್ಟದಲ್ಲೇ ಕೂಲಿ ಉದ್ಯೋಗ ಒದಗಿಸಿ, ಅವರ ಬ್ಯಾಂಕ್ ಖಾತೆಗಳಿಗೆ ನಿಯಮಿತವಾಗಿ ಕೂಲಿ ಹಣ ಜಮೆಯಾಗುವಂತೆ ನೋಡಿಕೊಳ್ಳಬೇಕು. ಒಮ್ಮೆ ಕಾರ್ಮಿಕರ ಖಾತೆಗೆ ಹಣ ನೇರವಾಗಿ ಜಮೆಯಾದರೆ, ಯೋಜನೆಯ ಬಗ್ಗೆ ಅವರಲ್ಲಿ ನಂಬಿಕೆ ಮತ್ತು ಆಸಕ್ತಿ ಹೆಚ್ಚಾಗುತ್ತದೆ. ಹಾಗಾಗಿ, ಯೋಜನೆಗೆ ಹೆಚ್ಚಿನ ಆದ್ಯತೆ ನೀಡಿ, ಯಾವುದೇ ರೀತಿಯ ಲೋಪದೋಷಗಳಿಲ್ಲದೆ ಅತ್ಯಂತ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಬೇಕು ಎಂದು ಸಚಿವರು ಅಧಿಕಾರಿಗಳಿಗೆ ಸ್ಪಷ್ಟ ನಿರ್ದೇಶನ ನೀಡಿದರು.

★ಹಣಕಾಸಿನ ಕೊರತೆಯಿಲ್ಲ:★

ವಿ ಬಿ - ಜಿ ರಾಮ್ ಜಿ ಯೋಜನೆಗೆ ಅನುದಾನದ ಕೊರತೆಯಿಲ್ಲ. ಈಗಾಗಲೇ ಜಿಲ್ಲಾ ಪಂಚಾಯಿತಿಗಳಿಗೆ ರೂ.1,000 ಕೋಟಿಗೂ ಹೆಚ್ಚು ಹಣ ಬಿಡುಗಡೆ ಮಾಡಲಾಗಿದೆ. ಮೊದಲ ತ್ರೈಮಾಸಿಕದಲ್ಲಿ ರಾಜ್ಯ ಸರ್ಕಾರ ರೂ.1,200 ಕೋಟಿ ಹಾಗೂ ಕೇಂದ್ರ ಸರ್ಕಾರ ರೂ.1,700 ಕೋಟಿ ಅನುದಾನ ಒದಗಿಸಿದೆ. ಯೋಜನೆ ಅನುಷ್ಠಾನದಲ್ಲಿ ಸಂಪೂರ್ಣ ಪಾರದರ್ಶಕತೆ ಕಾಯ್ದುಕೊಳ್ಳಬೇಕು ಮತ್ತು ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ಕಾಮಗಾರಿ ಸ್ಥಳಕ್ಕೆ ಅಧಿಕಾರಿಗಳು ಖುದ್ದಾಗಿ ಭೇಟಿ ನೀಡಿ ಪರಿಶೀಲಿಸಬೇಕು, ಕೇವಲ ದಾಖಲೆಗಳಲ್ಲಿ ಕೆಲಸ ತೋರಿಸುವುದನ್ನು ಸಹಿಸುವುದಿಲ್ಲ ಎಂದು ಎಚ್ಚರಿಸಿದರು. ಕೇವಲ ಮೇಲಧಿಕಾರಿಗಳಷ್ಟೇ ಅಲ್ಲದೆ, ತಾಂತ್ರಿಕ ಸೂಪರ್‌ವೈಸರ್‌ಗಳು, ಇಓ ಹಾಗೂ ಐಇಸಿ ಸಂಯೋಜಕರು ಸಹ ಕ್ಷೇತ್ರಮಟ್ಟದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ಕೆಲಸ ನಿರ್ವಹಿಸಬೇಕು. ಪ್ರತಿಯೊಬ್ಬ ಅರ್ಹ ಕಾರ್ಮಿಕನಿಗೂ ಸಮಯಕ್ಕೆ ಸರಿಯಾಗಿ ಕೂಲಿ ಸಿಗುವಂತೆ ನೋಡಿಕೊಳ್ಳುವುದು ಅಧಿಕಾರಿಗಳ ಜವಾಬ್ದಾರಿಯಾಗಿದ್ದು, ಸಾರ್ವಜನಿಕ ಹಣದ ಸರಿಯಾದ ಬಳಕೆ ಹಾಗೂ ಪಾರದರ್ಶಕ ಆಡಳಿತಕ್ಕೆ ಮೊದಲ ಆದ್ಯತೆ ನೀಡಬೇಕೆಂದು ಎಂದು ಸಚಿವರು ನಿರ್ದೇಶನ ನೀಡಿದರು.

★ನೀರಾವರಿ ಕಾಲುವೆ ಹಾಗೂ ಫೀಲ್ಡ್ ಚಾನೆಲ್ ನಿರ್ಮಾಣ:★

ಮುಖ್ಯ ನೀರಾವರಿ ಕಾಲುವೆಗಳಿಂದ ಕೊನೆಯ ಹಂತದ ರೈತರ ಜಮೀನುಗಳಿಗೆ ನೀರು ತಲುಪಿಸಲು ಅಗತ್ಯವಿರುವ 'ಫೀಲ್ಡ್ ಚಾನೆಲ್' ಹಾಗೂ ಎಫ್‌ಐಸಿ ನಿರ್ಮಾಣ ಕಾರ್ಯಕ್ಕೆ ಆದ್ಯತೆ ನೀಡಬೇಕು. ಸಣ್ಣ ನೀರಾವರಿ ಹಾಗೂ ನೀರಾವರಿ ಇಲಾಖೆಯ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ, ನೀರು ಪೋಲಾಗದಂತೆ ರೈತರ ಹೊಲಗಳಿಗೆ ತಲುಪಿಸುವ ಕಾಮಗಾರಿಗಳನ್ನು ಪ್ರಥಮ ಆದ್ಯತೆಯಲ್ಲಿ ಹಮ್ಮಿಕೊಳ್ಳಲು ನಿರ್ದೇಶನ ನೀಡಿದರು.

★24 ಗಂಟೆಗಳಲ್ಲಿ ಜಾಬ್ ಕಾರ್ಡ್ ವಿತರಣೆ:★

ಸಾರ್ವಜನಿಕರು ಅಥವಾ ಕೂಲಿ ಕಾರ್ಮಿಕರು ನರೇಗಾ ಉದ್ಯೋಗಕ್ಕಾಗಿ ಬೇಡಿಕೆ ಸಲ್ಲಿಸಿದರೆ ಅಥವಾ ಜಾಬ್ ಕಾರ್ಡ್‌ಗೆ ಅರ್ಜಿ ಸಲ್ಲಿಸಿದರೆ, ಪರಿಶೀಲನೆ ನಡೆಸಿ 24 ಗಂಟೆಗಳ ಒಳಗೆ ಜಾಬ್ ಕಾರ್ಡ್ ವಿತರಿಸಬೇಕು. ಉದ್ಯೋಗ ಬೇಡಿಕೆ ಸಲ್ಲಿಸಿದರೂ ಕೆಲಸ ಸಿಗಲಿಲ್ಲ ಅಥವಾ ಜಾಬ್ ಕಾರ್ಡ್ ನೀಡುವಲ್ಲಿ ಅನಗತ್ಯ ವಿಳಂಬವಾಯಿತು ಎಂಬ ದೂರುಗಳು ಸಾರ್ವಜನಿಕರಿಂದ ಬರಬಾರದು ಎಂದರು.

ಗ್ರಾಮೀಣ ಭಾಗದ ಪ್ರತಿಯೊಂದು ಮನೆಗೂ ಕಲುಷಿತ ಮುಕ್ತ ಹಾಗೂ ಶುದ್ಧ ಕುಡಿಯುವ ನೀರನ್ನು ತಲುಪಿಸುವುದು ಸರ್ಕಾರದ ಮುಖ್ಯ ಆದ್ಯತೆಯಾಗಿದ್ದು, ಕಾಮಗಾರಿಗಳಲ್ಲಿ ಯಾವುದೇ ರೀತಿಯ ವಿಳಂಬ ಹಾಗೂ ಅಸಡ್ಡೆಯನ್ನು ಸಹಿಸುವುದಿಲ್ಲ ಎಂದು ಅಧಿಕಾರಿಗಳಿಗೆ ತಿಳಿಸಿದರು.

ಜಲಜೀವನ್ ಮಿಷನ್ ಕಾಮಗಾರಿಗಾಗಿ ತೋಡಲಾದ ರಸ್ತೆಗಳನ್ನು ಸರಿಯಾಗಿ ಮರುನಿರ್ಮಾಣ ಮಾಡಿಲ್ಲ. ಪೈಪ್‌ಲೈನ್ ಅಳವಡಿಕೆ ಪೂರ್ಣಗೊಂಡ ತಕ್ಷಣ ರಸ್ತೆಗಳನ್ನು ಹಳೆಯ ಸ್ಥಿತಿಗೆ ತರುವುದು ಗುತ್ತಿಗೆದಾರರು ಮತ್ತು ಎಂಜಿನಿಯರ್‌ಗಳ ಜವಾಬ್ದಾರಿಯಾಗಿದೆ ಎಂದು ತಿಳಿಸಿದರು.

ಗ್ರಾಮ ಪಂಚಾಯಿತಿ ಅಧಿಕಾರಿಗಳು ಮತ್ತು ಎಂಜಿನಿಯರ್‌ಗಳು ಜಂಟಿಯಾಗಿ ಕಾರ್ಯನಿರ್ವಹಿಸಿ, ಜಲಜೀವನ್ ಮಿಷನ್ ಯೋಜನೆಯನ್ನು ಸಂಪೂರ್ಣವಾಗಿ ಯಶಸ್ವಿಗೊಳಿಸಬೇಕು ಎಂದು ಸೂಚಿಸಿದ ಅವರು, ತೆರಿಗೆ ಸಂಗ್ರಹದಲ್ಲಿ ವೇಗ ನೀಡಬೇಕು. ಜಿಲ್ಲೆಯ ಎಲ್ಲಾ ಸಾರ್ವಜನಿಕ ಗ್ರಂಥಾಲಯಗಳ ಪುಸ್ತಕ ದಾಸ್ತಾನು, ನಿರ್ವಹಣೆ, ಡಿಜಿಟಲ್ ಸೌಲಭ್ಯ ಒದಗಿಸುವಂತೆ ತಿಳಿಸಿದರು.

★ಮನೆ-ಮನೆಗೆ ತೆರಳಿ ಇ-ಸ್ವತ್ತು ವಿತರಣೆ:★

ಸಾರ್ವಜನಿಕರು ಕಚೇರಿಗಳಿಗೆ ಅಲೆಯುವುದನ್ನು ತಪ್ಪಿಸಲು ಅಧಿಕಾರಿಗಳು ಹಾಗೂ ಸಿಬ್ಬಂದಿ ಹೆಚ್ಚುವರಿ ಶ್ರಮ ವಹಿಸಿ ಮನೆ-ಮನೆಗೆ ತೆರಳಿ ಸ್ವತ್ತುಗಳ ಇ-ಸ್ವತ್ತು ಮತ್ತು ಖಾತಾ ದಾಖಲೆಗಳನ್ನು ನೀಡಲು ಯೋಜನೆ ರೂಪಿಸಲಾಗಿದೆ. ಈಗಾಗಲೇ ಡ್ರಾಫ್ಟ್ ಖಾತಾ ತಯಾರಾಗಿದ್ದು, ಯಾವುದೇ ಅನಗತ್ಯ ವ್ಯಕ್ತಿಗಳಿಗೆ ಅಥವಾ ಮೂರನೇ ವ್ಯಕ್ತಿಗಳಿಗೆ ಖಾತಾ ವರ್ಗಾವಣೆಗೆ ಅವಕಾಶವಿರುವುದಿಲ್ಲ. ಯಾರು ಮೂಲ ಮಾಲೀಕರಿದ್ದಾರೋ ಅವರಿಗೆ ಮಾತ್ರವೇ ಖಾತೆಗಳನ್ನು ನೀಡಬೇಕು ಎಂದು ತಿಳಿಸಿದರು.

ಇದೇ ವೇಳೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಕ್ಯಾಲೆಂಡರ್ ಬಿಡುಗಡೆ ಮಾಡಿದರು.

ಸಭೆಯಲ್ಲಿ ಡಾ.ಬಾಬು ಜಗನ್ ಜೀವನ್ ರಾಮ್ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದ ಅಧ್ಯಕ್ಷ ಮುಂಡರಗಿ ನಾಗರಾಜ, ಬಳ್ಳಾರಿ ಮಹಾನಗರ ಪಾಲಿಕೆಯ ಮೇಯರ್ ಪಿ.ಗಾದೆಪ್ಪ, ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯದ ಆಯುಕ್ತರಾದ ಡಾ.ಅರುಂಧತಿ ಚಂದ್ರಶೇಖರ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಹಮ್ಮದ್ ಹಾರೀಸ್ ಸುಮೇರ್, ಜಿಪಂ ಉಪಕಾರ್ಯದರ್ಶಿ ಶಶಿಕಾಂತ್ ಶಿವಪುರೆ, ಜಿಪಂ ಮುಖ್ಯ ಯೋಜನಾಧಿಕಾರಿ ವಾಗೀಶ್ ಶಿವಾಚಾರ್ಯ, ಜಿಪಂ ಮುಖ್ಯ ಲೆಕ್ಕಾಧಿಕಾರಿ ವಿನೋದ್ ಹಾಗೂ ಜಿಲ್ಲೆಯ ವಿವಿಧ ತಾಲೂಕುಗಳ ತಾಪಂ ಇಓ ಗಳು, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಹಾಗೂ ಇತರರು ಉಪಸ್ಥಿತರಿದ್ದರು.

ಬಂಜಾರಾ ನೌಕರರ 4ನೇ ವಾರ್ಷಿಕ ಕ್ರೀಡಾಕೂಟಕ್ಕೆ ಅದ್ದೂರಿ ಚಾಲನೆ



ಕಲಬುರಗಿ,ಆ.10-

ಕ್ರೀಡೆ ದೈಹಿಕ ಆರೋಗ್ಯದ ಜೊತೆಗೆ ಮಾನಸಿಕ ಉಲ್ಲಾಸ, ಶಿಸ್ತು, ಸಮಯಪಾಲನೆ ಹಾಗೂ ಸಂಘಟನಾ ಮನೋಭಾವ ಬೆಳೆಸಲು ಸಹಕಾರಿಯಾಗಿದೆ ಎಂದು ಚಿಂಚೋಳಿ ಶಾಸಕ ಅವಿನಾಶ ಜಾಧವ್ ಹೇಳಿದರು.

ನಗರದ ಚಂದ್ರಶೇಖರ ಪಾಟೀಲ್ ಕ್ರೀಡಾಂಗಣದಲ್ಲಿ ರವಿವಾರ ಬಂಜಾರಾ ಸರ್ಕಾರಿ ಮತ್ತು ಅರೆ ಸರ್ಕಾರಿ ನೌಕರರ ಸಂಘದ ಜಿಲ್ಲಾ ಘಟಕದ ವತಿಯಿಂದ ಆಯೋಜಿಸಿದ್ದ ಬಂಜಾರಾ ನೌಕರರ 4ನೇ ವಾರ್ಷಿಕ ಕ್ರೀಡಾಕೂಟಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ವೃತ್ತಿ ಜೀವನದ ಒತ್ತಡದ ನಡುವೆಯೂ ನೌಕರರು ಕ್ರೀಡೆಯಲ್ಲಿ ಉತ್ಸಾಹದಿಂದ ಪಾಲ್ಗೊಳ್ಳುತ್ತಿರುವುದು ಶ್ಲಾಘನೀಯ. ಕ್ರೀಡೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುವುದರಿಂದ ದೈಹಿಕ ಸಾಮರ್ಥ್ಯದ ಜತೆಗೆ ಮಾನಸಿಕ ನೆಮ್ಮದಿ ಹಾಗೂ ಸ್ಪರ್ಧಾತ್ಮಕ ಮನೋಭಾವವೂ ವೃದ್ಧಿಯಾಗುತ್ತದೆ ಎಂದರು.

ಕಲಬುರಗಿ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಬಸವರಾಜ ಬಳ್ಳೂಂಡಗಿ ಮಾತನಾಡಿ, ನೌಕರರ ನಡುವೆ ಕ್ರೀಡಾ ಮನೋಭಾವ ಬೆಳೆಸುವುದರೊಂದಿಗೆ ಪರಸ್ಪರ ಸೌಹಾರ್ದತೆ, ಸ್ನೇಹಭಾವ ಮತ್ತು ಒಗ್ಗಟ್ಟು ಹೆಚ್ಚಿಸಲು ಇಂತಹ ಕ್ರೀಡಾಕೂಟಗಳು ಸಹಕಾರಿಯಾಗುತ್ತವೆ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಬಂಜಾರಾ ಸರ್ಕಾರಿ ಮತ್ತು ಅರೆ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಹರಿಶ್ಚಂದ್ರ ಎಸ್. ರಾಠೋಡ ಮಾತನಾಡಿ, ಬಂಜಾರಾ ಸಮುದಾಯದ ನೌಕರರಲ್ಲಿ ಪರಸ್ಪರ ಸೌಹಾರ್ದತೆ, ಸ್ನೇಹಭಾವ ಹಾಗೂ ಸಂಘಟನಾ ಮನೋಭಾವ ಬೆಳೆಸುವ ಉದ್ದೇಶದಿಂದ ಪ್ರತಿವರ್ಷ ಕ್ರೀಡಾಕೂಟ ಆಯೋಜಿಸಲಾಗುತ್ತಿದೆ. ಇದು ನೌಕರರ ದೈಹಿಕ ಹಾಗೂ ಮಾನಸಿಕ ಕ್ಷಮತೆ ಹೆಚ್ಚಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ ಎಂದರು.

ಕ್ರೀಡಾಕೂಟದಲ್ಲಿ ಕ್ರಿಕೆಟ್ ಸೇರಿದಂತೆ ವಿವಿಧ ಕ್ರೀಡಾ ಸ್ಪರ್ಧೆಗಳನ್ನು ಆಯೋಜಿಸಲಾಗಿದ್ದು, ಜಿಲ್ಲೆಯ ವಿವಿಧೆಡೆ ಕಾರ್ಯನಿರ್ವಹಿಸುತ್ತಿರುವ ಬಂಜಾರಾ ಸಮುದಾಯದ ಸರ್ಕಾರಿ ಹಾಗೂ ಅರೆ ಸರ್ಕಾರಿ ನೌಕರರು ತಂಡೋಪತಂಡವಾಗಿ ಉತ್ಸಾಹದಿಂದ ಪಾಲ್ಗೊಂಡರು. ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ಹಾಗೂ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಕಲಬುರಗಿ ಉಪನಿರ್ದೇಶಕ ರಾಜಕುಮಾರ ಜಿ. ರಾಠೋಡ, ಕಲಬುರಗಿ ಜಿಲ್ಲೆಯ ಎಸಿಎಫ್ ಸುನೀಲಕುಮಾರ ಜಿ. ಚವ್ಹಾಣ, ಸಂಘದ ಗೌರವಾಧ್ಯಕ್ಷ ಡಾ. ಪ್ರೇಮಸಿಂಗ ಚವ್ಹಾಣ, ಪ್ರಧಾನ ಕಾರ್ಯದರ್ಶಿ ಬಾಬು ಎಂ. ಜಾಧವ, ತಾರಾನಾಥ್ ಚೌಹಾಣ್, ಧನರಾಜ್ ಚೌಹಾಣ್, ಸತೀಶ್ ಚೌಹಾಣ್, ಶಿವರಾಮು ರಾಠೋಡ್, ಪ್ರಭು ಜಾಧವ್ ಸೇರಿದಂತೆ ಸಂಘದ ಪದಾಧಿಕಾರಿಗಳು, ನಿವೃತ್ತ ಸರ್ಕಾರಿ ಹಾಗೂ ಅರೆ ಸರ್ಕಾರಿ ನೌಕರರ ಸಂಘದ ಪದಾಧಿಕಾರಿಗಳು ಮತ್ತು ವಿವಿಧ ಇಲಾಖೆಗಳ ನೌಕರರು ಉಪಸ್ಥಿತರಿದ್ದರು.

ಒಲವಿನ ಮಾತುಗಳು ಕವಯಿತ್ರಿಯ ಕವನಗಳಲ್ಲಿ ಒಡಮೂಡಿವೆ: ಅಪರ ಜಿಲ್ಲಾಧಿಕಾರಿ



ಬಳ್ಳಾರಿ,ಆ.10-

ಒತ್ತಡದ ಬದುಕಿನಲ್ಲಿ ಅರಳಿದ, ಪ್ರೀತಿಯ ಪರಿಮಳವನ್ನು ತುಂಬಿದ ಭಾವಗಳು ಕಾವ್ಯದಲ್ಲಿ ಒಡಮೂಡಿವೆ ಎಂದು ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್.ಎನ್ ಅವರು ಅಭಿಪ್ರಾಯಪಟ್ಟರು.

ಭಾನುವಾರ ನಗರದ ಕನ್ನಡ ಭವನದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಜಿಲ್ಲಾ ಘಟಕ, ಬಸವ ಪಬ್ಲಿಕೇಷನ್ಸ್, ಸಂಡೂರು ಇವರ ಸಹಯೋಗದಲ್ಲಿ ಆಯೋಜಿಸಿದ್ದ ಕವಯಿತ್ರಿ ಟಿ. ಲೀಲಾವತಿ (ಸಾಯಿಲೀಲಾ) ಅವರ 'ಒಲವು ಮೂಡಿದಾಗ' ಕವನ ಸಂಕಲನ ಲೋಕಾರ್ಪಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಉದ್ಯೋಗದ ನಡುವೆ ಸಾಹಿತ್ಯದ ಪ್ರೀತಿಯನ್ನು ಬೆಳೆಸಿಕೊಂಡಿರುವ ಲೀಲಾವತಿಯವರು ಕನ್ನಡ ಸಾಹಿತ್ಯಕ್ಕೆ ಹೆಚ್ಚಿನ ಕೊಡುಗೆ ನೀಡಲಿ ಎಂದು ತಿಳಿಸಿದರು.

ಒಲವು ಮೂಡಿದಾಗ ಕವನ ಸಂಕಲನವನ್ನು ಲೋಕಾರ್ಪಣೆ ಮಾಡಿದ ಕುರುಗೋಡಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಡಾ. ಶಾಂತಲಾ ಅವರು ಮಾತನಾಡಿ, ಈ ಕವನ ಸಂಕಲನದ ಕವನಗಳೆಲ್ಲವೂ ಸಹ ನಮ್ಮ ಸುತ್ತಮುತ್ತಲಿನ ಘಟನೆಗಳಿಗೆ ಸಂಬಂಧಿಸಿವೆ. ಕೌಟುಂಬಿಕ ಸಾಮರಸ್ಯ, ಒಲವು, ಸಾಮಾಜಿಕ ಕಳಕಳಿ ಕವನಗಳ ಜೀವಾಳವಾಗಿದ್ದು, ಕವಯತ್ರಿ ಲೀಲಾವತಿಯವರ ಅವರ ಸಾಹಿತ್ಯದ ಅಭಿರುಚಿ ಹೀಗೆ ಮುಂದುವರೆಯಲಿ ಎಂದು ಶುಭ ಹಾರೈಸಿದರು.

ಡಾ. ವೇಣುಗೋಪಾಲ ಎನ್. ಎಸ್ ಕೃತಿ ಕುರಿತು ಮಾತನಾಡಿ, ಜ್ಞಾನದ ಹಸಿವನ್ನು ಹೊಂದಿದ ಪ್ರೀತಿಯ ವಿದ್ಯಾರ್ಥಿನಿ ಲೀಲಾವತಿ ಅವರು 'ಒಲವು ಮೂಡಿದಾಗ' ಎಂಬ ಕವನ ಸಂಕಲನವನ್ನು ಹೊರ ತರುತ್ತಿರುವುದು ತುಂಬಾ ಸಂತೋಷದ ಸಂಗತಿ. ಉದ್ಯೋಗ ಮತ್ತು ಸಂಸಾರಗಳ ನಡುವೆ ಸಾಹಿತ್ಯದ ಸದಭಿರುಚಿಯ ಸಹವಾಸ. ಇದರ ಪ್ರತಿಫಲವೇ ಈ ಕವನ ಸಂಕಲನ ಮೂಡಿಬಂದಿದೆ ಎಂದು ಹೇಳಿದರು.

ಇದರಲ್ಲಿ 35 ಕವನಗಳಿದ್ದು ಒಲುಮೆ, ಪುಸ್ತಕ ಪ್ರೀತಿ, ದೈವದ ಸ್ಮರಣೆ , ಹಸಿವು , ವಿಧಿ , ಸ್ನೇಹ, ವ್ಯಕ್ತಿ ಚಿತ್ರಣ, ನಿರಾಸೆ, ಛಲ ಮುಂತಾದ ಭಾವಗಳನ್ನು ಒಳಗೊಂಡ ಕವನಗಳು ಇವೆ. ಒಲುಮೆಗೆ ಸಂಬಂಧಿಸಿದ ಕವನಗಳೇ ಹೆಚ್ಚಾಗಿರುವುದರಿಂದ ಕವನ ಸಂಕಲನಕ್ಕೆ 'ಒಲವು ಮೂಡಿದಾಗ 'ಎಂಬ ಶೀರ್ಷಿಕೆ ಸೂಕ್ತವೆನಿಸಿದೆ. ಇಲ್ಲಿಯ ಕವನಗಳು ಅತ್ಯಂತ ಶಕ್ತಿಯುತವಾಗಿದ್ದು, ಆರಂಭದ ಕವನ ಸಂಕಲನ ಇದಾಗಿದ್ದು ಮುಂದಿನ ದಿನಗಳಲ್ಲಿ ಮತ್ತಷ್ಟು ಪ್ರಬುದ್ಧವಾದ ಕವನಗಳು ಈಕೆಯಿಂದ ಹೊರಹೊಮ್ಮಲಿ, ನಾಡಿನ ಎಲ್ಲರ ಮನೆ- ಮನಗಳಲ್ಲಿ ಈ ಸಾಹಿತ್ಯದ ಸುಗಂಧ ಹರಡಲಿ ಎಂದು ಶುಭ ಹಾರೈಸಿದರು. ಕವಿಯತ್ರಿ ಟಿ. ಲೀಲಾವತಿ ಮಾತನಾಡಿ 'ಸಾಯಿಲೀಲಾ' ಕಾವ್ಯನಾಮದಲ್ಲಿ ರಚಿಸಿದ ನನ್ನ ಮೊದಲ ಕವನ ಸಂಕಲನ ಒಲವು ಮೂಡಿದಾಗ ಪ್ರಕಟಗೊಳ್ಳುತ್ತಿ ರುವುದು ಸಂತಸದ ಸಂಗತಿ. ಈ ಕೃತಿಯ ಪ್ರಕಟಣೆಗೆ ಸಹಕರಿಸಿದ ಪ್ರತಿಯೊಬ್ಬರಿಗೂ ಧನ್ಯವಾದಗಳನ್ನು ತಿಳಿಸಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷರಾದ ಡಾ. ನಿಷ್ಠಿ ರುದ್ರಪ್ಪ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಕನ್ನಡ ಸಾಹಿತ್ಯ ಪರಿಷತ್ತು ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯಾಗಿದ್ದು ಸಾಹಿತ್ಯ ಸಂಸ್ಕೃತಿಯ ಸಂವರ್ಧನೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ, ಇಂತಹ ಕಾರ್ಯಕ್ರಮಗಳ ಆಯೋಜನೆಯ ಮೂಲಕ ಹೊಸ ಪ್ರತಿಭೆಗಳಿಗೆ ಅವಕಾಶವನ್ನು ನೀಡುವ ವೇದಿಕೆಯಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ. ನಾಗರಾಜ, ಜಿಲ್ಲಾ ಪರಿಶಿಷ್ಟ ವರ್ಗಗಳ ಅಧಿಕಾರಿ ಶಾಶು, ಜಿಲ್ಲಾ ಬಲಿಜ ಸಂಘದ ಅಧ್ಯಕ್ಷ ರಮೇಶ ಬುಜ್ಜಿ, ಮಹಾನಗರ ಪಾಲಿಕೆ ಸದಸ್ಯ ಹನುಮಂತಪ್ಪ, ಶ್ರೀ ಮಠಂ ತಿಪ್ಪೇಸ್ವಾಮಿ ಸೇರಿದಂತೆ ಕಂದಾಯ ಇಲಾಖೆಯ ಅಧಿಕಾರಿಗಳು, ಸಾಹಿತಿಗಳು ಮತ್ತು ಕನ್ನಡ ಅಭಿಮಾನಿಗಳು ಭಾಗವಹಿಸಿದ್ದರು.

ಕಾರ್ಯಕ್ರಮವನ್ನು ಡಾ. ತಿಪ್ಪೇರುದ್ರ ಸಂಡೂರು ನಿರೂಪಿಸಿದರು. ನಯನ ಪ್ರಾರ್ಥಿಸಿದರು, ರೇಣುಕಾ ಎಸ್. ಸ್ವಾಗತಿಸಿದರು.

ಶೈಕ್ಷಣಿಕವಾಗಿ, ಆರ್ಥಿಕವಾಗಿ ಸಬಲರಾದಾಗ ಮಾತ್ರ ಆದಿವಾಸಿಗಳ ಸಮಗ್ರ ಅಭಿವೃದ್ಧಿ ಸಾಧ್ಯ : ಮಾಣಿಕ್ ನೇಳಗಿ



ಬೀದರ್,ಆ.10-

ಬುಡಕಟ್ಟು ಸಮುದಾಯಗಳು ಶೈಕ್ಷಣಿಕ ಹಾಗೂ ಆರ್ಥಿಕವಾಗಿ ಸಬಲರಾದಾಗ ಮಾತ್ರ ಆದಿವಾಸಿಗಳ ಸಮಗ್ರ ಅಭಿವೃದ್ಧಿ ಸಾಧ್ಯ. ಹೀಗಾಗಿ ಸಮುದಾಯದ ಯುವಜನರು ಉನ್ನತ ಶಿಕ್ಷಣ ಪಡೆಯುವತ್ತ ಹೆಚ್ಚಿನ ಗಮನಹರಿಸಬೇಕು ಎಂದು ಹಿರಿಯ ಸಾಹಿತಿ ಮಾಣಿಕ್ ನೇಳಗಿ ಅವರು ಅಭಿಪ್ರಾಯಪಟ್ಟರು.

ನಗರದ ಬೋಮಗೊಂಡೇಶ್ವರ್ ವೃತ್ತದಲ್ಲಿ ರವಿವಾರ ಆಯೋಜಿಸಿದ್ದ ವಿಶ್ವ ಆದಿವಾಸಿ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಬೀದರ್ ಜಿಲ್ಲೆಯ ಬಹುತೇಕ ಗ್ರಾಮಗಳಲ್ಲಿ ಬುಡಕಟ್ಟು ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುತ್ತಿದ್ದು, ಅವರ ಸರ್ವತೋಮುಖ ಅಭಿವೃದ್ಧಿಗೆ ಸರ್ಕಾರ ಹಾಗೂ ಸಮಾಜ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಅವರು ಆಗ್ರಹಿಸಿದರು.

ಜಿಲ್ಲಾ ಆದಿವಾಸಿ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ವಿಜಯಕುಮಾರ್ ಡುಮ್ಮೆ ಅವರು ಮಾತನಾಡಿ, ದಕ್ಷಿಣ ಭಾರತದ ಟ್ರೈಬಲ್ ಐಕಾನ್ ಮಹಾತ್ಮ ಬೊಮ್ಮಗೊಂಡರು ಬೀದರ್ ಜಿಲ್ಲೆಯ ನೆಲದಲ್ಲಿ ಜನಿಸಿರುವುದು ಹೆಮ್ಮೆಯ ಸಂಗತಿಯಾಗಿದೆ. ಅವರ ಜನ್ಮಸ್ಥಳ ಚಿದ್ರಿಯಲ್ಲಿರುವುದರಿಂದ ಇಲ್ಲಿನ ವಿಮಾನ ನಿಲ್ದಾಣಕ್ಕೆ ಬೊಮ್ಮಗೊಂಡರ ಹೆಸರಿಡಬೇಕು. ಬೀದರ್ ಕೋಟೆಯಲ್ಲಿರುವ ಅವರ ಸಮಾಧಿ ಸ್ಥಳವನ್ನು ಅಭಿವೃದ್ಧಿಪಡಿಸುವುದರ ಜೊತೆಗೆ ಅವರ ಹೆಸರಿನ ಕೆರೆಯನ್ನೂ ಅಭಿವೃದ್ಧಿಪಡಿಸಬೇಕು ಎಂದು ಒತ್ತಾಯಿಸಿದರು.

ಗೊಂಡ, ಕೋಲ್, ಮುಂಡಾ, ಭಿಲ್, ಸಂತಾಲ್ ಸೇರಿದಂತೆ ದೇಶದ ವಿವಿಧ ಬುಡಕಟ್ಟು ಸಮುದಾಯಗಳ ಇತಿಹಾಸವನ್ನು ಸ್ಮರಿಸದೆ ಭಾರತದ ಆದಿವಾಸಿ ಇತಿಹಾಸ ಪೂರ್ಣವಾಗುವುದಿಲ್ಲ ಎಂದು ಅವರು ಪ್ರತಿಪಾದಿಸಿದರು.

ಜಿಲ್ಲೆಯಲ್ಲಿರುವ ಆದಿವಾಸಿ ಹಾಗೂ ಬುಡಕಟ್ಟು ಸಮುದಾಯಗಳ ಇತಿಹಾಸ, ಸಂಸ್ಕೃತಿ ಮತ್ತು ಪರಂಪರೆಯನ್ನು ಪರಿಚಯಿಸುವ ಟ್ರೈಬಲ್ ಮ್ಯೂಸಿಯಂ ಅನ್ನು ಬೀದರ್ ನಲ್ಲಿ ನಿರ್ಮಿಸಬೇಕು ಎಂದು ಬೀದರ್ ಜಿಲ್ಲಾ ಆದಿವಾಸಿ ರಕ್ಷಣಾ ಪರಿಷತ್ತು ಹಾಗೂ ಜಿಲ್ಲಾ ಆದಿವಾಸಿ ಸಾಹಿತ್ಯ ಪರಿಷತ್ತಿನಿಂದ ಈ ವೇಳೆ ಆಗ್ರಹಿಸಲಾಯಿತು.

ಈ ಸಂದರ್ಭದಲ್ಲಿ ಗೊಂಡ ಪರ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ತುಕಾರಾಮ್ ಚಿಮಕೋಡ್, ಜಿಲ್ಲಾ ಟೋಕರೆ ಕೋಳಿ ಸಮಾಜದ ಉಪಾಧ್ಯಕ್ಷ ಸುನೀಲ್ ಕಾಶಂಪೂರ್, ರವಿ ಘೋಣೆ, ಪ್ರಭು ಮೇತ್ರೆ, ಸಂಗೊಳ್ಳಿ ರಾಯಣ್ಣ ಯುವ ಗರ್ಜನೆಯ ಪ್ರಧಾನ ಕಾರ್ಯದರ್ಶಿ ಕುಮಾರ್ ಹಜ್ಜರಗಿ, ಆದಿವಾಸಿ ಸಮುದಾಯದ ಮುಖಂಡರಾದ ರಮೇಶ್ ಬಾಲೆಬಾಯಿ, ವಿವೇಕ್ ರಾಜಗೊಂಡ್ ಹಾಗೂ ಮಹೇಶ್ ಮೇದಾ ಸೇರಿದಂತೆ ಹಲವರು ಭಾಗವಹಿಸಿದ್ದರು.

2 ಕೋಟಿ ವೆಚ್ಚದ ಶಾದಿ ಮಹಲ್‌ಗೆ ಶಾಸಕ ಅಲ್ಲಂಪ್ರಭು ಪಾಟೀಲ್ ಅಡಿಗಲ್ಲು



ಕಲಬುರಗಿ,ಆ.10-

ನಗರದ ಹೊರವಲಯದಲ್ಲಿರುವ ಹಜರತ್ ಸೈಯ್ಯದ್ ರುಕ್ಮುದ್ದೀನ್ ತೋಲಾ ದರ್ಗಾ ಬಳಿ ಶಾದಿ ಮಹಲ್ ನಿರ್ಮಾಣಕ್ಕಾಗಿ 2 ಕೋಟಿ ವೆಚ್ಚದ ಯೋಜನೆಗೆ ಕಲಬುರಗಿ ದಕ್ಷಿಣ ಕ್ಷೇತ್ರದ ಶಾಸಕ ಅಲ್ಲಂಪ್ರಭು ಪಾಟೀಲ್ ರವಿವಾರ ಅಡಿಗಲ್ಲು ನೆರವೇರಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಶಾಸಕ ಅಲ್ಲಂಪ್ರಭು ಪಾಟೀಲ್, ಅಲ್ಪಸಂಖ್ಯಾತರ ಕಲ್ಯಾಣಕ್ಕೆ ಕಾಂಗ್ರೆಸ್ ಸರ್ಕಾರ ಬದ್ಧವಾಗಿದ್ದು, ಎಲ್ಲ ವರ್ಗದ ಜನರಿಗೆ ಅಗತ್ಯ ಮೂಲಸೌಕರ್ಯ ಒದಗಿಸುವುದು ಸರ್ಕಾರದ ಸಂಕಲ್ಪವಾಗಿದೆ. 2025-26ನೇ ಸಾಲಿನ ಅಭಿವೃದ್ಧಿ ಕಾಮಗಾರಿಗಳಡಿ ಶಾದಿ ಮಹಲ್ ನಿರ್ಮಾಣ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ ಎಂದರು.

ರುಕ್ಮುದ್ದೀನ್ ತೋಲಾ ಹಿಂದು ಮುಸ್ಲಿಂ ಸಾಮರಸ್ಯದ ಪ್ರತೀಕವಾಗಿದೆ. ಇಲ್ಲಿ ಎರಡೂ ಸಮುದಾಯಗಳ ಭಕ್ತರು ಭೇಟಿ ನೀಡಿ ಪೂಜೆ ಹಾಗೂ ಸೇವೆ ಸಲ್ಲಿಸುತ್ತಾರೆ. ವಿಶೇಷವಾಗಿ ಹಿಂದೂ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿ ದರ್ಗಾಕ್ಕೆ ಆಗಮಿಸಿ ಸೇವೆ ಸಲ್ಲಿಸುತ್ತಿರುವುದು ಈ ಕ್ಷೇತ್ರದ ಧಾರ್ಮಿಕ ಸೌಹಾರ್ದತೆಗೆ ಸಾಕ್ಷಿಯಾಗಿದೆ ಎಂದು ಹೇಳಿದರು.

ಚುನಾವಣೆಯ ಸಂದರ್ಭದಲ್ಲಿ ರುಕ್ಮುದ್ದೀನ್ ತೋಲಾ ಬಳಿ ಶಾದಿ ಮಹಲ್ ನಿರ್ಮಿಸುವ ಭರವಸೆ ನೀಡಿದ್ದೆ. ಇದೀಗ ನೀಡಿದ ಮಾತಿನಂತೆ ಕಾಮಗಾರಿಗೆ ಚಾಲನೆ ನೀಡಲಾಗಿದೆ. ಮಾಜಿ ಮುಖ್ಯಮಂತ್ರಿ ಧರಂಸಿಂಗ್ ಅವರೊಂದಿಗೆ ಇಲ್ಲಿಗೆ ಆಗಮಿಸಿ ಸೇವೆ ಸಲ್ಲಿಸಿದ ದಿನಗಳನ್ನು ಸ್ಮರಿಸಿದ ಅವರು, ರುಕ್ಮುದ್ದೀನ್ ತೋಲಾ ಅಭಿವೃದ್ಧಿಗೆ ಮುಂದಿನ ದಿನಗಳಲ್ಲಿಯೂ ಹೆಚ್ಚಿನ ಅನುದಾನ ಒದಗಿಸಲು ಬದ್ಧನಾಗಿದ್ದೇನೆ ಎಂದು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ರಾಣೇಶಪೀರ್ ದರ್ಗಾದ ಅನ್ವರ್ ಹುಸೇನ್ ಸಾಬ್, ಎಂಎಲ್‌ಸಿ ತಿಪ್ಪಣ್ಣ ಕಮಕನೂರ್ ಮುಖಂಡರಾದ ಇಳಿಯಾಸ್ ಸೇಠ್ ಭಾಗವಾನ್, ಪಾಲಿಕೆ ಸದಸ್ಯ ಅಲಂ ಪಟೇಲ್, ಸಂತೋಷ ಪಾಟೀಲ್ ದಣ್ಣೂರ, ಲಿಂಗರಾಜ, ಇರಫಾನ್ ಪಟೇಲ್, ಚಂದ್ರುಗೌಡ, ರವಿ ಪಾಟೀಲ್, ಎಪಿಎಂಸಿ ಸದಸ್ಯ ವೀರಣ್ಣ ಭಂಗೂರ್ ಲಾಡ್ಲೇಸಾಬ್, ಗಂಗಾಧರ, ಅಜೀಜ್ ಮಿಯಾ, ರಫೀಕ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಒಂದನೇಯ ಪುಟದಿಂದ

ವೇತನ ಜಾರಿಗೆ ಆಗ್ರಹಿಸಿ ಬೃಹತ್ ಪ್ರತಿಭಟನೆ

ಹಾಗೂ ಸುಪ್ರೀಂ ಕೋರ್ಟ್ ತೀರ್ಪಿನ ಆಧಾರದ ಮೇಲೆ ರಾಜ್ಯ ಸರ್ಕಾರ ಕನಿಷ್ಠ ವೇತನ ಪರಿಷ್ಕರಿಸಿ ಅಂತಿಮ ಅಧಿಸೂಚನೆ ಹೊರಡಿಸಿದೆ. ಆದರೆ ಎರಡು ತಿಂಗಳು ಕಳೆದರೂ ಪರಿಷ್ಕೃತ ವೇತನವನ್ನು ಜಾರಿಗೊಳಿಸಿಲ್ಲ. ಇದರಿಂದ ರಾಜ್ಯದ ಲಕ್ಷಾಂತರ ಕಾರ್ಮಿಕರು ಸಂಕಷ್ಟಕ್ಕೆ ಸಿಲುಕಿದ್ದಾರೆ ಎಂದು ಆರೋಪಿಸಿದರು.

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ರೈತ, ಕಾರ್ಮಿಕ, ದಲಿತ, ಮಹಿಳೆ, ವಿದ್ಯಾರ್ಥಿ ಮತ್ತು ಯುವಜನ ವಿರೋಧಿ ನೀತಿಗಳನ್ನು ಜಾರಿಗೊಳಿಸುತ್ತಿವೆ. ಭೂಸ್ವಾಧೀನ, ಖಾಸಗೀಕರಣ, ಬೆಲೆ ಏರಿಕೆ, ನಿರುದ್ಯೋಗ ಹಾಗೂ ಗುತ್ತಿಗೆ ಪದ್ಧತಿಯಿಂದ ದುಡಿಯುವ ವರ್ಗದ ಬದುಕು ಮತ್ತಷ್ಟು ಸಂಕಷ್ಟಕ್ಕೀಡಾಗಿದೆ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

ಕಾರ್ಮಿಕ ಸಂಹಿತೆಗಳನ್ನು ಹಿಂಪಡೆಯಬೇಕು, ಕರ್ನಾಟಕದಲ್ಲಿ ಅಧಿಸೂಚಿತ ಕನಿಷ್ಠ ವೇತನವನ್ನು ಜಾರಿಗೊಳಿಸಬೇಕು, ಖಾಯಂಮೇತರ ಹಾಗೂ ಗುತ್ತಿಗೆ ಕಾರ್ಮಿಕರ ಸೇವೆ ಖಾಯಂಗೊಳಿಸಬೇಕು, ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು. ಅಂಗನವಾಡಿ, ಬಿಸಿಯೂಟ ಹಾಗೂ ಆಶಾ ಕಾರ್ಯಕರ್ತೆಯರಿಗೆ ಕನಿಷ್ಠ ವೇತನ ಮತ್ತು ಪಿಂಚಣಿ ನೀಡಬೇಕು. ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಹಾಗೂ ಪಿಂಚಣಿ ಯೋಜನೆ ಜಾರಿಗೊಳಿಸಬೇಕು ಎಂದು ಆಗ್ರಹಿಸಿದರು.

ರೈತರ ಬಲವಂತದ ಭೂಸ್ವಾಧೀನ ಮತ್ತು ಕಾರ್ಪೊರೇಟ್ ಭೂ ಕಬಳಿಕೆ ತಡೆಯಬೇಕು. ಬಗರ್ ಹುಕುಂ ಸಾಗುವಳಿದಾರರಿಗೆ ಹಕ್ಕುಪತ್ರ ನೀಡಬೇಕು. ರೈತರು ಬೆಳೆದ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ ನೀಡಲು ಶಾಶ್ವತ ಕಾನೂನು ರೂಪಿಸಬೇಕು. ರೈತರು, ಕೃಷಿ ಕೂಲಿಕಾರರು ಹಾಗೂ ಮಹಿಳೆಯರ ಸಾಲ ಮನ್ನಾ ಮಾಡಬೇಕು ಎಂದು ಒತ್ತಾಯಿಸಿದರು.

ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ, ವಿದ್ಯುತ್, ದಿನಸಿ ಹಾಗೂ ಸಾರಿಗೆ ದರಗಳ ನಿರಂತರ ಏರಿಕೆಗೆ ಕಡಿವಾಣ ಹಾಕಬೇಕು. ಸಾರ್ವಜನಿಕ ಉದ್ದಿಮೆಗಳನ್ನು ಖಾಸಗೀಕರಣ ಮಾಡುವುದನ್ನು ನಿಲ್ಲಿಸಿ, ಖಾಯಂ ಉದ್ಯೋಗ ಹಾಗೂ ಹೊಸ ಉದ್ಯೋಗಗಳನ್ನು ಸೃಷ್ಟಿಸಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಜಿಲ್ಲೆಯ ಬೇಡಿಕೆಗಳಿಗೂ ಒತ್ತು

ರಾಯಚೂರು ಜಿಲ್ಲೆಯನ್ನು ಬರಪೀಡಿತ ಜಿಲ್ಲೆ ಎಂದು ಘೋಷಿಸಬೇಕು. ಫಸಲ್ ಭೀಮಾ ಯೋಜನೆಯಡಿ ರೈತರು ಪಾವತಿಸುವ ಪ್ರೀಮಿಯಂ ಮೊತ್ತ ಕಡಿಮೆ ಮಾಡಬೇಕು. ಎಸ್‌ಸಿಎಸ್‌ಟಿ ನಿಗಮಗಳಿಂದ ರೈತರ ಭೂಮಿ ಖರೀದಿಸುವ ಕುರಿತು ಸಭೆ ನಡೆಸಬೇಕು. ರಾಯಚೂರಿನಲ್ಲಿ ಏಮ್ಸ್ ಪ್ರಾರಂಭಿಸಬೇಕು. ಎಲ್ಲ ತಾಲೂಕುಗಳಲ್ಲಿ ಭೂ ಮಂಜೂರಾತಿ ಸಮಿತಿಗಳನ್ನು ರಚಿಸಬೇಕು ಹಾಗೂ ಡಿ.ರಾಂಪುರದಲ್ಲಿ ಕೃಷ್ಣಾ ನದಿಗೆ ತಡೆಗೋಡೆ ನಿರ್ಮಿಸಬೇಕು ಎಂದು ಸ್ಥಳೀಯ ಬೇಡಿಕೆಗಳನ್ನು ಮುಂದಿಟ್ಟರು.

ಪ್ರತಿಭಟನೆಯಲ್ಲಿ ಕರಿಯಪ್ಪ ಅಟ್ಟೋಳಿ, ಬಸಲಿಂಗಪ್ಪ ನಗನೂರು, ಹೆಚ್.ಪದ್ಮಾ, ಶ್ರೀನಿವಾಸ ಕಲವಲದೊಡ್ಡಿ, ನರಸಣ್ಣ ನಾಯಕ, ಸಾಜೀದ್ ಹುಸೇನ್, ಅಂಜಿನಯ್ಯ ಕುರುಬದೊಡ್ಡಿ, ಮಹೇಶ್ ಚೀಕಲಪರ್ವಿ, ಮುದ್ದಕಂಪ್ಪ ನಾಯಕ, ಸಂಗಯ್ಯ ಸ್ವಾಮಿ, ಮಲ್ಲನಗೌಡ, ಬಸಂತರಾಯ ಗೌಡ, ರಂಗನಾಥ, ವರಲಕ್ಷ್ಮೀ, ಎಸ್.ಮಾರೆಪ್ಪ, ಖಾಜಾ ಅಸ್ಲಂ ಸೇರಿದಂತೆ ವಿವಿಧ ಕಾರ್ಮಿಕ, ರೈತ ಹಾಗೂ ಜನಪರ ಸಂಘಟನೆಗಳ ಮುಖಂಡರು ಹಾಗೂ ಕಾರ್ಯಕರ್ತರು ಪಾಲ್ಗೊಂಡಿದ್ದರು.

ಹಂಪನಗೌಡ ಬಾದರ್ಲಿಗೆ ಸಚಿವ ಸ್ಥಾನಕ್ಕೆ ಆಗ್ರಹಿಸಿ ರಾಯಚೂರಿನಲ್ಲಿ ಬೃಹತ್ ಪ್ರತಿಭಟನೆ

ಕಾಂಗ್ರೆಸ್ ಸರ್ಕಾರ ಈ ಬಗ್ಗೆ ಕೂಡಲೇ ಗಮನ ಹರಿಸಬೇಕು ಎಂದು ಒತ್ತಾಯಿಸಿದರು.

ಭೂಪಾಲ್ ಗೌಡ ಕರಡಕಲ್ ಮಾತನಾಡಿ, ರಾಯಚೂರು ಜಿಲ್ಲೆಯ ವೀರಶೈವ ಸಮಾಜವನ್ನು ಕಾಂಗ್ರೆಸ್ ಸರ್ಕಾರ ಹಿಂದಿನಿಂದಲೂ ಕಡೆಗಣಿಸುತ್ತಿದೆ. ಹಲವು ವರ್ಷಗಳಿಂದ ಸಮಾಜದ ಕಾಂಗ್ರೆಸ್ ಶಾಸಕರಿಗೆ ಸಚಿವ ಸ್ಥಾನ ನೀಡದೆ ಅನ್ಯಾಯ ಮಾಡಲಾಗಿದೆ. ಇನ್ನು ಮುಂದೆ ಇದನ್ನು ಸಹಿಸುವುದಿಲ್ಲ ಎಂದು ಎಚ್ಚರಿಸಿದರು.

ವೀರಶೈವ ಸಮಾಜದ ಜಿಲ್ಲಾ ಅಧ್ಯಕ್ಷ ಶರಣ ಭೂಪಾಲ್ ನಾಡಗೌಡ ಮಾತನಾಡಿ, ಹಂಪನಗೌಡ ಬಾದರ್ಲಿ ಅವರು ಪಕ್ಷದ ಮೇಲೆ ಸಂಪೂರ್ಣ ವಿಶ್ವಾಸವಿಟ್ಟಿದ್ದರೂ ಅವರಿಗೆ ಸಚಿವ ಸ್ಥಾನ ನೀಡದಿರುವುದು ಅನ್ಯಾಯವಾಗಿದೆ. ಇದು ಒಬ್ಬ ವ್ಯಕ್ತಿಗೆ ಮಾತ್ರವಲ್ಲ, ಇಡೀ ರಾಯಚೂರು ಜಿಲ್ಲೆ ಹಾಗೂ ವೀರಶೈವ ಲಿಂಗಾಯತ ಸಮಾಜಕ್ಕೆ ಮಾಡಿದ ಅನ್ಯಾಯವಾಗಿದೆ ಎಂದು ಆರೋಪಿಸಿದರು.

ಪರಮಪೂಜ್ಯ ಮಹಾಂತಲಿಂಗ ಶಿವಾಚಾರ್ಯರು ಮಾತನಾಡಿ, ಜಿಲ್ಲೆಯ ಹಿರಿಯ ಶಾಸಕ ಹಂಪನಗೌಡ ಬಾದರ್ಲಿ ಅವರಿಗೆ ಸಚಿವ ಸ್ಥಾನ ನೀಡುವುದರಿಂದ ಸಾಮಾಜಿಕ ನ್ಯಾಯ ಒದಗಿಸಿದಂತಾಗುತ್ತದೆ. ಸಚಿವ ಸ್ಥಾನ ನೀಡದಿದ್ದರೆ ರಾಯಚೂರು ಜಿಲ್ಲೆಗೆ ಕಾಂಗ್ರೆಸ್ ಸರ್ಕಾರ ಅನ್ಯಾಯ ಮಾಡಿದಂತಾಗುತ್ತದೆ ಎಂದು ಹೇಳಿದರು.

ಪ್ರತಿಭಟನೆಯಲ್ಲಿ ವೀರಶೈವ ಲಿಂಗಾಯತ ಸಮಾಜದ ಮುಖಂಡರು, ವಿವಿಧ ಸಂಘಟನೆಗಳ ಪದಾಧಿಕಾರಿಗಳು ಹಾಗೂ ಸಹಸ್ರಾರು ಸಂಖ್ಯೆಯ ಜನರು ಭಾಗವಹಿಸಿದ್ದರು.

ಅರಣ್ಯ ಜಾಗಕ್ಕೆ ವಸತಿ ವಿನ್ಯಾಸದ ಮುದ್ರೆ!

ಉಲ್ಲೇಖಿಸಿ, ಒತ್ತುವರಿಯಾಗಿದ್ದರೆ ಹಿಂಪಡೆಯುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ/ವರದಿ ಮಾಡಿರುವುದು ಕಂಡುಬರುತ್ತದೆ.

ಇದಲ್ಲದೆ, ಜಾಗದ ಸ್ಥಿತಿಗತಿ ಕುರಿತು ಸ್ಯಾಟಲೈಟ್ ಸರ್ವೆ ಮೂಲಕ ಪರಿಶೀಲನೆ ನಡೆಸಿರುವ ಉಲ್ಲೇಖವೂ ದಾಖಲೆಗಳಲ್ಲಿ ಇದೆ. ಹೀಗಾಗಿ ಈ ಪ್ರಕರಣ ಕೇವಲ ಬಾಯಿಮಾತಿನ ಆರೋಪವಾಗಿರದೆ, ಹಲವು ವರ್ಷಗಳ ಹಿಂದೆಯೇ ಸರ್ಕಾರಿ ಮಟ್ಟದಲ್ಲಿ ಚರ್ಚೆಗೆ ಬಂದಿರುವ ವಿಷಯ ಎಂಬುದು ದಾಖಲೆಗಳಿಂದ ಸ್ಪಷ್ಟವಾಗುತ್ತದೆ.

ನಿರ್ಣಯದ ಬಳಿಕವೂ ನಿರ್ಮಾಣ ಕಾಮಗಾರಿ?

ಅರಣ್ಯ ಇಲಾಖೆಯ ಜಾಗದ ಒತ್ತುವರಿ ಕುರಿತು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಚರ್ಚೆ ನಡೆದು, ವಿವಾದಿತ 3 ಎಕರೆ 29 ಗುಂಟೆ ಪ್ರದೇಶವನ್ನು ವಸತಿ ಪ್ರದೇಶವಾಗಿ ಪರಿಗಣಿಸಬಾರದು ಹಾಗೂ ಒತ್ತುವರಿ ಜಾಗವನ್ನು ತೆರವುಗೊಳಿಸುವ ಕುರಿತು ನಿರ್ಣಯ/ವರದಿ ಮಾಡಲಾಗಿದೆ ಎಂದು ದಾಖಲೆಗಳು ಸೂಚಿಸುತ್ತವೆ.

ಆದರೆ, ವಿವಾದ ಇತ್ಯರ್ಥವಾಗುವ ಮುನ್ನವೇ ಈ ಪ್ರದೇಶದಲ್ಲಿ ನಿವೇಶನಗಳ ಖರೀದಿ, ಮನೆಗಳ ನಿರ್ಮಾಣ ಹಾಗೂ ಇತರೆ ಕಟ್ಟಡ ಚಟುವಟಿಕೆಗಳು ಮುಂದುವರಿದಿರುವ ಆರೋಪ ಕೇಳಿಬರುತ್ತಿದೆ.

ಅನುಷಾ ನಗರದಲ್ಲಿ ಪೂರ್ಣಿಮಾ ಶಾಲೆ, ವೇದಾಂತ ಮಹಾವಿದ್ಯಾಲಯ ಸೇರಿದಂತೆ ಹಲವು ಕಟ್ಟಡಗಳು ನಿರ್ಮಾಣಗೊಂಡಿರುವ ಹಿನ್ನೆಲೆಯಲ್ಲಿ, ಇವು ನಿರ್ಮಾಣಗೊಂಡಿರುವ ಜಾಗಗಳ ಮೂಲ ದಾಖಲೆಗಳು, ಅನುಮೋದನೆಗಳು ಮತ್ತು ಭೂಮಿಯ ಮಾಲೀಕತ್ವವನ್ನು ಸಂಬಂಧಪಟ್ಟ ಇಲಾಖೆ ಪರಿಶೀಲಿಸಬೇಕಾಗಿದೆ.

ನೋಂದಣಿ, ಕಟ್ಟಡ ಅನುಮತಿ, ಬ್ಯಾಂಕ್ ಸಾಲದ ಮೇಲೂ ಅನುಮಾನ

ಅರಣ್ಯ ಜಾಗದ ಮಾಲೀಕತ್ವದ ವಿವಾದ ಬಗೆಹರಿಯದಿರುವಾಗಲೇ ಕೆಲವು ನಿವೇಶನಗಳ ಖರೀದಿಮಾರಾಟ, ನೋಂದಣಿ, ಕಟ್ಟಡ ನಿರ್ಮಾಣ ಹಾಗೂ ಬ್ಯಾಂಕ್ ಸಾಲ ಪಡೆಯುವ ಪ್ರಕ್ರಿಯೆಗಳು ನಡೆದಿವೆ ಎಂಬ ಆರೋಪಗಳಿವೆ. ವಿವಾದಿತ ಜಾಗಕ್ಕೆ ಸಂಬಂಧಿಸಿದ ದಾಖಲೆಗಳನ್ನು ಆಧರಿಸಿ ನೋಂದಣಿ ಮಾಡಲಾಗಿದೆಯೇ? ಕಟ್ಟಡ ನಿರ್ಮಾಣಕ್ಕೆ ಅನುಮತಿ ನೀಡಲಾಗಿದೆಯೇ? ಬ್ಯಾಂಕ್‌ಗಳಿಗೆ ಯಾವ ದಾಖಲೆಗಳನ್ನು ಸಲ್ಲಿಸಿ ಸಾಲ ಪಡೆಯಲಾಗಿದೆ? ಎಂಬುದನ್ನು ತನಿಖೆ ಮೂಲಕ ಬಹಿರಂಗಪಡಿಸಬೇಕಾಗಿದೆ. ಇದರಲ್ಲಿ ಉಪನೋಂದಣಾಧಿಕಾರಿ ಕಚೇರಿ, ಮಹಾನಗರ ಪಾಲಿಕೆ ಹಾಗೂ ಅರಣ್ಯ ಇಲಾಖೆಯ ಅಧಿಕಾರಿಗಳ ಪಾತ್ರವಿದ್ದರೆ, ಅದನ್ನೂ ತನಿಖೆಗೊಳಪಡಿಸಬೇಕು ಎಂಬ ಆಗ್ರಹ ಸಾರ್ವಜನಿಕರಿಂದ ಕೇಳಿಬಂದಿದೆ.

ಲೋಕಾಯುಕ್ತ ತನಿಖೆಯೂ ನಡೆದಿತ್ತು ಈ ಜಾಗದ ಒತ್ತುವರಿ ಹಾಗೂ ಅಕ್ರಮಕ್ಕೆ ಸಂಬಂಧಿಸಿದಂತೆ ಲೋಕಾಯುಕ್ತ ಮಟ್ಟದಲ್ಲಿಯೂ ತನಿಖೆ ನಡೆದಿರುವುದಾಗಿ ತಿಳಿದುಬಂದಿದೆ. ಹೀಗಿದ್ದರೂ ವಿವಾದಿತ ಜಾಗದಲ್ಲಿ ಕಟ್ಟಡ ನಿರ್ಮಾಣ ಹಾಗೂ ನಿವೇಶನ ವಹಿವಾಟು ಮುಂದುವರಿದಿದ್ದರೆ, ಸಂಬಂಧಪಟ್ಟ ಅಧಿಕಾರಿಗಳು ಇದನ್ನು ಏಕೆ ತಡೆಯಲಿಲ್ಲ ಎಂಬ ಪ್ರಶ್ನೆ ಎದುರಾಗಿದೆ.

ಆಯುಕ್ತರು ದಾಖಲೆಗಳ ಸಮಗ್ರ ಪರಿಶೀಲನೆಗೆ ಮುಂದಾಗಲಿ ಮಹಾನಗರ ಪಾಲಿಕೆ ಆಯುಕ್ತರು ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ, ಸರ್ವೆ ನಂ.1139, 1140 ಮತ್ತು 1164ರ ಮೂಲ ಪಹಣಿ, ಬಿನ್‌ಶೇತ್ಕಿ ಆದೇಶ, ವಸತಿ ವಿನ್ಯಾಸದ ಮೂಲ ನಕ್ಷೆ, ಅನುಮೋದಿತ ವಿಸ್ತೀರ್ಣ, ಅರಣ್ಯ ಇಲಾಖೆಯ ದಾಖಲೆ, ಸ್ಯಾಟಲೈಟ್ ಸರ್ವೆ ವರದಿ, ನಿವೇಶನ ನೋಂದಣಿ ಹಾಗೂ ಕಟ್ಟಡ ಪರವಾನಗಿ ದಾಖಲೆಗಳನ್ನು ಸಮಗ್ರವಾಗಿ ಪರಿಶೀಲಿಸಬೇಕು ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ. ವಿಶೇಷವಾಗಿ 33 ಎಕರೆ 38 ಗುಂಟೆ ಜಾಗಕ್ಕೆ ಅನುಮೋದನೆ ಇದ್ದರೆ, ಹೆಚ್ಚುವರಿಯಾಗಿ 3 ಎಕರೆ 29 ಗುಂಟೆ ಹೇಗೆ ಸೇರಿ 37 ಎಕರೆ 27 ಗುಂಟೆಯಾಯಿತು? ಎಂಬ ಪ್ರಶ್ನೆಗೆ ಸಂಬಂಧಪಟ್ಟ ಇಲಾಖೆಗಳು ಸ್ಪಷ್ಟ ಉತ್ತರ ನೀಡಬೇಕಾಗಿದೆ. 3 ಎಕರೆ 29 ಗುಂಟೆ ಅರಣ್ಯ ಇಲಾಖೆಯ ಜಾಗವೇ ಎಂಬುದು ದಾಖಲೆಗಳ ಪರಿಶೀಲನೆಯಲ್ಲಿ ದೃಢಪಟ್ಟರೆ, ಯಾವುದೇ ಪ್ರಭಾವಕ್ಕೆ ಮಣಿಯದೆ ಅದನ್ನು ಕೂಡಲೇ ಸರ್ಕಾರದ ವಶಕ್ಕೆ ಪಡೆಯಬೇಕು. ಒತ್ತುವರಿಗೆ ಸಹಕರಿಸಿದವರು, ಅಕ್ರಮ ದಾಖಲೆ ಅಥವಾ ಅನುಮೋದನೆ ನೀಡಿದವರು ಹಾಗೂ ನಿಯಮ ಉಲ್ಲಂಘಿಸಿ ಕಟ್ಟಡ ನಿರ್ಮಾಣಕ್ಕೆ ಅವಕಾಶ ನೀಡಿದವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ಕಾಮನ್‌ವೆಲ್ತ್ ಪದಕ ವಿಜೇತರೊಂದಿಗೆ ಪ್ರಧಾನಿ ಮೋದಿ ಸಂವಾದ

ಒಂದು ಹಾಸ್ಯಭರಿತ ಘಟನೆಯನ್ನು ಮೋದಿ ಅವರೊಂದಿಗೆ ಹಂಚಿಕೊಂಡರು.

ಕ್ರೀಡಾಪಟುಗಳ ಸಾಧನೆಯನ್ನು ಕೇವಲ ಪದಕಗಳ ಗೆಲುವಾಗಿ ನೋಡದೆ ದೇಶದ ಯುವಜನತೆಗೆ ಸ್ಫೂರ್ತಿ ನೀಡುವ ಶಕ್ತಿಯಾಗಿದೆ. ಭಾರತಕ್ಕಾಗಿ ಪದಕ ಗೆಲ್ಲುವ ನಿಮ ಪ್ರಯತ್ನಗಳು ಮತ್ತು ಹೊಸ ಎತ್ತರ ತಲುಪುವ ನಿಮ ಸಂಪ್ರದಾಯವೇ ಇದಕ್ಕೆ ಕಾರಣ ಎಂದು ಪ್ರಧಾನಿ ಹೇಳಿದರು.

ಗ್ಲಾಸ್ಗೋ 2026ರಲ್ಲಿ 13 ಚಿನ್ನ ಸೇರಿದಂತೆ 39 ಪದಕಗಳನ್ನು ಗೆದ್ದು ನಾಲ್ಕನೇ ಸ್ಥಾನ ಪಡೆದಿರುವ ಭಾರತಕ್ಕೆ, ಪ್ರಧಾನಿಯವರ ಈ ಸಂವಾದ ಕ್ರೀಡಾಪಟುಗಳ ಸಾಧನೆಗೆ ರಾಷ್ಟ್ರೀಯ ಮಟ್ಟದಲ್ಲಿ ನೀಡಲಾಗುತ್ತಿರುವ ಮಹತ್ವದ ಮತ್ತೊಂದು ಸಂಕೇತವಾಗಿದೆ.

ಸ್ಪರ್ಧಾತ್ಮಕ ಪರೀಕ್ಷೆಗೆ ಉತ್ತಮ ಸ್ಪಂದನೆ ಯುವಕರು ಪುಸ್ತಕ ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು: ಎಂ.ವೈ. ಪಾಟೀಲ್



ಅಫಜಲಪುರ,ಆ.10-

ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಯುವ ವಿಕಾಸ ವೇದಿಕೆ ವತಿಯಿಂದ ರವಿವಾರ ರಾಜ್ಯಮಟ್ಟದ ಮುಕ್ತ ಸ್ಪರ್ಧಾತ್ಮಕ ಪರೀಕ್ಷೆ ಯಶಸ್ವಿಯಾಗಿ ನಡೆಯಿತು. ವಿವಿಧ ಜಿಲ್ಲೆಗಳಿಂದ ಆಗಮಿಸಿದ್ದ ಸ್ಪರ್ಧಾರ್ಥಿಗಳು ಪರೀಕ್ಷೆಯಲ್ಲಿ ಭಾಗವಹಿಸಿದರು.

ಶಾಸಕ ಎಂ.ವೈ. ಪಾಟೀಲ ಅವರು ಕಾರ್ಯಕ್ರಮ ಅಧ್ಯಕ್ಷತೆ ವಹಿಸಿ ಮಾತನಾಡಿ ಇಂದಿನ ಯುಗವು ಸ್ಪರ್ಧಾತ್ಮಕ ಯುಗವಾಗಿದ್ದು, ಜೀವನದಲ್ಲಿ ಯಶಸ್ಸು ಸಾಧಿಸಲು ಸ್ಪರ್ಧಾತ್ಮಕ ಮನೋಭಾವ ಹಾಗೂ ನಿರಂತರ ಶ್ರಮ ಅಗತ್ಯ ಎಂದರು.

ಭಾರತವು ಯುವಕರ ದೇಶವಾಗಿದ್ದು, ದೇಶದ ಶೇ.60 ರಷ್ಟು ಜನಸಂಖ್ಯೆ ಯುವಕರದ್ದಾಗಿದೆ. ದೇಶದ ಅಭಿವೃದ್ಧಿಯಲ್ಲಿ ಯುವಕರ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಇಂದಿನ ಯುವಕರು ಮೊಬೈಲ್‌ಗೆ ಹೆಚ್ಚು ಒಲವು ತೋರಿಸುತ್ತಿದ್ದು, ಅದರ ಉತ್ತಮ ಹಾಗೂ ದುಷ್ಪರಿಣಾಮಗಳೆರಡನ್ನೂ ಅರಿತು ಬಳಸಬೇಕು. ಪುಸ್ತಕ ಓದುವ ಅಭ್ಯಾಸ ಬೆಳೆಸಿಕೊಂಡರೆ ಯಾವುದೇ ಕಠಿಣ ಸವಾಲನ್ನು ಎದುರಿಸುವ ಸಾಮರ್ಥ್ಯ ಬೆಳೆಯುತ್ತದೆ. ನಿಮ್ಮ ತಂದೆ-ತಾಯಿ ಹಾಗೂ ಶಿಕ್ಷಣ ನೀಡಿದ ಗುರುಗಳ ಹೆಸರನ್ನು ತರುವಂತಹ ಸಾಧನೆ ಮಾಡಬೇಕು ಎಂದು ಅವರು ಕರೆ ನೀಡಿದರು.

ಸರ್ಕಾರ ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಸಾಕಷ್ಟು ಅವಕಾಶಗಳನ್ನು ಕಲ್ಪಿಸಿದ್ದು, ಶಾಲೆ-ಕಾಲೇಜುಗಳ ಗ್ರಂಥಾಲಯಗಳಲ್ಲಿರುವ ಉತ್ತಮ ಪುಸ್ತಕಗಳನ್ನು ಓದಿ ಜ್ಞಾನ ವೃದ್ಧಿಸಿಕೊಳ್ಳುವಂತೆ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಕೆಪಿಸಿಸಿ ರಾಜ್ಯ ಹಿಂದುಳಿದ ವರ್ಗಗಳ ಉಪಾಧ್ಯಕ್ಷ ಜೆ.ಎಂ. ಕೊರಬು ಮಾತನಾಡಿ, ಡಾ. ಬಾಬಾಸಾಹೇಬ ಅಂಬೇಡ್ಕರ್, ಛತ್ರಪತಿ ಸಾಹು ಮಹಾರಾಜ ಹಾಗೂ ಮಹಾತ್ಮ ಜ್ಯೋತಿರಾವ್ ಫುಲೆ ಅವರ ಸಮಾನತೆಯ ವಿಚಾರಧಾರೆಗಳು ಸಂಪೂರ್ಣವಾಗಿ ಜಾರಿಯಾದಾಗ ಮಾತ್ರ ಎಲ್ಲರಿಗೂ ಸಮಾನ ಹಕ್ಕುಗಳು ದೊರೆಯಲಿವೆ ಎಂದರು. ಈ ಭಾಗದಲ್ಲಿ ರಾಜ್ಯ ಮಟ್ಟದ ಸ್ಪರ್ಧಾತ್ಮಕ ಪರೀಕ್ಷೆ ಆಯೋಜಿಸಿ ರುವುದು ಅರ್ಥ ಪೂರ್ಣ ಕಾರ್ಯ ವಾಗಿದೆ. ಇಂತಹ ಕಾರ್ಯಕ್ರಮಗಳು ವಿದ್ಯಾರ್ಥಿಗಳಲ್ಲಿ ಸ್ಪರ್ಧಾತ್ಮಕ ಮನೋಭಾವ ಬೆಳೆಸುವುದರ ಜೊತೆಗೆ ಸ್ಪರ್ಧಾತ್ಮಕ ಪರೀಕ್ಷೆಗಳ ತಯಾರಿ ಹಾಗೂ ಸಿದ್ಧತೆಯ ಬಗ್ಗೆ ಅರಿವು ಮೂಡಿಸುತ್ತವೆ ಎಂದು ತಿಳಿಸಿದರು.

ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ವಿಜೇತರಾದವರಿಗೆ ಪ್ರಥಮ ಬಹುಮಾನ 51,000, ದ್ವಿತೀಯ ಬಹುಮಾನ 25,000 ಹಾಗೂ ತೃತೀಯ ಬಹುಮಾನ 15,000 ನಿಗದಿಪಡಿಸಲಾಗಿತ್ತು. ಪರೀಕ್ಷೆಯ ಫಲಿತಾಂಶವನ್ನು ಅದೇ ದಿನ ಪ್ರಕಟಿಸಿ ಗಣ್ಯರ ಸಮ್ಮುಖದಲ್ಲಿ ವಿಜೇತರಿಗೆ ಬಹುಮಾನ ವಿತರಿಸಲಾಯಿತು. ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ನಿತೀನ್ ಗುತ್ತೇದಾರ ಮಾತನಾಡಿ ಯುವಕರು ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಉತ್ತಮ ಸಿದ್ದತೆ ಪಡೆಯಬೇಕು ಎಂದರು.

ಬೆಂಗಳೂರಿನ ಇನ್‌ಸೈಟ್ ಐಎಎಸ್ ಸಂಸ್ಥೆಯ ಸಂಸ್ಥಾಪಕ ಜಿ.ಬಿ. ವಿನಯಕುಮಾರ ವಿಶೇಷ ಉಪನ್ಯಾಸ ನೀಡಿದರು.

ಈ ಸಂಧರ್ಭದಲ್ಲಿ ಶಂಕರ ಮ್ಯಾಕೇರಿ, ಜೆಡಿಎಸ್ ತಾಲೂಕಾಧ್ಯಕ್ಷ ಮಲ್ಲಿಕಾರ್ಜುನ ಸಿಂಗೆ, ನಾಮದೇವ ಕಡಕೋಳ, ವಕೀಲರ ಸಂಘದ ಅಧ್ಯಕ್ಷ ಅರ್ಜುನ ಕೆರೂರ, ವಕೀಲ ಕೆ.ಜಿ. ಪೂಜಾರಿ, ಭೀಮರಾಯ ಗೌರ, ಡಾ.ಸಂಗಣ್ಣ ಸಿಂಗೆ, ಡಾ.ಸಂತೋಷ ಹುಗ್ಗಿ, ರಾಜಕುಮಾರ ಬಳೂರ್ಗಿ, ಡಾ.ಶಿವಶರಣಪ್ಪ ಮೊತಕಪಳ್ಳಿ, ಗುರು ಪೂಜಾರಿ, ಮಹಾಂತ ಬಳೂಂಡಗಿ ಮುತ್ತು ಕುರಿಮನಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.



ವಾರ್ಡ್ 52ರಲ್ಲಿ 1.45 ಕೋಟಿ ವೆಚ್ಚದ ರಸ್ತೆ ಕಾಮಗಾರಿಗೆ ಚಾಲನೆ

ಕಲಬುರಗಿ:

ದಕ್ಷಿಣ ವಿಧಾನಸಭಾ ಕ್ಷೇತ್ರದ ವಾರ್ಡ್ 52ರ ಹೈಕೋರ್ಟ್ ಪಕ್ಕದ ಕೆಎಚ್‌ಬಿ ಅಕ್ಕ ಮಹಾದೇವಿ ಕಾಲೋನಿಯಲ್ಲಿ 1.45 ಕೋಟಿ ವೆಚ್ಚದಲ್ಲಿ ಕೈಗೊಳ್ಳಲಿರುವ ರಸ್ತೆ ಕಾಮಗಾರಿಗೆ ರವಿವಾರ ಶಾಸಕ ಅಲ್ಲಂಪ್ರಭು ಪಾಟೀಲ ಅಡಿಗಲ್ಲು ಪೂಜೆ ನೆರವೇರಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಕೆಕೆಆರ್‌ಡಿಬಿಯ 4.90 ಕೋಟಿ ಪ್ಯಾಕೇಜ್ ಅನುದಾನವನ್ನು ನಗರದ ವಿವಿಧ ಬಡಾವಣೆಗಳ ಅಭಿವೃದ್ಧಿಗೆ ಬಳಸಲಾಗುತ್ತಿದೆ. ನಿಜಾಂಪೂರ, ಕಮಲಾ ನಗರ, ಓಝಾ ಬಡಾವಣೆ, ಕುರುಬ ನಗರ, ಸಾವಿತ್ರಿಬಾಯಿ ಫುಲೆ ಬಡಾವಣೆ, ವೆಂಕಟೇಶ ನಗರ, ಗಿರಿ ಬಡಾವಣೆ ಹಾಗೂ ಶರಣ ನಗರ ಸೇರಿದಂತೆ ಹಲವು ಪ್ರದೇಶಗಳಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ ಎಂದರು.

ಅಭಿವೃದ್ಧಿ ಕಾಮಗಾರಿಗಳು ಯಶಸ್ವಿಯಾಗಿ ಪೂರ್ಣಗೊಳ್ಳಲು ಸಾರ್ವಜನಿಕರ ಸಹಕಾರ ಅಗತ್ಯ ಎಂದು ಅವರು ಹೇಳಿದರು.

ಈ ಸಂದರ್ಭದಲ್ಲಿ ಲಿಂಗರಾಜ ತಾರಫೈಲ್, ಧರ್ಮರಾಜ ಹೆರೂರ್, ಸುಶೀಲ್ ಮಮದೆ, ರವಿ ಕೊಳ್ಳೂರ, ದಯಾನಂದ ಸ್ವಾಮಿ, ರಾಣಪ್ಪ, ಬಾಬು, ಚಂದ್ರಕಾಂತ ಸೇರಿದಂತೆ ಅಧಿಕಾರಿಗಳು ಹಾಗೂ ಸ್ಥಳೀಯ ಮುಖಂಡರು ಉಪಸ್ಥಿತರಿದ್ದರು.

ಲಾರಿ ಚಾಲನೆ ವೇಳೆ ಹೃದಯಾಘಾತದಿಂದ ಚಾಲಕ ಮೃತ್ಯು



ಬಾಗಲಕೋಟೆ ,ಆ.10-

ಮಾಜಿ ಸಚಿವ ಆರ್.ಬಿ.ತಿಮ್ಮಾಪುರ ಅವರೊಂದಿಗೆ ದೂರವಾಣಿ ಸಂಭಾಷಣೆ ನಡೆಸಿರುವುದು ನಿಜ. ಆದರೆ ಆ ಮಾತುಕತೆಯಲ್ಲಿ ಇಲ್ಲದ ವಿಷಯಗಳನ್ನು ಸೇರಿಸಿ ಷಡ್ಯಂತ್ರ ರೂಪಿಸಿ ವೈರಲ್ ಮಾಡಲಾಗಿದೆ ಎಂದು ಕಾಂಗ್ರೆಸ್ ಬಾಗಲಕೋಟೆ ಜಿಲ್ಲಾ ಘಟಕದ ಅಧ್ಯಕ್ಷ ಎಸ್.ಜಿ.ನಂಜಯ್ಯನಮಠ ಸ್ಪಷ್ಟನೆ ನೀಡಿದ್ದಾರೆ.

ನಗರದ ನವನಗರ ಪತ್ರಿಕಾ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಸಚಿವರಾದ ಬಳಿಕ ವಿಜಯಾನಂದ ಕಾಶಪ್ಪನವರ ಅವರನ್ನು ಭೇಟಿ ಮಾಡಿ ಸನ್ಮಾನಿಸಿದ್ದೇನೆ. ಅವರು ನನ್ನೊಂದಿಗೆ ಗೌರವಯುತವಾಗಿ ನಡೆದುಕೊಂಡಿದ್ದಾರೆ. ಸನ್ಮಾನ ಕಾರ್ಯಕ್ರಮದಿಂದ ಹಿಂದಿರುಗುವ ವೇಳೆ ಕಾರಿನಲ್ಲಿ ತಿಮ್ಮಾಪುರ ಅವರೊಂದಿಗೆ ದೂರವಾಣಿ ಮೂಲಕ ಮಾತನಾಡಿದ್ದೇನೆ ಎಂದು ಹೇಳಿದರು.

ಸಚಿವ ಸಂಪುಟದ ಬಗ್ಗೆ ತಿಮ್ಮಾಪುರ ಅವರೊಂದಿಗೆ ಅಸಮಾಧಾನ ವ್ಯಕ್ತಪಡಿಸಿರುವುದು ನಿಜ. ಆದರೆ ವೈರಲ್ ಆಗಿರುವ ಆಡಿಯೋದಲ್ಲಿ ಕೆಲವೊಂದು ವಿಷಯಗಳನ್ನು ಉದ್ದೇಶಪೂರ್ವಕವಾಗಿ ಸೇರಿಸಲಾಗಿದೆ. ಹೈಕಮಾಂಡ್ ಅಥವಾ ಪೇಮೆಂಟ್ ಸೀಟ್ ಕುರಿತು ನಾವು ಯಾವುದೇ ಮಾತುಕತೆ ನಡೆಸಿಲ್ಲ ಎಂದು ಸ್ಪಷ್ಟಪಡಿಸಿದರು.

ತಮ್ಮ ಹಾಗೂ ತಿಮ್ಮಾಪುರ ಅವರ ನಡುವೆ ಭಿನ್ನಾಭಿಪ್ರಾಯ ಉಂಟುಮಾಡುವ ಉದ್ದೇಶದಿಂದ ಈ ಷಡ್ಯಂತ್ರ ರೂಪಿಸಲಾಗಿದೆ. ಇದರ ಹಿಂದೆ ಬಿಜೆಪಿ ಕಾರ್ಯಕರ್ತರ ಕೈವಾಡ ಇರಬಹುದೆಂಬ ಅನುಮಾನವಿದೆ ಎಂದು ಆರೋಪಿಸಿದರು.

ಈ ಪ್ರಕರಣದ ಕುರಿತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ದೂರು ನೀಡಿ, ಆಡಿಯೋ ವೈರಲ್ ಮಾಡಿದವರು ಯಾರು ಹಾಗೂ ಅದರಲ್ಲಿ ಸುಳ್ಳು ಮಾಹಿತಿಯನ್ನು ಸೇರಿಸಿರುವವರ ವಿರುದ್ಧ ಸಮಗ್ರ ತನಿಖೆ ನಡೆಸುವಂತೆ ಆಗ್ರಹಿಸುವುದಾಗಿ ತಿಳಿಸಿದರು.

''ನಾನು ಕಟ್ಟಾ ಕಾಂಗ್ರೆಸ್ ಕಾರ್ಯಕರ್ತ. ಯಾವುದೇ ಕಾರಣಕ್ಕೂ ಕಾಂಗ್ರೆಸ್ ಪಕ್ಷವನ್ನು ಬಿಡುವುದಿಲ್ಲ'' ಎಂದು ಎಸ್.ಜಿ. ನಂಜಯ್ಯನಮಠ ಸ್ಪಷ್ಟಪಡಿಸಿದರು.

ಕರ್ನಾಟಕ ದಲಿತ ಸಂಘರ್ಷ ಸಮಿತಿ ಜಿಲ್ಲಾ ಪದಾಧಿಕಾರಿಗಳ ಆಯ್ಕೆ

ಬೀದರ್,ಆ.10-

ಕರ್ನಾಟಕ ದಲಿತ ಸಂಘರ್ಷ ಸಮಿತಿ (ಭೀಮವಾದ)ಯ ನೂತನ ರಾಜ್ಯ ಸಂಚಾಲಕ ಪರಶುರಾಮ್ ನೀಲನಾಯಕ ಅವರ ಆದೇಶದಂತೆ ಸಂಘಟನೆಯ ಜಿಲ್ಲಾ ಸಮಿತಿಯ ಪದಾಧಿಕಾರಿಗಳ ಆಯ್ಕೆ ಮಾಡಲಾಯಿತು ಎಂದು ಸಂಘಟನೆಯ ಸಂಚಾಲಕ ಸುನಿಲ್ ಸಂಗವ್ ಅವರು ಪ್ರಕಟಣೆ ಮೂಲಕ ತಿಳಿಸಿದ್ದಾರೆ. ನಗರದ ಪ್ರಿಯದರ್ಶಿನಿ ಉಡುಪಿ ಹೋಟೆಲ್ ನಲ್ಲಿ ಶನಿವಾರ ಸಂಘಟನೆಯ ಸಂಚಾಲಕ ಸುನಿಲ್ ಸಂಗವ್ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಜಿಲ್ಲಾ ಸಮಿತಿಯ ಪದಾಧಿಕಾರಿಗಳು ಆಯ್ಕೆ ಮಾಡಲಾಯಿತು. ಈ ವೇಳೆ ಭಂತೆ ಸಂಘ ರಖ್ಷಿತ್ ಅವರು ಡಾ.ಅಂಬೇಡ್ಕರ್ ಹಾಗೂ ಬುದ್ದರ ಭಾವಚಿತ್ರಕ್ಕೆ ಪುಷ್ಪ ಹಾಕಿ ಪೂಜೆ ಮಾಡಿದರು.

ಸಂಘಟನೆಯ ಜಿಲ್ಲಾ ಕಾರ್ಯದರ್ಶಿಗಳಾಗಿ ತುಕಾರಾಮ್ ತಾಳಮಡಗಿ ಹಾಗೂ ತುಕಾರಾಮ್ ಮುತ್ತಂಗಿಕರ್, ಖಜಾಚಿಯಾಗಿ ಸತೀಶಕುಮಾರ್ ದೀನೆ, ಜಿಲ್ಲಾ ಕಲಾವಿದರ ಸಂಘದ ಅಧ್ಯಕ್ಷರಾಗಿ ಸುನಿಲಕುಮಾರ್ ಭಾವಿಕಟ್ಟಿ, ಜಿಲ್ಲಾ ಸಮಿತಿಯ ಸದಸ್ಯರಾಗಿ ಪ್ರೇಮನಾಥ್ ಸೇರಿಕಾರ್ ಸುದರ್ಶನ್ ಧನ್ವಂತ್, ಬಕ್ಕಪ್ಪ ತಾರೆ, ಅಶೋಕ್ ಚವಳಿಕರ್, ಶಿವಾನಂದ್ ಕುದುರೆ ಮೈಲೂರ್ ಅವರನ್ನು ಸಮಿತಿಯ ಎಲ್ಲರ ಸಮ್ಮುಖದಲ್ಲಿ ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು. ಈ ಸಂದರ್ಭದಲ್ಲಿ ದಲಿತ ಮುಖಂಡ ರಾಜು ಕಪನೂರ್ ಮಹೇಶ್ ಗೋರನಾಳಕರ್, ಭರತ್ ಕಾಂಬಳೆ ಹಾಗೂ ಶಿವರಾಜ್ ವಿದ್ಯಾಸಾಗರ್ ಸೇರಿದಂತೆ ಇತರರು ಇದ್ದರು.

ಕಾರ್ಯಗಳನ್ನು ಮಾಡಲು ಕಾಯುತ್ತಿರುವ ನೂತನ ಸಚಿವರಿಗೆ ಇನ್ನೂ ಸಿಕ್ಕಿಲ್ಲ ಖಾತೆ ಭಾಗ್ಯ

ಮೂಲಗಳ ಪ್ರಕಾರ ರಾಮಲಿಂಗಾರೆಡ್ಡಿಯವರಿಗೆ ಜಲ ಸಂಪನೂಲ ಬದಲಾಗಿ ವಸತಿ ಖಾತೆ ನೀಡುವ ಸಾಧ್ಯತೆ ಇದೆ. ಸಚಿವ ಕೆ.ಎಚ್.ಮುನಿಯಪ್ಪ ತಮಗೆ ಆಹಾರ ಮತ್ತು ನಾಗರಿಕ ಪೂರೈಕೆ ಬೇಡ, ಸಮಾಜ ಕಲ್ಯಾಣ ಇಲಾಖೆ ಬೇಕು ಎಂದು ಪಟ್ಟು ಹಿಡಿದಿದ್ದರು. ಡಿ.ಕೆ.ಶಿವಕುಮಾರ್ ಅವರ ಜೊತೆ ಮುನಿಯಪ್ಪ ದೆಹಲಿಗೂ ತೆರಳಿದ್ದರು. ಸಮಾಜ ಕಲ್ಯಾಣ ಇಲಾಖೆಯ ಮೇಲೆ ಕಣ್ಣಿಟ್ಟಿರುವ ಪಿ.ಎಂ.ನರೇಂದ್ರ ಸ್ವಾಮಿ, ಶಿವರಾಜ್ ತಂಗಡಗಿ ಅವರು ಕೂಡ ದೆಹಲಿ ಪ್ರವಾಸದಲ್ಲಿ ಮುಖ್ಯಮಂತ್ರಿಯವರ ಜೊತೆಗಿದ್ದರು.

ಮಹಿಳಾ ಕೋಟಾದಡಿ ಸಚಿವ ಸ್ಥಾನ ನೀಡಲು ಮುನಿಯಪ್ಪ ಅವರ ಪುತ್ರಿ ರೂಪಕಲಾ ಅವರನ್ನು ಹೈಕಮಾಂಡ್ ಗುರುತಿಸಿದೆ. ಮುನಿಯಪ್ಪ ಅವರಿಗೆ ಸಚಿವ ಸ್ಥಾನ ತೊರೆದು ಮುಂದಿನ ಲೋಕಸಭಾ ಚುನಾವಣೆಗೆ ತಯಾರಿ ನಡೆಸುವಂತೆ ಸಲಹೆ ನೀಡಲಾಗಿತ್ತು. ಮುನಿಯಪ್ಪ ಅವರಿಂದ ತೆರವಾದ ಸಚಿವ ಸ್ಥಾನಕ್ಕೆ ಪುತ್ರಿ ರೂಪಕಲಾ ಅವರನ್ನು ನಿಯೋಜಿಸುವುದಾಗಿ ಹೈಕಮಾಂಡ್ ಭರವಸೆ ನೀಡಿತ್ತು. ಆದರೆ ಮುನಿಯಪ್ಪ ಇದನ್ನು ತಳ್ಳಿ ಹಾಕಿದ್ದು, ಸಚಿವ ಸ್ಥಾನ ನಾನು ಬಿಡುವುದಿಲ್ಲ. ತಾವೇ ಮುಂದುವರೆಯುವುದಾಗಿ ಸ್ಪಷ್ಟಪಡಿಸಿದ್ದಾರೆ.

ಸಚಿವ ಸ್ಥಾನದಲ್ಲಿ ಮುಂದುವರೆಯುವುದಾದರೆ, ಸಮಾಜ ಕಲ್ಯಾಣ ಇಲಾಖೆ ಕೇಳಬಾರದು ಎಂದು ಷರತ್ತು ವಿಧಿಸಲಾಗಿದ್ದು, ಅದಕ್ಕೆ ಮುನಿಯಪ್ಪ ಒಪ್ಪಿದ್ದಾರೆ ಎಂದು ತಿಳಿದು ಬಂದಿದೆ.

ರಾಮಲಿಂಗಾರೆಡ್ಡಿಯವರ ಬಳಿ ಇರುವ ಜಲ ಸಂಪನೂಲ ಖಾತೆಯನ್ನು ಮುನಿಯಪ್ಪ ಅಥವಾ ಶಿವರಾಜ್ ತಂಗಡಗಿ ಅವರಿಗೆ ನೀಡುವ ಸಾಧ್ಯತೆ ಇದೆ. ಎಚ್.ಸಿ.ಬಾಲಕೃಷ್ಣ ಅವರಿಗೆ ಅರಣ್ಯ, ಪರಿಸರ ಜೀವಶಾಸ್ತ್ರ ಖಾತೆ ನೀಡುವುದಾಗಿ ಹೇಳಲಾಗಿತ್ತು, ಆದರೆ ಕೊನೆ ಕ್ಷಣದಲ್ಲಿ ಉನ್ನತ ಶಿಕ್ಷಣ ಖಾತೆಗೆ ಅವರ ಹೆಸರು ಕೇಳಿ ಬರುತ್ತಿದೆ. ಲಕ್ಷ್ಮಣ ಸವದಿ ಅವರಿಗೆ-ಸಹಕಾರ, ವಿಜಯಾನಂದ ಕಾಶಪ್ಪನವರ್ -ಕೃಷಿ ಮಾರುಕಟ್ಟೆ, ಬಸವರಾಜ ರಾಯರೆಡ್ಡಿಯವರಿಗೆ-ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕೆ.ಎಸ್.ಬಸಂತಪ್ಪ ಅವರಿಗೆ- ಪೌರಾಡಳಿತ, ರುದ್ರಪ್ಪ ಲಮಾಣಿಗೆ-ಅಬಕಾರಿ, ಟಿ.ರಘುಮೂರ್ತಿಯವರಿಗೆ-ಪರಿಶಿಷ್ಟ ಪಂಗಡಗಳ ಅಭಿವೃದ್ಧಿ, ರಿಜ್ವಾನ್ ಅರ್ಷದ್‌ಗೆ- ಹಜ್ ಮತ್ತು ವಕ್ಫ್, ಪುಟ್ಟರಂಗಶೆಟ್ಟಿ ಅವರಿಗೆ-ಹಿಂದುಳಿದ ವರ್ಗಗಳ ಕಲ್ಯಾಣ, ಅಜಯ್ ಸಿಂಗ್‌ಗೆ- ಆಹಾರ ಮತ್ತು ನಾಗರಿಕ ಪೂರೈಕೆ, ಸಂತೋಷ್‌ಲಾಡ್‌ಗೆ- ಕಾರ್ಮಿಕ ಸೇರಿದಂತೆ ಕೆಲ ಖಾತೆಗಳ ಹಂಚಿಕೆ ಕುರಿತು ಚರ್ಚೆಗಳಾಗಿವೆ.

ಉಳಿದಂತೆ ಚೆಲುವರಾಯಸ್ವಾಮಿಗೆ- ಕೃಷಿ, ಮಧುಬಂಗಾರಪ್ಪ ಅವರಿಗೆ-ಶಾಲಾ ಶಿಕ್ಷಣ, ಸಾಕ್ಷರತೆ, ಜಮೀರ್ ಅಹಮದ್ ಖಾನ್‌ಗೆ- ಅಲ್ಪಸಂಖ್ಯಾತರ ಅಭಿವೃದ್ಧಿ ಖಾತೆ ಹಂಚಿಕೆಯಾಗುವ ಸಾಧ್ಯತೆ ಇದೆ.ಬಿ.ನಾಗೇಂದ್ರ ಅವರ ಪರಿಸ್ಥಿತಿ ಗೊಂದಲಕಾರಿಯಾಗಿದೆ. ಇಂದು ಸಂಜೆ ಒಳಗಾಗಿ ಮುಖ್ಯಮಂತ್ರಿಯವರು ಖಾತೆ ಹಂಚಿಕೆ ಪಟ್ಟಿಯನ್ನು ರಾಜ್ಯಪಾಲರಿಗೆ ರವಾನಿಸಲಿದ್ದಾರೆ ಎಂದು ತಿಳಿದು ಬಂದಿದೆ.

ಕೊಲೆ ಪ್ರಕರಣದಿಂದ ಭೀಮರಾಯ ಹದ್ದಿನಾಳ ಕೈಬಿಡಲು ಎನ್. ರಘುವೀರ ನಾಯಕ ಆಗ್ರಹ

ವ್ಯಕ್ತಿಯನ್ನು ಯಾವ ಕಾರಣಕ್ಕಾಗಿ ಆರೋಪಿಯನ್ನಾಗಿ ಸೇರಿಸಲಾಗಿದೆ ಹಾಗೂ ಯಾರ ಒತ್ತಡಕ್ಕೆ ಮಣಿದು ಈ ಕ್ರಮ ಕೈಗೊಳ್ಳಲಾಗಿದೆ ಎಂಬುದನ್ನು ಪೊಲೀಸ್ ಇಲಾಖೆ ಸ್ಪಷ್ಟಪಡಿಸಬೇಕು ಎಂದು ಒತ್ತಾಯಿಸಿದರು.

ಭೀಮರಾಯ ಹದ್ದಿನಾಳ ಅವರು 33 ವರ್ಷಗಳಿಂದ ಪತ್ರಿಕೋದ್ಯಮ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಕಳೆದ 15 ವರ್ಷಗಳಿಂದ ರಾಯಚೂರಿನಲ್ಲಿ ವಾಸವಾಗಿದ್ದಾರೆ. ಪತ್ರಕರ್ತರು ಕರ್ತವ್ಯದ ನಿಮಿತ್ತ ಘಟನೆ ನಡೆದ ಸ್ಥಳಕ್ಕೆ ತೆರಳಿ ವರದಿ ಮಾಡುವುದು ಸಹಜ. ಹೀಗಾಗಿ ಘಟನೆ ಸ್ಥಳದಲ್ಲಿ ಪತ್ರಕರ್ತರು ಹಾಗೂ ಪೊಲೀಸರು ಹಾಜರಿರುವುದನ್ನು ಅಪರಾಧದೊಂದಿಗೆ ತಳುಕು ಹಾಕಬಾರದು ಎಂದರು.

ಪ್ರಕರಣಕ್ಕೆ ಸಂಬಂಧಿಸಿದ ಸಿಡಿಆರ್ ಸಿಸಿಟಿವಿ ದೃಶ್ಯಗಳು, ಮೊಬೈಲ್ ಲೊಕೇಶನ್ ಸೇರಿದಂತೆ ಎಲ್ಲ ಸಾಕ್ಷ್ಯಾಧಾರಗಳನ್ನು ಸಮಗ್ರವಾಗಿ ಪರಿಶೀಲಿಸಬೇಕು. ಕೇವಲ ಹೇಳಿಕೆ ಅಥವಾ ಒತ್ತಡದ ಆಧಾರದ ಮೇಲೆ ಪತ್ರಕರ್ತರೊಬ್ಬರನ್ನು ಪ್ರಕರಣದಲ್ಲಿ ಆರೋಪಿಯನ್ನಾಗಿ ಮಾಡುವುದು ಸರಿಯಲ್ಲ ಎಂದು ಹೇಳಿದರು.

ಎಫ್‌ಐಆರ್‌ನಲ್ಲಿ ಹೆಸರು ಸೇರ್ಪಡೆಯಾದ ಹಿನ್ನೆಲೆಯಲ್ಲಿ ಭೀಮರಾಯ ಹದ್ದಿನಾಳ ಹಾಗೂ ಅವರ ಕುಟುಂಬಕ್ಕೆ ಮಾನಸಿಕ ಆಘಾತ ಉಂಟಾಗಿದೆ. ನ್ಯಾಯಸಮ್ಮತ ತನಿಖೆ ನಡೆಸಿ, ಪ್ರಕರಣದಲ್ಲಿ ಅವರ ಪಾತ್ರವಿಲ್ಲ ಎಂಬುದು ದೃಢಪಟ್ಟರೆ ಆರೋಪಿಗಳ ಪಟ್ಟಿಯಿಂದ ಅವರನ್ನು ಕೈಬಿಟ್ಟು ಗೌರವಯುತವಾಗಿ ಬದುಕಲು ಅವಕಾಶ ಕಲ್ಪಿಸಬೇಕು ಎಂದು ಆಗ್ರಹಿಸಿದರು.

ಭೀಮರಾಯ ಹದ್ದಿನಾಳ ಅವರ ಬಂಧನಕ್ಕೆ ಯಾವುದೇ ರೀತಿಯ ಪ್ರಯತ್ನ ನಡೆದರೆ ಸಂಘ ಹಾಗೂ ಸಮಾಜದ ವತಿಯಿಂದ ಉಗ್ರ ಹೋರಾಟ ನಡೆಸಲಾಗುವುದು. ಮುಂದಾಗುವ ಯಾವುದೇ ಬೆಳವಣಿಗೆಗೆ ಪೊಲೀಸ್ ಇಲಾಖೆಯೇ ಹೊಣೆಗಾರರಾಗಬೇಕಾಗುತ್ತದೆ ಎಂದು ರಘುವೀರ ನಾಯಕ ಎಚ್ಚರಿಸಿದರು. ಸುದ್ದಿಗೋಷ್ಠಿಯಲ್ಲಿ ರಾಮು ನಾಯಕ್, ಮಲ್ಲೇಶ್ ನಾಯಕ್, ರಂಗಸ್ವಾಮಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

ನಿಮ್ಮೂರು ಸುದ್ದಿ

ಸಂಪಾದಕೀಯ



ಮಧ್ಯಪ್ರದೇಶದ ಡಿಂಡೋರಿಯಲ್ಲಿ ಆದಿವಾಸಿಗಳು ಪೂಜಿಸುತ್ತಿದ್ದ ಪವಿತ್ರ ಶಿಲೆ

6.5 ಕೋಟಿ ವರ್ಷಗಳ ಹಿಂದಿನ ಭೌಗೋಳಿಕ ವಸ್ತು, ಸಾವಿರಾರು ವರ್ಷಗಳ ಮಾನವ ಆರಾಧನಾ ಪರಂಪರೆ, ಮತ್ತು ಇಂದಿನ ಆಧುನಿಕ ವೈಜ್ಞಾನಿಕ ಗುರುತಿಸುವಿಕೆ. ಪ್ರಕೃತಿಯ ಮೇಲಿನ ಅಗಾಧ ಭಕ್ತಿಯಿಂದ, 6.5 ಕೋಟಿ ವರ್ಷಗಳ ಹಳೆಯ ಹವಳದ ಪಳೆಯುಳಿಕೆಯನ್ನು ಪವಿತ್ರ ಶಿಲೆಯೆಂದು ಆರಾಧಿಸಿ ಸಂರಕ್ಷಿಸಿದ ಬೈಗಾ ಆದಿವಾಸಿಗಳ ಪರಂಪರೆ ನಿಜಕ್ಕೂ ಶ್ಲಾಘನೀಯ. ಇದು ಕೇವಲ ಒಂದು ಕಲ್ಲಿನ ಕಥೆಯಲ್ಲ; ಬದಲಾಗಿ ಮನುಷ್ಯ, ನಂಬಿಕೆ ಮತ್ತು ಭೂಮಿಯ ಇತಿಹಾಸದ ನಡುವಿನ ಅವಿನಾಭಾವ ಸಂಬಂಧವನ್ನು ಸಾರುವ ಅಮರ ಕಾವ್ಯವಾಗಿದೆ.

ನಮ್ಮ ಈ ವಿಸ್ಮಯಕಾರಿ ಭೂಮಿ ಹುಟ್ಟಿ ಬರೋಬ್ಬರಿ 454 ಕೋಟಿ ವರ್ಷಗಳಾಗಿವೆ ಎಂದು ವಿಜ್ಞಾನ ಹೇಳುತ್ತದೆ. ಈ ಸುದೀರ್ಘವಾದ ಇತಿಹಾಸದ ಪುಟಗಳಲ್ಲಿ ಅಡಗಿರುವ ಎಷ್ಟೋ ರಹಸ್ಯಗಳು ಇಂದಿಗೂ ನಿಗೂಢವಾಗಿಯೇ ಉಳಿದಿವೆ. ಕಾಲಗರ್ಭದಲ್ಲಿ ಹುದುಗಿರುವ ಇಂತಹದ್ದೇ ಒಂದು ರೋಚಕ ಹಾಗೂ ಬೆರಗು ಮೂಡಿಸುವ ರಹಸ್ಯವೊಂದು ಮಧ್ಯಪ್ರದೇಶದ ಡಿಂಡೋರಿ ಜಿಲ್ಲೆಯ ದಟ್ಟ ಅರಣ್ಯ ಪ್ರದೇಶದಲ್ಲಿ ಬಯಲಾಗಿದೆ. ಶತಮಾನಗಳಿಂದ ಬೈಗಾ () ಸಮುದಾಯದ ಆದಿವಾಸಿಗಳು ಪೂಜಿಸಿಕೊಂಡು ಬರುತ್ತಿದ್ದ ಪವಿತ್ರ ಶಿಲೆಯೊಂದನ್ನು, 6.5 ಕೋಟಿ ವರ್ಷಗಳಷ್ಟು ಹಳೆಯದಾದ ಅತ್ಯಂತ ಅಪರೂಪದ ಹವಳದ ಪಳೆಯುಳಿಕೆ ( ) ಎಂದು ತಜ್ಞರು ಗುರುತಿಸಿದ್ದು, ಇದು ಇದೀಗ ತಜ್ಞರ ಹಾಗೂ ಪರಿಸರಾಸಕ್ತರ ಗಮನ ಸೆಳೆದಿದೆ.

ಈ 454 ಕೋಟಿ ವರ್ಷಗಳೆಂಬ ಸುದೀರ್ಘ ಹಿನ್ನೆಲೆಯನ್ನು ಅರಿಯಲು ಭೂಮಿಯ ಉಗಮದತ್ತ ಒಮ್ಮೆ ಕಣ್ಣಾಯಿಸಬೇಕು. ಖಗೋಳ ವಿಜ್ಞಾನಿಗಳ ಪ್ರಕಾರ, ಸೌರವ್ಯೂಹದ ಆರಂಭಿಕ ಹಂತದಲ್ಲಿ ಸೂರ್ಯನ ಸುತ್ತ ಸುತ್ತುತ್ತಿದ್ದ ಬೃಹತ್ ಅನಿಲ ಮತ್ತು ಬಾಹ್ಯಾಕಾಶದ ಧೂಳಿನ ಮೋಡಗಳ ( ) ಸಂಯೋಜನೆ ಹಾಗೂ ಗುರುತ್ವಾಕರ್ಷಣೆಯ ಪರಿಣಾಮವಾಗಿ ಭೂಮಿ ರೂಪುಗೊಂಡಿತು. ಆರಂಭದಲ್ಲಿ ಅತ್ಯಂತ ಬಿಸಿಯಾದ, ಕುದಿಯುವ ಶಿಲಾರಸದಿಂದ () ಕೂಡಿದ್ದ ಈ ಗ್ರಹ, ಕೋಟ್ಯಂತರ ವರ್ಷಗಳ ನಿರಂತರ ಪ್ರಕ್ರಿಯೆಯ ನಂತರ ತಂಪಾಗಿ ಗಟ್ಟಿಯಾದ ಮೇಲ್ಮೈ () ಹಾಗೂ ಜಲಮೂಲಗಳನ್ನು ಸೃಷ್ಟಿಸಿಕೊಂಡು ಜೀವಸಂಕುಲಕ್ಕೆ ಆಶ್ರಯವಾಯಿತು. ಇಂತಹ ಊಹೆಗೂ ನಿಲುಕದ ಅಗಾಧವಾದ ಭೂವಿಕಾಸದ ಹಾದಿಯಲ್ಲಿ, 6.5 ಕೋಟಿ ವರ್ಷಗಳ ಹಿಂದಿನ ಈ ಪಳೆಯುಳಿಕೆಯು ನಮ್ಮ ಗ್ರಹದ ಕಥೆಯ ಒಂದು ಪ್ರಮುಖ ಅಧ್ಯಾಯವನ್ನು ನಮ್ಮ ಮುಂದಿಡುತ್ತದೆ.

ಡಿಂಡೋರಿ ಜಿಲ್ಲೆಯ ಅರಣ್ಯ ಪ್ರದೇಶದಲ್ಲಿರುವ ಗುಡಿಯೊಂದರಲ್ಲಿ ಈ ವಿಶಿಷ್ಟವಾದ ಕಲ್ಲನ್ನು ಪವಿತ್ರ ದೈವವೆಂದು ಭಾವಿಸಿ ಆರಾಧಿಸಲಾಗುತ್ತಿತ್ತು. ಇತ್ತೀಚೆಗೆ ಮಧ್ಯಪ್ರದೇಶದ ಪುರಾತತ್ವ, ಪತ್ರಾಗಾರ ಮತ್ತು ವಸ್ತುಸಂಗ್ರಹಾಲಯ ನಿರ್ದೇಶನಾಲಯದ (,) ತಜ್ಞರ ತಂಡವು ಈ ಪ್ರದೇಶದ ಭೌಗೋಳಿಕ ಸಂಪತ್ತಿನ ಬಗ್ಗೆ ಸಮೀಕ್ಷೆ ನಡೆಸಿದಾಗ ಈ ಅಚ್ಚರಿಯ ಸತ್ಯ ಹೊರಬಿದ್ದಿದೆ. ಕಾಡಿನ ಮಧ್ಯೆ ಆದಿವಾಸಿಗಳ ಆರಾಧನೆಗೆ ಒಳಪಟ್ಟಿದ್ದ ಈ ಕಲ್ಲು ಕೇವಲ ಸಾಮಾನ್ಯ ಶಿಲೆಯಲ್ಲ, ಬದಲಾಗಿ ಅದು ಸುಮಾರು 6.5 ಕೋಟಿ ವರ್ಷಗಳ ಹಿಂದಿನ ಹವಳದ ಪಳೆಯುಳಿಕೆ ಎಂದು ತಜ್ಞರು ಗುರುತಿಸಿದ್ದಾರೆ. ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ () ಪುರಾತತ್ವಶಾಸ್ತ್ರಜ್ಞ ಡಾ. ಮನೋಜ್ ಕುಮಾರ್ ಕುರ್ಮಿ ಅವರು ಸಹ ಈ ಶಿಲೆಯ ಕುರಿತು ಅಧ್ಯಯನ ನಡೆಸಿ, ಇದರ ಐತಿಹಾಸಿಕ ಮಹತ್ವವನ್ನು ವಿಶ್ಲೇಷಿಸಿದ್ದಾರೆ.

ಕಾಡೇ ತಮ್ಮ ಬದುಕು ಎಂದು ನಂಬಿರುವ ಬೈಗಾ ಆದಿವಾಸಿಗಳಿಗೆ ಪ್ರಕೃತಿಯೇ ಮೂಲ ದೇವರು. ಆ ನಿರ್ದಿಷ್ಟ ಶಿಲೆಯ ರಚನೆ, ಅದರ ಮೇಲಿದ್ದ ವಿಶಿಷ್ಟವಾದ ಪದರಗಳು ಮತ್ತು ಹವಳದಂತಹ ವಿನ್ಯಾಸವು (, -) ತಲೆಮಾರುಗಳ ಹಿಂದೆಯೇ ಅವರನ್ನು ಆಕರ್ಷಿಸಿತ್ತು. ತಜ್ಞರ ಅಂದಾಜಿನ ಪ್ರಕಾರ, ಈ ಶಿಲೆಯನ್ನು ಆರಾಧಿಸುವ ಗುಡಿಯ ಪರಂಪರೆಯು ಸುಮಾರು 8,000 ದಿಂದ 10,000 ವರ್ಷಗಳಷ್ಟು ಹಳೆಯದಾಗಿರಬಹುದು! ಪಳೆಯುಳಿಕೆಯ ಮಹತ್ವವನ್ನು ಅರಿತಿದ್ದ ಆದಿವಾಸಿಗಳು, ಅದರ ಸುತ್ತ ಗುಡಿಯೊಂದನ್ನು ನಿರ್ಮಿಸಿ ತಲೆಮಾರುಗಳಿಂದ ಅದರ ರಕ್ಷಣೆ ಮಾಡುತ್ತಾ ಬಂದಿದ್ದಾರೆ. ಅವರ ಈ ನಂಬಿಕೆ ಮತ್ತು ಪರಂಪರೆಯ ಜ್ಞಾನವೇ ಇಂದು ಭೂಮಿಯ ಇತಿಹಾಸದ ಮಹತ್ವದ ಕೊಂಡಿಯೊಂದನ್ನು ಉಳಿಸುವಲ್ಲಿ ಯಶಸ್ವಿಯಾಗಿದೆ.

ಸುಮಾರು 6.5 ಕೋಟಿ ವರ್ಷಗಳ ಹಿಂದಿನ ಈ ಪಳೆಯುಳಿಕೆಯ ಕಾಲಘಟ್ಟವು ಭೂಮಿಯ ಇತಿಹಾಸದ ಮಹತ್ವದ ತಿರುವಿನ ಸಮೀಪದಲ್ಲಿದೆ. ವಿಜ್ಞಾನಿಗಳ ಪ್ರಕಾರ, ಸುಮಾರು 6.6 ಕೋಟಿ ವರ್ಷಗಳ ಹಿಂದೆ ನಡೆದ ಕೆ-ಪಿಜಿ (-) ಸಾಮೂಹಿಕ ವಿನಾಶದಲ್ಲಿ ಡೈನೋಸಾರ್‌ಗಳು ಸೇರಿದಂತೆ ಭೂಮಿಯ ಮೇಲಿದ್ದ ಅನೇಕ ಜೀವಸಂಕುಲಗಳು ನಾಶವಾದವು. ಇದೇ ವಿಶಾಲ ಕಾಲಘಟ್ಟದಲ್ಲಿ ಭಾರತದ ದಖನ್ ಪ್ರದೇಶದಲ್ಲಿ ( ) ಭಾರಿ ಜ್ವಾಲಾಮುಖಿ ಚಟುವಟಿಕೆಗಳೂ ನಡೆದಿದ್ದವು. ಅಂತಹ ರೋಚಕ ಭೌಗೋಳಿಕ ಬದಲಾವಣೆಗಳ ಕಾಲಘಟ್ಟದಲ್ಲಿ ಜೀವಿಸಿದ್ದ ಹವಳವೊಂದು ಕಾಲಾನಂತರದಲ್ಲಿ ಪಳೆಯುಳಿಕೆಯಾಗಿ ರೂಪುಗೊಂಡು ಇಂದು ನಮ್ಮ ಮುಂದಿದೆ.

ಸಾಮಾನ್ಯವಾಗಿ ಹವಳಗಳು () ಸಮುದ್ರ ಅಥವಾ ಉಪ್ಪುನೀರಿನ ಜಲಮೂಲಗಳಲ್ಲಿ ಮಾತ್ರ ಕಂಡುಬರುತ್ತವೆ. ಆದರೆ, ಇಂದು ದಟ್ಟ ಅರಣ್ಯ ಹಾಗೂ ಗುಡ್ಡಗಾಡು ಪ್ರದೇಶವಾಗಿರುವ ಮಧ್ಯಪ್ರದೇಶದ ಡಿಂಡೋರಿಯಲ್ಲಿ ಇಂತಹ ಜೀವಿಗಳ ಪಳೆಯುಳಿಕೆ ಸಿಕ್ಕಿರುವುದು ಕುತೂಹಲಕಾರಿಯಾಗಿದೆ. ಈ ಪಳೆಯುಳಿಕೆಯ ಭೌಗೋಳಿಕ ಹಿನ್ನೆಲೆ, ಅದು ಯಾವ ಶಿಲಾಸ್ತರದಲ್ಲಿ ರೂಪುಗೊಂಡಿತು ಮತ್ತು ಅದರ ಸುತ್ತಲಿನ ಭೂವೈಜ್ಞಾನಿಕ ರಚನೆಗಳು ಕಾಲಕ್ರಮೇಣ ಹೇಗೆ ಬದಲಾಗಿವೆ ಎಂಬುದನ್ನು ಆಳವಾಗಿ ಅಧ್ಯಯನ ಮಾಡಿದರೆ, ಪ್ರಾಚೀನ ಭಾರತದ ಪರಿಸರ ಮತ್ತು ಭೂವೈಜ್ಞಾನಿಕ ಇತಿಹಾಸದ ಕುರಿತು ಹೆಚ್ಚಿನ ಹಾಗೂ ನಿಖರ ಮಾಹಿತಿ ದೊರೆಯಬಹುದು ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಡಿಂಡೋರಿ ಜಿಲ್ಲೆ ಪಳೆಯುಳಿಕೆಗಳ ಪಾಲಿಗೆ ಹೊಸದೇನಲ್ಲ. ಈ ಪ್ರದೇಶದಲ್ಲಿ ಈಗಾಗಲೇ 75 ಎಕರೆ ವಿಸ್ತೀರ್ಣದ ಘುಘ್ವಾ ಫಾಸಿಲ್ ನ್ಯಾಷನಲ್ ಪಾರ್ಕ್ ( ) ಇದ್ದು, ಅಲ್ಲಿ 4 ಕೋಟಿಯಿಂದ 15 ಕೋಟಿ ವರ್ಷಗಳಷ್ಟು ಹಳೆಯದಾದ ಅಪರೂಪದ ಸಸ್ಯಗಳ ಪಳೆಯುಳಿಕೆಗಳನ್ನು ಸಂರಕ್ಷಿಸಲಾಗಿದೆ. ಈಗ ಬೈಗಾ ಆದಿವಾಸಿಗಳ ಪೂಜಾ ಸ್ಥಳದಲ್ಲಿ ಪತ್ತೆಯಾಗಿರುವ ಈ ಹವಳದ ಪಳೆಯುಳಿಕೆಯು, ಡಿಂಡೋರಿ ಜಿಲ್ಲೆಯು ಭೌಗೋಳಿಕ ವಿಸ್ಮಯಗಳ ಬೀಡು ಎಂಬುದನ್ನು ಮತ್ತೊಮ್ಮೆ ನಿರೂಪಿಸಿದೆ.

ಇದೊಂದು ಅಪರೂಪದ ನಿದರ್ಶನವಾಗಿದ್ದು, ಇಲ್ಲಿ ಆಧುನಿಕ ವಿಜ್ಞಾನ ಮತ್ತು ಜನರ ಪ್ರಾಚೀನ ನಂಬಿಕೆಗಳು ಮುಖಾಮುಖಿಯಾಗಿವೆ. ಎಎಸ್‌ಐ ಪುರಾತತ್ವ ತಜ್ಞ ಡಾ. ಮನೋಜ್ ಕುಮಾರ್ ಕುರ್ಮಿ ಅವರು ವಿಶ್ಲೇಷಿಸುವಂತೆ, ಬಹಳ ಹಿಂದಿನ ಕಾಲದಲ್ಲಿ ಜನರು ಪ್ರಕೃತಿಯಲ್ಲಿ ಕಂಡುಬರುವ ವಿಶಿಷ್ಟವಾದ ಮರ, ಬೆಟ್ಟ ಅಥವಾ ಕಲ್ಲುಗಳನ್ನು ದೈವಿಕ ಶಕ್ತಿಯ ಸಂಕೇತವೆಂದು ಪೂಜಿಸುತ್ತಿದ್ದಿರಬಹುದು. ಬೈಗಾ ಆದಿವಾಸಿಗಳ ಈ ನಿಷ್ಕಲ್ಮಶ ಪ್ರಕೃತಿ ಆರಾಧನಾ ಪದ್ಧತಿಯೇ, ಕೋಟ್ಯಂತರ ವರ್ಷಗಳ ಹಿಂದಿನ ಈ ಪಳೆಯುಳಿಕೆಯನ್ನು ಮಳೆಯಿಂದ, ಬಿಸಿಲಿನಿಂದ ಹಾಗೂ ಭೂಗಳ್ಳರ, ಪ್ರಾಕೃತಿಕ ಸಂಪತ್ತು ಲೂಟಿ ಹೊಡೆಯುವರಿಂದ ಬಹುಶಃ ಸಂರಕ್ಷಿಸಿರಬಹುದು.

ಈ ಮಹತ್ವದ ಶೋಧನೆಯ ನಂತರ, ಆಯುಕ್ತ ಮದನ್ ಕುಮಾರ್ ನಾಗರಗೋಜೆಯವರ ನೇತೃತ್ವದಲ್ಲಿ ಅಧಿಕಾರಿಗಳು ಡಿಂಡೋರಿಯ ಈ ಅಪಾರ ಭೂವೈಜ್ಞಾನಿಕ ಸಂಪತ್ತಿನ ನಿಖರ ದಾಖಲೀಕರಣವನ್ನು ಆರಂಭಿಸಿದ್ದಾರೆ. ಭೋಪಾಲ್‌ನಲ್ಲಿರುವ ರಾಜ್ಯ ವಸ್ತುಸಂಗ್ರಹಾಲಯದ ( ) ಹೊಸ ಗ್ಯಾಲರಿಯಲ್ಲಿ ಈ ಅಪರೂಪದ ಪಳೆಯುಳಿಕೆಗಳ ಮಾದರಿಗಳನ್ನು ಪ್ರದರ್ಶಿಸುವ ಮೂಲಕ, ಸಾಮಾನ್ಯ ಜನರಿಗೂ ಈ ಮಾಹಿತಿ ತಲುಪಿಸುವ ಪ್ರಯತ್ನ ನಡೆಯುತ್ತಿದೆ. ಇದರಿಂದ ಡಿಂಡೋರಿಯ ಭೂವೈಜ್ಞಾನಿಕ ಹಾಗೂ ಮಾನವ-ಸಾಂಸ್ಕೃತಿಕ ಪರಂಪರೆಯ ಕುರಿತು ಹೆಚ್ಚಿನ ಅಧ್ಯಯನಕ್ಕೆ ಮುಕ್ತ ಅವಕಾಶ ಸಿಕ್ಕಂತಾಗಿದೆ.

ಈ ಘಟನೆಯು ಅತ್ಯಂತ ರೋಚಕವಾದ ಮೂರು ಕಾಲಘಟ್ಟಗಳನ್ನು ಬೆಸೆಯುತ್ತದೆ; 6.5 ಕೋಟಿ ವರ್ಷಗಳ ಹಿಂದಿನ ಭೌಗೋಳಿಕ ವಸ್ತು, ಸಾವಿರಾರು ವರ್ಷಗಳ ಮಾನವ ಆರಾಧನಾ ಪರಂಪರೆ, ಮತ್ತು ಇಂದಿನ ಆಧುನಿಕ ವೈಜ್ಞಾನಿಕ ಗುರುತಿಸುವಿಕೆ. ಪ್ರಕೃತಿಯ ಮೇಲಿನ ಅಗಾಧ ಭಕ್ತಿಯಿಂದ, 6.5 ಕೋಟಿ ವರ್ಷಗಳ ಹಳೆಯ ಹವಳದ ಪಳೆಯುಳಿಕೆಯನ್ನು ಪವಿತ್ರ ಶಿಲೆಯೆಂದು ಆರಾಧಿಸಿ ಸಂರಕ್ಷಿಸಿದ ಬೈಗಾ ಆದಿವಾಸಿಗಳ ಪರಂಪರೆ ನಿಜಕ್ಕೂ ಶ್ಲಾಘನೀಯ. ಇದು ಕೇವಲ ಒಂದು ಕಲ್ಲಿನ ಕಥೆಯಲ್ಲ; ಬದಲಾಗಿ ಮನುಷ್ಯ, ನಂಬಿಕೆ ಮತ್ತು ಭೂಮಿಯ ಇತಿಹಾಸದ ನಡುವಿನ ಅವಿನಾಭಾವ ಸಂಬಂಧವನ್ನು ಸಾರುವ ಅಮರ ಕಾವ್ಯವಾಗಿದೆ.

ಎಂಎಸ್ಸಿ ಎಲೆಕ್ಟ್ರಾನಿಕ್ ಮೀಡಿಯಾ - ಬದಲಾಗುತ್ತಿರುವ ಜಗತ್ತಿನಲ್ಲಿ ಭವಿಷ್ಯ ಕಟ್ಟಿಕೊಳ್ಳುವ ದಾರಿ

ಎಂಎಸ್ಸಿ ಎಲೆಕ್ಟ್ರಾನಿಕ್ ಮೀಡಿಯಾ ಎನ್ನುವುದು ಕೇವಲ ಒಂದು ಕೋರ್ಸ್ ಅಲ್ಲ. ಬದಲಾಗುತ್ತಿರುವ ಮಾಧ್ಯಮ ಜಗತ್ತಿಗೆ ವಿದ್ಯಾರ್ಥಿಗಳನ್ನು ಸಿದ್ಧಪಡಿಸುವ ಒಂದು ಅವಕಾಶ. ಈ ಕೋರ್ಸ್ ಆಯ್ಕೆ ಮಾಡಿಕೊಳ್ಳುವ ವಿದ್ಯಾರ್ಥಿಗಳು ತಂತ್ರಜ್ಞಾನ ಕಲಿಯಬೇಕು, ಸೃಜನಶೀಲತೆಯನ್ನು ಬೆಳೆಸಿಕೊಳ್ಳಬೇಕು, ಸಂವಹನ ಕೌಶಲ್ಯ ಹೆಚ್ಚಿಸಿಕೊಳ್ಳಬೇಕು, ಕನ್ನಡ ಸೇರಿದಂತೆ ಭಾಷಾ ಸಾಮರ್ಥ್ಯ ಬೆಳೆಸಿಕೊಳ್ಳಬೇಕು ಮತ್ತು ನಿರಂತರವಾಗಿ ಹೊಸದನ್ನು ಕಲಿಯುವ ಮನೋಭಾವ ಹೊಂದಬೇಕು.

ಮಾಧ್ಯಮ ಕ್ಷೇತ್ರ ಬದಲಾಗುತ್ತಿದೆ. ಅದರೊಂದಿಗೆ ಉದ್ಯೋಗದ ಸ್ವರೂಪವೂ ಬದಲಾಗುತ್ತಿದೆ. ಈ ಬದಲಾವಣೆಯನ್ನು ಅರ್ಥಮಾಡಿಕೊಂಡು ಕೌಶಲ್ಯ ಬೆಳೆಸಿಕೊಳ್ಳುವವರಿಗೆ ಎಲೆಕ್ಟ್ರಾನಿಕ್ ಮೀಡಿಯಾ ಕ್ಷೇತ್ರದಲ್ಲಿ ಅವಕಾಶಗಳ ಕೊರತೆಯಿಲ್ಲ.

ವಿದ್ಯಾರ್ಥಿಗಳ ಜೀವನದಲ್ಲಿ ಪದವಿ ಆಯ್ಕೆ ಎನ್ನುವುದು ಅತ್ಯಂತ ಮಹತ್ವದ ನಿರ್ಧಾರ. ಯಾವ ಕೋರ್ಸ್ ಓದಬೇಕು? ಓದಿದ ನಂತರ ಉದ್ಯೋಗ ಸಿಗುತ್ತದೆಯೇ? ಭವಿಷ್ಯದಲ್ಲಿ ಆ ಕ್ಷೇತ್ರಕ್ಕೆ ಬೇಡಿಕೆ ಇರುತ್ತದೆಯೇ? ಉದ್ಯೋಗ ಭದ್ರತೆ ಹೇಗಿರುತ್ತದೆ? ಇಂತಹ ಹಲವು ಪ್ರಶ್ನೆಗಳು ವಿದ್ಯಾರ್ಥಿಗಳು ಮತ್ತು ಪೋಷಕರ ಮನಸ್ಸಿ ನಲ್ಲಿ ಸಹಜವಾಗಿಯೇ ಮೂಡುತ್ತವೆ.

ಈ ಪ್ರಶ್ನೆಗಳಿಗೆ ಉತ್ತರ ಹುಡುಕುವಾಗ ಇಂದು ಎಂಎಸ್ಸಿ ಎಲೆಕ್ಟ್ರಾನಿಕ್ ಮೀಡಿಯಾ ಒಂದು ಗಮನಾರ್ಹ ಆಯ್ಕೆಯಾಗಿ ಕಾಣಿಸಿಕೊಳ್ಳುತ್ತದೆ. ಏಕೆಂದರೆ ಇದು ಕೇವಲ ಒಂದು ಪದವಿ ಅಲ್ಲ. ತಂತ್ರಜ್ಞಾನ, ಸೃಜನಶೀಲತೆ, ಸಂವಹನ ಮತ್ತು ಉದ್ಯೋಗ ಕೌಶಲ್ಯಗಳನ್ನು ಒಂದೇ ವೇದಿಕೆಯಲ್ಲಿ ಬೆಳೆಸುವ ಶಿಕ್ಷಣ.

ಒಂದು ಕಾಲದಲ್ಲಿ ಮಾಧ್ಯಮ ಎಂದರೆ ಪತ್ರಿಕೆ, ರೇಡಿಯೋ ಮತ್ತು ದೂರದರ್ಶನ. ಆದರೆ ಇಂದು ಮಾಧ್ಯಮದ ವ್ಯಾಪ್ತಿ ಬಹಳ ವಿಸ್ತಾರವಾಗಿದೆ.

ಸ್ಮಾರ್ಟ್‌ಫೋನ್ ನಮ್ಮ ಕೈಯಲ್ಲೇ ಕ್ಯಾಮೆರಾವನ್ನು ತಂದಿದೆ. ಸಾಮಾಜಿಕ ಜಾಲತಾಣಗಳು ಪ್ರತಿಯೊಬ್ಬರನ್ನೂ ಒಂದು ರೀತಿಯಲ್ಲಿ ಕಂಟೆಂಟ್ ಕ್ರಿಯೇಟರ್‌ಗಳನ್ನಾಗಿ ಮಾಡಿವೆ. ಯೂಟ್ಯೂಬ್, ಒಟಿಟಿ, ಪಾಡ್‌ಕಾಸ್ಟ್, ಡಿಜಿಟಲ್ ನ್ಯೂಸ್, ಇನ್‌ಸ್ಟಾಗ್ರಾಂ, ಫೇಸ್‌ಬುಕ್, ಶಾರ್ಟ್ ವಿಡಿಯೋ ವೇದಿಕೆಗಳು, ಡಿಜಿಟಲ್ ಜಾಹೀರಾತು ಹಾಗೂ ಕಾರ್ಪೊರೇಟ್ ಕಮ್ಯುನಿಕೇಷನ್‌ಗಳು ಮಾಧ್ಯಮ ಕ್ಷೇತ್ರದ ವ್ಯಾಪ್ತಿಯನ್ನು ಮತ್ತಷ್ಟು ವಿಸ್ತರಿಸಿವೆ. ಈ ಬದಲಾವಣೆಯ ಪರಿಣಾಮವಾಗಿ ಮಾಧ್ಯಮ ಕ್ಷೇತ್ರದಲ್ಲಿ ಹೊಸ ಉದ್ಯೋಗಗಳು ಸೃಷ್ಟಿಯಾಗುತ್ತಿವೆ. ಆದ್ದರಿಂದ ಎಲೆಕ್ಟ್ರಾನಿಕ್ ಮೀಡಿಯಾ ಓದುವ ವಿದ್ಯಾರ್ಥಿಗಳಿಗೆ ಭವಿಷ್ಯ ಕೇವಲ ಟಿವಿ ಚಾನೆಲ್‌ಗಳಲ್ಲಿ ಕೆಲಸ ಮಾಡುವುದಕ್ಕೆ ಸೀಮಿತವಾಗಿಲ್ಲ.

ಎಂಎಸ್ಸಿ ಎಲೆಕ್ಟ್ರಾನಿಕ್ ಮೀಡಿಯಾ ಆಯ್ಕೆ ಮಾಡಿಕೊಳ್ಳಲು ಮೊದಲ ಕಾರಣವೆಂದರೆ ಇದು ಬಹುಮುಖ ಕೌಶಲ್ಯಗಳನ್ನು ಕಲಿಸುವ ಕ್ಷೇತ್ರ.

ಕ್ಯಾಮೆರಾ ನಿರ್ವಹಣೆ, ವಿಡಿಯೋ ಎಡಿಟಿಂಗ್, ಸ್ಕ್ರಿಪ್ಟ್ ರೈಟಿಂಗ್, ನ್ಯೂಸ್ ಪ್ರೊಡಕ್ಷನ್, ಆಡಿಯೋ-ವಿಜುವಲ್ ಪ್ರೊಡಕ್ಷನ್, ಡಿಜಿಟಲ್ ಕಂಟೆಂಟ್, ಗ್ರಾಫಿಕ್ ಡಿಸೈನ್, ಪಾಡ್‌ಕಾಸ್ಟ್, ಮೊಬೈಲ್ ಜರ್ನಲಿಸಂ, ಸಾಮಾಜಿಕ ಮಾಧ್ಯಮ ನಿರ್ವಹಣೆ, ಡಿಜಿಟಲ್ ಮಾರ್ಕೆಟಿಂಗ್, ಡಾಕ್ಯುಮೆಂಟರಿ ನಿರ್ಮಾಣ ಮುಂತಾದ ಹಲವು ಕ್ಷೇತ್ರಗಳ ಪರಿಚಯ ವಿದ್ಯಾರ್ಥಿಗಳಿಗೆ ದೊರೆಯುತ್ತದೆ. ಅಂದರೆ ಒಂದು ಕೌಶಲ್ಯಕ್ಕೆ ಸೀಮಿತವಾಗದೆ ಮಾಧ್ಯಮದ ಹಲವು ವಿಭಾಗಗಳಲ್ಲಿ ಕೆಲಸ ಮಾಡುವ ಸಾಮರ್ಥ್ಯವನ್ನು ವಿದ್ಯಾರ್ಥಿಗಳು ಬೆಳೆಸಿಕೊಳ್ಳಬಹುದು.

ಯಾವುದೇ ಒಂದು ಕೋರ್ಸ್‌ನ ಉದ್ಯೋಗಾವಕಾಶವನ್ನು ಅಳೆಯುವಾಗ, ''ಈ ಪದವಿ ಪಡೆದರೆ ಯಾವ ಒಂದು ಕೆಲಸ ಸಿಗುತ್ತದೆ?'' ಎಂಬ ಪ್ರಶ್ನೆಗಿಂತ, ''ಈ ಪದವಿ ನನ್ನ ಮುಂದೆ ಎಷ್ಟು ವೃತ್ತಿ ದಾರಿಗಳನ್ನು ತೆರೆದಿಡುತ್ತದೆ?'' ಎಂಬ ಪ್ರಶ್ನೆ ಮುಖ್ಯ. ಎಂಎಸ್ಸಿ ಎಲೆಕ್ಟ್ರಾನಿಕ್ ಮೀಡಿಯಾ ವಿದ್ಯಾರ್ಥಿಗಳ ಮುಂದೆ ಹಲವು ದಾರಿಗಳಿವೆ. ಮಾಧ್ಯಮ ಸಂಸ್ಥೆಗಳಲ್ಲಿ ವಿಡಿಯೋ ಜರ್ನಲಿಸ್ಟ್, ಕ್ಯಾಮೆರಾ ಪರ್ಸನ್, ವಿಡಿಯೋ ಎಡಿಟರ್, ಪ್ರೊಡಕ್ಷನ್ ಎಕ್ಸಿಕ್ಯೂಟಿವ್, ನ್ಯೂಸ್ ಪ್ರೊಡ್ಯೂಸರ್, ಸ್ಕ್ರಿಪ್ಟ್ ರೈಟರ್ ಆಗಿ ಕೆಲಸ ಮಾಡಬಹುದು. ಡಿಜಿಟಲ್ ಕ್ಷೇತ್ರದಲ್ಲಿ ಕಂಟೆಂಟ್ ಕ್ರಿಯೇಟರ್, ಸೋಶಿಯಲ್ ಮೀಡಿಯಾ ಮ್ಯಾನೇಜರ್, ಡಿಜಿಟಲ್ ಕಂಟೆಂಟ್ ಎಡಿಟರ್, ವಿಡಿಯೋ ಕಂಟೆಂಟ್ ಸ್ಪೆಷಲಿಸ್ಟ್, ಡಿಜಿಟಲ್ ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ ಆಗಬಹುದು.

ಕಾರ್ಪೊರೇಟ್ ಕ್ಷೇತ್ರದಲ್ಲಿ ಕಾರ್ಪೊರೇಟ್ ಕಮ್ಯುನಿಕೇಷನ್, ಬ್ರ್ಯಾಂಡ್ ಕಂಟೆಂಟ್, ಆಂತರಿಕ ಸಂವಹನ ಮತ್ತು ಡಿಜಿಟಲ್ ಕಮ್ಯುನಿಕೇಷನ್ ಕ್ಷೇತ್ರಗಳಲ್ಲಿ ಅವಕಾಶಗಳನ್ನು ಹುಡುಕಬಹುದು. ಇದರ ಜೊತೆಗೆ ಜಾಹೀರಾತು ಸಂಸ್ಥೆಗಳು, ಶಿಕ್ಷಣ ಸಂಸ್ಥೆಗಳು, ಸರ್ಕಾರಿ ಇಲಾಖೆಗಳಿಗೆ ಸಂಬಂಧಿಸಿದ ಮಾಧ್ಯಮ ವಿಭಾಗಗಳು, ಎನ್‌ಜಿಒಗಳು, ಸ್ಟಾರ್ಟ್‌ಅಪ್‌ಗಳು ಮತ್ತು ಸ್ವತಂತ್ರ ಮಾಧ್ಯಮ ಸಂಸ್ಥೆಗಳಲ್ಲಿಯೂ ಅವಕಾಶಗಳಿವೆ

ವಿದ್ಯಾರ್ಥಿಗಳು ಮತ್ತು ಪೋಷಕರಿಗೆ ಸಹಜವಾಗಿ ಬರುವ ಪ್ರಶ್ನೆ''ಈ ಕ್ಷೇತ್ರದಲ್ಲಿ ಉದ್ಯೋಗ ಭದ್ರತೆ ಇದೆಯೇ?'' ಇದಕ್ಕೆ ನೇರವಾದ ಉತ್ತರವೆಂದರೆ, ಇಂದಿನ ಬದಲಾಗುತ್ತಿರುವ ಉದ್ಯೋಗ ಮಾರುಕಟ್ಟೆಯಲ್ಲಿ ಯಾವುದೇ ಒಂದು ಪದವಿ ಶಾಶ್ವತ ಉದ್ಯೋಗದ ಖಾತರಿ ನೀಡುವುದಿಲ್ಲ.



ಆದರೆ ಬಹುಮುಖ ಕೌಶಲ್ಯ ಹೊಂದಿರುವವರಿಗೆ ಉದ್ಯೋಗದ ಅವಕಾಶಗಳನ್ನು ಉಳಿಸಿಕೊಳ್ಳುವ ಸಾಮರ್ಥ್ಯ ಹೆಚ್ಚು. ಇಲ್ಲಿ ಎಲೆಕ್ಟ್ರಾನಿಕ್ ಮೀಡಿಯಾ ಶಿಕ್ಷಣದ ಮಹತ್ವ ಬರುತ್ತದೆ. ಒಬ್ಬ ವಿದ್ಯಾರ್ಥಿಗೆ ಕ್ಯಾಮೆರಾ ಮಾತ್ರ ಗೊತ್ತಿದ್ದರೆ ಅವನ ಅವಕಾಶಗಳು ಒಂದು ಹಂತದವರೆಗೆ ಸೀಮಿತವಾಗಬಹುದು. ಆದರೆ ಕ್ಯಾಮೆರಾ ಜೊತೆಗೆ ಎಡಿಟಿಂಗ್, ಸ್ಕ್ರಿಪ್ಟ್, ಸೋಶಿಯಲ್ ಮೀಡಿಯಾ, ಡಿಜಿಟಲ್ ಕಂಟೆಂಟ್, ಗ್ರಾಫಿಕ್ಸ್ ಮತ್ತು ಎಐ ಸಾಧನಗಳ ಬಳಕೆಯ ಜ್ಞಾನವಿದ್ದರೆ ಆತ ಹಲವು ವಿಭಾಗಗಳಲ್ಲಿ ಕೆಲಸ ಮಾಡಬಲ್ಲ. ಒಂದು ಉದ್ಯೋಗ ಕಳೆದುಕೊಂಡರೂ ಮತ್ತೊಂದು ಕೌಶಲ್ಯದ ಮೂಲಕ ಹೊಸ ಅವಕಾಶ ಹುಡುಕುವ ಸಾಮರ್ಥ್ಯವೇ ಇಂದಿನ ಉದ್ಯೋಗ ಭದ್ರತೆಯ ನಿಜವಾದ ರೂಪ. ಹೀಗಾಗಿ ಎಲೆಕ್ಟ್ರಾನಿಕ್ ಮೀಡಿಯಾ ವಿದ್ಯಾರ್ಥಿಗಳು ಒಂದು ಕೆಲಸಕ್ಕಾಗಿ ಸಿದ್ಧರಾಗಬಾರದು. ಹಲವು ಕೆಲಸಗಳಿಗೆ ಅಗತ್ಯವಾಗುವ ಕೌಶಲ್ಯಕ್ಕಾಗಿ ಸಿದ್ಧರಾಗಬೇಕು.

ಇಂದು ವಿದ್ಯಾರ್ಥಿಗಳಲ್ಲಿ ಮತ್ತೊಂದು ಆತಂಕವಿದೆಕೃತಕ ಬುದ್ಧಿಮತ್ತೆ ಮಾಧ್ಯಮ ಕ್ಷೇತ್ರದ ಉದ್ಯೋಗಗಳನ್ನು ಕಡಿಮೆ ಮಾಡಬಹುದೇ? ತಂತ್ರಜ್ಞಾನ ಕೆಲವು ಕೆಲಸಗಳ ಸ್ವರೂಪವನ್ನು ಬದಲಾಯಿಸಬಹುದು. ಆದರೆ ಮಾಧ್ಯಮ ಕ್ಷೇತ್ರದಲ್ಲಿ ಮಾನವೀಯ ಸೃಜನಶೀಲತೆ, ಕಥೆ ಹೇಳುವ ಸಾಮರ್ಥ್ಯ, ಸಂದರ್ಶನ ಕೌಶಲ್ಯ, ಸ್ಥಳೀಯ ಅರಿವು, ನೈತಿಕ ನಿರ್ಧಾರ ಮತ್ತು ಪ್ರೇಕ್ಷಕರ ಮನಸ್ಥಿತಿಯನ್ನು ಅರ್ಥಮಾಡಿಕೊಳ್ಳುವ ಸಾಮರ್ಥ್ಯಕ್ಕೆ ಸದಾ ಮಹತ್ವವಿರುತ್ತದೆ. ಹೀಗಾಗಿ ಎಐಯೊಂದಿಗೆ ಸ್ಪರ್ಧಿಸುವ ಬದಲು ಎಐಯನ್ನು ಬಳಸಬಲ್ಲ ಮಾಧ್ಯಮ ವೃತ್ತಿಪರರಾಗುವುದು ಇಂದಿನ ಅಗತ್ಯ.

ಎಐ ಬಳಸಿ ಸಂಶೋಧನೆ, ಸ್ಕ್ರಿಪ್ಟ್‌ನ ಪ್ರಾಥಮಿಕ ಕೆಲಸ, ಉಪಶೀರ್ಷಿಕೆ, ಭಾಷಾಂತರ, ಗ್ರಾಫಿಕ್ಸ್, ಕಂಟೆಂಟ್ ವಿಶ್ಲೇಷಣೆ ಮತ್ತು ಎಡಿಟಿಂಗ್‌ನ ಕೆಲವು ಹಂತಗಳನ್ನು ವೇಗಗೊಳಿಸಬಹುದು. ಆದರೆ ಅಂತಿಮವಾಗಿ ಯಾವ ಕಥೆ ಹೇಳಬೇಕು, ಹೇಗೆ ಹೇಳಬೇಕು ಮತ್ತು ಅದರ ಸಾಮಾಜಿಕ ಪರಿಣಾಮವೇನು ಎಂಬುದನ್ನು ನಿರ್ಧರಿಸುವ ಮಾನವೀಯ ಬುದ್ಧಿವಂತಿಕೆಯೇ ಮುಖ್ಯ.

ಎಂಎಸ್ಸಿ ಓದುತ್ತಿರುವ ವಿದ್ಯಾರ್ಥಿಗಳು ಮತ್ತೊಂದು ವಿಷಯವನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಕೋರ್ಸ್ ಮುಗಿದ ನಂತರ ಕೆಲಸ ಹುಡುಕುವುದನ್ನು ಆರಂಭಿಸುವ ಬದಲು, ಕೋರ್ಸ್‌ನ ಮೊದಲ ದಿನದಿಂದಲೇ ಕೆಲಸಕ್ಕೆ ಸಿದ್ಧರಾಗಬೇಕು. ಕಾಲೇಜಿನಲ್ಲಿರುವಾಗಲೇ ತಮ್ಮದೇ ಪೋರ್ಟ್‌ಫೋಲಿಯೊ ನಿರ್ಮಿಸಿಕೊಳ್ಳಬೇಕು.

ಒಂದು ಡಾಕ್ಯುಮೆಂಟರಿ ಮಾಡಿ. ಒಂದು ಶಾರ್ಟ್ ಫಿಲ್ಮ್ ನಿರ್ಮಿಸಿ. ಸಂದರ್ಶನಗಳ ಸರಣಿ ಮಾಡಿ. ಪಾಡ್‌ಕಾಸ್ಟ್ ಆರಂಭಿಸಿ. ಸಾಮಾಜಿಕ ಸಮಸ್ಯೆಯ ಕುರಿತು ರೀಲ್ಸ್ ಮಾಡಿ. ಯೂಟ್ಯೂಬ್ ಚಾನೆಲ್ ನಡೆಸಿ.ಸ್ಥಳೀಯ ಕಥೆಗಳನ್ನು ದಾಖಲಿಸಿ. ನೀವು ಮಾಡಿದ ಕೆಲಸಗಳೇ ನಾಳೆ ನಿಮ್ಮ ರೆಸ್ಯೂಮೆಗಿಂತ ದೊಡ್ಡ ಪರಿಚಯವಾಗಬಹುದು. ಸಂಸ್ಥೆಗಳು ''ನೀವು ಏನು ಓದಿದ್ದೀರಿ?'' ಎನ್ನುವುದರ ಜೊತೆಗೆ ''ನೀವು ಏನು ಮಾಡಬಲ್ಲಿರಿ?'' ಎನ್ನುವುದನ್ನೂ ನೋಡುತ್ತವೆ.

ಕನ್ನಡ ಭಾಷೆಯಲ್ಲಿರುವ ಅಪಾರ ಡಿಜಿಟಲ್ ಅವಕಾಶಗಳನ್ನು ವಿದ್ಯಾರ್ಥಿಗಳು ಗುರುತಿಸಬೇಕಾಗಿದೆ. ಸ್ಥಳೀಯ ಸುದ್ದಿ, ಸಂಸ್ಕೃತಿ, ಕಲೆ, ಸಾಹಿತ್ಯ, ಗ್ರಾಮೀಣ ಬದುಕು, ಪ್ರವಾಸೋದ್ಯಮ, ಕೃಷಿ, ಯುವಜನರ ಸಮಸ್ಯೆಗಳು, ಶಿಕ್ಷಣ, ಉದ್ಯೋಗ, ಸಾಮಾಜಿಕ ವಿಷಯಗಳುಇವೆಲ್ಲವೂ ಉತ್ತಮ ಡಿಜಿಟಲ್ ಕಂಟೆಂಟ್‌ಗೆ ದೊಡ್ಡ ಅವಕಾಶಗಳಾಗಿವೆ. ಕನ್ನಡದಲ್ಲಿ ಉತ್ತಮವಾಗಿ ಬರೆಯಬಲ್ಲ, ಮಾತನಾಡಬಲ್ಲ ಮತ್ತು ದೃಶ್ಯ ರೂಪದಲ್ಲಿ ಕಥೆ ಹೇಳಬಲ್ಲ ಯುವಜನರಿಗೆ ಡಿಜಿಟಲ್ ಯುಗದಲ್ಲಿ ವಿಶಿಷ್ಟ ಗುರುತು ನಿರ್ಮಿಸಿಕೊಳ್ಳುವ ಅವಕಾಶವಿದೆ.

ವಿದ್ಯಾರ್ಥಿಗಳ ಭವಿಷ್ಯವನ್ನು ಕೇವಲ ವಿದ್ಯಾರ್ಥಿಗಳ ಪ್ರಯತ್ನಕ್ಕೆ ಬಿಟ್ಟುಕೊಡಲಾಗುವುದಿಲ್ಲ. ಶಿಕ್ಷಣ ಸಂಸ್ಥೆಗಳ ಜವಾಬ್ದಾರಿಯೂ ಅಷ್ಟೇ ಮುಖ್ಯ.

ಪಠ್ಯಕ್ರಮದ ಜೊತೆಗೆ ಪ್ರಾಯೋಗಿಕ ತರಬೇತಿ, ಮಾಧ್ಯಮ ಸಂಸ್ಥೆಗಳಲ್ಲಿ ಇಂಟರ್ನ್‌ಶಿಪ್, ಲೈವ್ ಪ್ರಾಜೆಕ್ಟ್‌ಗಳು, ಸ್ಟುಡಿಯೋ ಅನುಭವ, ಡಿಜಿಟಲ್ ಮೀಡಿಯಾ ಲ್ಯಾಬ್, ಎಐ ಆಧಾರಿತ ಮಾಧ್ಯಮ ತರಬೇತಿ ಮತ್ತು ಉದ್ಯಮ ತಜ್ಞರೊಂದಿಗೆ ಸಂವಾದಗಳಿಗೆ ಹೆಚ್ಚಿನ ಆದ್ಯತೆ ನೀಡಬೇಕು.

ವಿದ್ಯಾರ್ಥಿ ಕಾಲೇಜಿನಿಂದ ಹೊರಬರುವಾಗ ಪದವಿ ಪತ್ರದ ಜೊತೆಗೆ ಕನಿಷ್ಠ ಕೆಲವು ಉತ್ತಮ ಮಾಧ್ಯಮ ಪ್ರಾಜೆಕ್ಟ್‌ಗಳನ್ನೂ ಕೈಯಲ್ಲಿ ಹಿಡಿದುಕೊಂಡು ಹೊರಬರಬೇಕು.

ಎಂಎಸ್ಸಿ ಎಲೆಕ್ಟ್ರಾನಿಕ್ ಮೀಡಿಯಾ ಎನ್ನುವುದು ಕೇವಲ ಒಂದು ಕೋರ್ಸ್ ಅಲ್ಲ. ಬದಲಾಗುತ್ತಿರುವ ಮಾಧ್ಯಮ ಜಗತ್ತಿಗೆ ವಿದ್ಯಾರ್ಥಿಗಳನ್ನು ಸಿದ್ಧಪಡಿಸುವ ಒಂದು ಅವಕಾಶ. ಈ ಕೋರ್ಸ್ ಆಯ್ಕೆ ಮಾಡಿಕೊಳ್ಳುವ ವಿದ್ಯಾರ್ಥಿಗಳು ತಂತ್ರಜ್ಞಾನ ಕಲಿಯಬೇಕು, ಸೃಜನಶೀಲತೆಯನ್ನು ಬೆಳೆಸಿಕೊಳ್ಳಬೇಕು, ಸಂವಹನ ಕೌಶಲ್ಯ ಹೆಚ್ಚಿಸಿಕೊಳ್ಳಬೇಕು, ಕನ್ನಡ ಸೇರಿದಂತೆ ಭಾಷಾ ಸಾಮರ್ಥ್ಯ ಬೆಳೆಸಿಕೊಳ್ಳಬೇಕು ಮತ್ತು ನಿರಂತರವಾಗಿ ಹೊಸದನ್ನು ಕಲಿಯುವ ಮನೋಭಾವ ಹೊಂದಬೇಕು.

ಏಕೆಂದರೆ ಭವಿಷ್ಯದಲ್ಲಿ ಒಂದೇ ಕೌಶಲ್ಯ ಹೊಂದಿರುವವರಿಗಿಂತ ಹಲವು ಕೌಶಲ್ಯಗಳನ್ನು ಒಟ್ಟಿಗೆ ಬಳಸಬಲ್ಲ ಮಾಧ್ಯಮ ವೃತ್ತಿಪರರಿಗೆ ಹೆಚ್ಚಿನ ಬೇಡಿಕೆ ಇರಲಿದೆ. ಮಾಧ್ಯಮ ಬದಲಾಗುತ್ತಿದೆ. ತಂತ್ರಜ್ಞಾನ ಬದಲಾಗುತ್ತಿದೆ. ಉದ್ಯೋಗದ ಸ್ವರೂಪ ಬದಲಾಗುತ್ತಿದೆ. ಆದರೆ ಕಥೆ ಹೇಳುವ ಮಾನವೀಯ ಅಗತ್ಯ ಮಾತ್ರ ಬದಲಾಗುವುದಿಲ್ಲ. ಆ ಕಥೆಯನ್ನು ಸತ್ಯವಾಗಿ, ಸೃಜನಶೀಲವಾಗಿ ಮತ್ತು ತಂತ್ರಜ್ಞಾನದ ನೆರವಿನಿಂದ ಜಗತ್ತಿಗೆ ಹೇಳಬಲ್ಲ ಯುವಜನರೇ ನಾಳೆಯ ಮಾಧ್ಯಮವನ್ನು ಮುನ್ನಡೆಸಲಿದ್ದಾರೆ.

ಆದ್ದರಿಂದ ಎಂಎಸ್ಸಿ ಎಲೆಕ್ಟ್ರಾನಿಕ್ ಮೀಡಿಯಾವನ್ನು ಕೇವಲ ಪದವಿ ಪಡೆಯುವ ಕೋರ್ಸ್ ಎಂದು ನೋಡಬೇಡಿ. ನಿಮ್ಮ ಕೌಶಲ್ಯ, ಸೃಜನಶೀಲತೆ ಮತ್ತು ಭವಿಷ್ಯದ ವೃತ್ತಿಜೀವನವನ್ನು ಕಟ್ಟಿಕೊಳ್ಳುವ ವೇದಿಕೆಯಾಗಿ ನೋಡಿ

ಇಸ್ರೇಲಿ ಮಾದರಿ ಬುಲ್ಡೋಜರ ಪ್ರಯೋಗ: ವಿರೋಧಿ ದನಿ ಎದುರಿಸಲು ಕೊಳಚೆ ಅಸ್ತ್ರ ಬಳಸುತ್ತಾ ಮೋದಿ ಸರ್ಕಾರ?

ಇಸ್ರೇಲ್ ಸರ್ಕಾರವು ಪ್ಯಾಲೆಸ್ತೀನ್ ಪ್ರದೇಶಗಳಲ್ಲಿ ಭದ್ರತೆಗೆ ಬೆದರಿಕೆ ಹಾಕಿದ ಅಥವಾ ಪ್ರತಿಭಟನೆಯಲ್ಲಿ ಭಾಗಿಯಾದ ಆರೋಪ ಎದುರಿಸುತ್ತಿರುವವರ ಕುಟುಂಬದ ಮನೆಗಳನ್ನು ಯಾವುದೇ ನ್ಯಾಯಾಲಯದ ವಿಲೇವಾರಿಗೆ ಕಾಯದೆ ಧ್ವಂಸಗೊಳಿಸುತ್ತದೆ. ಅಂದರೆ ಬುಲ್ಡೋಜರ್ ಪ್ರಯೋಗಿಸಲಾಗುತ್ತದೆ. ಇದನ್ನು ಸಾಮೂಹಿಕ ಶಿಕ್ಷೆ ಎಂದು ಪರಿಗಣಿಸಲಾಗುತ್ತದೆ.

ಉತ್ತರ ಪ್ರದೇಶ ಸೇರಿದಂತೆ ದೇಶದ ಬಹುತೇಕ ಬಿಜೆಪಿ ಆಡಳಿತ ನಡೆಸುತ್ತಿರುವ ರಾಜ್ಯಗಳಲ್ಲಿ ಸರ್ಕಾರ ವಿರುದ್ಧ ಧ್ವನಿ ಎತ್ತಿದವರನ್ನು, ಪ್ರತಿಭಟನಾಕಾರರು, ಮಾನವ ಹಕ್ಕುಗಳ ಹೋರಾಟಗಾರರು ಮತ್ತು ರಾಜಕೀಯ ವಿರೋಧಿಗಳನ್ನು ಹತ್ತಿಕ್ಕಲು ಬುಲ್ಡೋಜರ್ ಪ್ರಯೋಗ ಮಾಡಲಾಗುತ್ತಿದೆ. ಈ ರೀತಿ ರಾಜಕೀಯ ವಿರೋಧಿಗಳ ಆಸ್ತಿಗಳನ್ನು ಬುಲ್ಡೋಜರ್ ಮೂಲಕ ನೆಲಸಮಗೊಳಿಸುತ್ತಿರುವ ಪ್ರವೃತ್ತಿಯು ಜಾಗತಿಕ ಮಟ್ಟದಲ್ಲಿ ತೀವ್ರ ಚರ್ಚೆಗೆ ಗ್ರಾಸವಾಗುತ್ತಿದೆ. ಅಷ್ಟಕ್ಕೂ ಇದು ಇಸ್ರೇಲಿ ಮಾದರಿ ಬುಲ್ಡೋಜರ್ ಪ್ರಯೋಗವಲ್ಲವೇ? ಇಸ್ರೇಲಿ ಮಾದರಿಯನ್ನು ಪಾಲಿಸುತ್ತಾ ಬಂದಿರುವ ಬಿಜೆಪಿ ಸರ್ಕಾರ ಮುಂದೆ ಕೊಳಚೆ ಅಸ್ತ್ರ (ಸ್ಟಂಕ್ ಕೆಮಿಕಲ್ ಸ್ಪ್ರೇ -) ಪ್ರಯೋಗಕ್ಕೂ ಇಳಿಯಬಹುದೇ?

ದೇಶದಲ್ಲಿ ಬಿಜೆಪಿ ನಡೆಸುತ್ತಿರುವ ಈ ಬುಲ್ಡೋಜರ್ ಕ್ರಮವನ್ನು ಮಧ್ಯಪ್ರಾಚ್ಯದಲ್ಲಿ ಇಸ್ರೇಲ್ ಸರ್ಕಾರವು ಪ್ಯಾಲೆಸ್ತೀನ್ ಪ್ರತಿಭಟನಾಕಾರರು ಹಾಗೂ ಸಶಸ್ತ್ರ ಗುಂಪುಗಳ ವಿರುದ್ಧ ಬಳಸುವ ''ಪಾಲಿಸಿ ಆಫ್ ಹೌಸ್ ಡೆಮೊಲಿಷನ್'' (ಮನೆ ಧ್ವಂಸಗೊಳಿಸುವ ಧೋರಣೆ) ಕಾರ್ಯತಂತ್ರಕ್ಕೆ ಹಲವು ಅಂತಾರಾಷ್ಟ್ರೀಯ ವಿಶ್ಲೇಷಕರು ಮತ್ತು ಮಾನವ ಹಕ್ಕುಗಳ ಸಂಸ್ಥೆಗಳು ಹೋಲಿಸಿವೆ.

ಇಸ್ರೇಲ್ ಸರ್ಕಾರವು ಪ್ಯಾಲೆಸ್ತೀನ್ ಪ್ರದೇಶಗಳಲ್ಲಿ ಭದ್ರತೆಗೆ ಬೆದರಿಕೆ ಹಾಕಿದ ಅಥವಾ ಪ್ರತಿಭಟನೆಯಲ್ಲಿ ಭಾಗಿಯಾದ ಆರೋಪ ಎದುರಿಸುತ್ತಿರುವವರ ಕುಟುಂಬದ ಮನೆಗಳನ್ನು ಯಾವುದೇ ನ್ಯಾಯಾಲಯದ ವಿಲೇವಾರಿಗೆ ಕಾಯದೆ ಧ್ವಂಸಗೊಳಿಸುತ್ತದೆ. ಅಂದರೆ ಬುಲ್ಡೋಜರ್ ಪ್ರಯೋಗಿಸಲಾಗುತ್ತದೆ. ಇದನ್ನು ಸಾಮೂಹಿಕ ಶಿಕ್ಷೆ ( ) ಎಂದು ಪರಿಗಣಿಸಲಾಗುತ್ತದೆ.

ಇದೇ ಮಾದರಿಯಲ್ಲಿ, ಉತ್ತರ ಪ್ರದೇಶದಲ್ಲಿ ಪೌರತ್ವ ತಿದ್ದುಪಡಿ ಕಾಯ್ದೆ () ವಿರೋಧಿ ಪ್ರತಿಭಟನೆಗಳು ಅಥವಾ ಕೋಮು ಘರ್ಷಣೆಗಳು ಸಂಭವಿಸಿದ ತಕ್ಷಣವೇ, ಅಂತಹ ಘಟನೆಗಳಲ್ಲಿ ಭಾಗಿಯಾದ ಆರೋಪಿಗಳ ಆಸ್ತಿಗಳನ್ನು ಅದರಲ್ಲೂ ಹೆಚ್ಚಾಗಿ ಮುಸ್ಲಿಮರ ಮನೆಗಳನ್ನುಅಕ್ರಮ ನಿರ್ಮಾಣ ಎಂಬ ನೆಪದಲ್ಲಿ ಕೆಡವಲಾಗುತ್ತಿದೆ.

ಇಂತಹ ಘಟನೆಗಳು ಹೇರಳವಾಗಿ ನಡೆಯುತ್ತಿದ್ದರೂ ಹೆಚ್ಚು ಚರ್ಚೆಗೆ ಗ್ರಾಸವಾದ ಒಂದು ಉದಾಹರಣೆ 2022ರ ಪ್ರಯಾಗ್‌ರಾಜ್ ಕಾರ್ಯಾಚರಣೆ. ಪ್ರವಾದಿ ಮೊಹಮ್ಮದ್ ಕುರಿತಾದ ಹೇಳಿಕೆ ವಿರೋಧಿಸಿ ನಡೆದ ಪ್ರತಿಭಟನೆಯ ಬೆನ್ನಲ್ಲೇ, ಹೋರಾಟಗಾರ ಜಾವೇದ್ ಅಹ್ಮದ್ ಅವರ ನಿವಾಸವನ್ನು ಮಹಾನಗರ ಪಾಲಿಕೆ ಮತ್ತು ಪೊಲೀಸರ ನೇತೃತ್ವದಲ್ಲಿ ಧ್ವಂಸಗೊಳಿಸಲಾಗಿತ್ತು. ಹೀಗೆಯೇ ಬಿಜೆಪಿ ಸರ್ಕಾರವು ಅನೇಕ ಪ್ರಕರಣಗಳಲ್ಲಿ ಕಾನೂನುಬದ್ಧ ನೋಟಿಸ್ ನೀಡದೆ, ರಾತ್ರೋರಾತ್ರಿ ತೆರವು ಕಾರ್ಯಾಚರಣೆ ನಡೆಸಿದೆ.

ಸುಪ್ರೀಂ ಕೋರ್ಟ್ ಈ ಬುಲ್ಡೋಜರ್ ನ್ಯಾಯವನ್ನು ತೀವ್ರವಾಗಿ ಖಂಡಿಸಿದೆ. ''ಕಾನೂನಿನ ಸರಿಯಾದ ಪ್ರಕ್ರಿಯೆಯನ್ನು ( ) ಪಾಲಿಸದೆ ನಾಗರಿಕರ ಮನೆಗಳನ್ನು ಕೆಡವುವುದು ಸಂವಿಧಾನಬಾಹಿರ ಮತ್ತು ಕಾನೂನುಬಾಹಿರ'' ಎಂದು ತಿಳಿಸಿರುವ ನ್ಯಾಯಪೀಠ, ಈ ರೀತಿ ಸಂವಿಧಾನ ಬಾಹಿರವಾಗಿ ಮನೆ ಧ್ವಂಸಗೊಳಿಸಿದ ಪ್ರಕರಣಗಳಲ್ಲಿ ಸಂತ್ರಸ್ತರಿಗೆ ಪರಿಹಾರ ನೀಡುವಂತೆ ರಾಜ್ಯ ಸರ್ಕಾರಕ್ಕೆ ಆದೇಶಿಸಿದೆ. ಆದರೆ ಸರ್ಕಾರ ಸುಪ್ರೀಂ ಕೋರ್ಟ್‌ನ ಈ ಆದೇಶವನ್ನು ಪಾಲಿಸಿದೆಯೇ? ಇಲ್ಲ.

ಇನ್ನು ಅಮ್ನೆಸ್ಟಿ ಇಂಟರ್‌ನ್ಯಾಷನಲ್ ( ) ಮತ್ತು ಹ್ಯೂಮನ್ ರೈಟ್ಸ್ ವಾಚ್ () ನಂತಹ ಜಾಗತಿಕ ಸಂಸ್ಥೆಗಳು ತಮ್ಮ ವರದಿಗಳಲ್ಲಿ, ಈ ಕಾರ್ಯಾಚರಣೆಯು ವಿರೋಧಿ ದನಿಗಳನ್ನು ಅಡಗಿಸಲು ಮತ್ತು ನಿರ್ದಿಷ್ಟ ಸಮುದಾಯಗಳನ್ನು ಗುರಿಯಾಗಿಸಲು ಬಳಸಲಾಗುತ್ತಿರುವ ಅಸ್ತ್ರ ಎಂದು ಕಳವಳ ವ್ಯಕ್ತಪಡಿಸಿವೆ. ಆದರೆ ಬಿಜೆಪಿ ಸರ್ಕಾರ ಮಾತ್ರ ಅತಿಕ್ರಮಣದ ನೆಪವೊಡ್ಡುತ್ತಿದೆ. ಸರ್ಕಾರದ ಧೋರಣೆಗಳ ವಿರುದ್ಧ ಧ್ವನಿ ಎತ್ತಿದಾಗಲೇ ಸಾಮಾಜಿಕ ಹೋರಾಟಗಾರರು, ಮುಸ್ಲಿಮರ ಮನೆಗಳು ಅತಿಕ್ರಮಣವಾಗುವುದು ಹೇಗೆ ಎಂಬ ಪ್ರಶ್ನೆ ನಾವು ಎತ್ತಲೇಬೇಕಾಗುತ್ತದೆ.

ವಿರೋಧಿ ದನಿ ಎದುರಿಸಲು ಕೊಳಚೆ ಅಸ್ತ್ರ

ಸ್ಟಂಕ್ ಕೆಮಿಕಲ್ ಸ್ಪ್ರೇ ಅಥವಾ ಕೊಳಚೆ ಅಸ್ತ್ರ ( ) ಎಂಬುದು ಪ್ರತಿಭಟನಾಕಾರರನ್ನು ಚದುರಿಸಲು ಬಳಸಲಾಗುವ ಅತ್ಯಂತ ದುರ್ನಾತ ಬೀರುವ ಒಂದು ರಾಸಾಯನಿಕ ದ್ರವವಾಗಿದೆ. ಇದನ್ನು ಇಸ್ರೇಲ್‌ನ ಆಡೋರ್‌ಟೆಕ್ () ಎಂಬ ಸಂಸ್ಥೆಯು ಅಭಿವೃದ್ಧಿಪಡಿಸಿತು. 2008ರಲ್ಲಿ ಇಸ್ರೇಲಿ ಭದ್ರತಾ ಪಡೆಗಳು ಪಶ್ಚಿಮ ದಂಡೆಯಲ್ಲಿ ( ) ಇದನ್ನು ಮೊದಲ ಬಾರಿಗೆ ಬಳಸಿದವು.

ಇದು ಈಸ್ಟ್ (), ಬೇಕಿಂಗ್ ಪೌಡರ್ ಮತ್ತು ನೀರಿನಂತಹ ಸಾವಯವ ಘಟಕಗಳ ಮಿಶ್ರಣವಾಗಿದೆ. ಇದು ಕೊಳೆತ ಶವ, ಚರಂಡಿಯ ನೀರು ಮತ್ತು ಕೊಳೆತ ಆಹಾರದ ತೀವ್ರ ದುರ್ನಾತವನ್ನು ಹೋಲುತ್ತದೆ. ಇದು ಜೈವಿಕವಾಗಿ ಜೀವಕ್ಕೆ ತಕ್ಷಣದ ಅಪಾಯ ತರದಿದ್ದರೂ, ತೀವ್ರವಾದ ವಾಂತಿ, ತಲೆಸುತ್ತು, ಚರ್ಮ ಕಿರಿಕಿರಿ ಮತ್ತು ಕಣ್ಣು ಉರಿಯನ್ನು ಉಂಟುಮಾಡುತ್ತದೆ. ಈ ದ್ರವ ಬಿದ್ದ ಬಟ್ಟೆ ಅಥವಾ ಸ್ಥಳಗಳಿಂದ ವಾಸನೆ ವಾರಗಟ್ಟಲೆ ಹೋಗುವುದಿಲ್ಲ.

ಮಾನವ ಹಕ್ಕುಗಳ ಸಂಸ್ಥೆಗಳಾದ ಅಮ್ನೆಸ್ಟಿ ಇಂಟರ್‌ನ್ಯಾಷನಲ್ ಮತ್ತು ಬಿಸೇಲಮ್ () ನ ವರದಿಗಳ ಪ್ರಕಾರ, ಇಸ್ರೇಲ್ ಪಡೆಗಳು ಈ ದ್ರವವನ್ನು ಕೇವಲ ಪ್ರತಿಭಟನಾಕಾರರ ಮೇಲಷ್ಟೇ ಅಲ್ಲದೆ, ಪ್ಯಾಲೆಸ್ತೀನಿಯನ್ನರ ಮನೆಗಳು, ಅಂಗಡಿಗಳು ಮತ್ತು ಬೀದಿಗಳ ಮೇಲೆಯೂ ಸ್ಪ್ರೇ ಮಾಡಿವೆ. ಇದನ್ನು ''ಸಾಮೂಹಿಕ ಶಿಕ್ಷೆ'' ರೂಪದಲ್ಲಿ ಬಳಸಲಾಗುತ್ತಿದೆ ಎಂದು ಮಾನವ ಹಕ್ಕುಗಳ ಸಂಘಟನೆಗಳು ಕಳವಳ ವ್ಯಕ್ತಪಡಿಸಿವೆ.

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR

ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ NIMMURU SUDDI

ಸಂಪಾದಕರು: ಸುಂದರ್

Editor : Sundar

ಏಕ ಕಾಲಕ್ಕೆ ಬಳ್ಳಾರಿ, ಕೊಪ್ಪಳ, ಯಾದಗಿರಿ, ರಾಯಚೂರು, ಕಲಬುರ್ಗಿ, ಬೀದರ, ವಿಜಯನಗರ ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 211 RNI Number : KNKAN/25/A2770 11-08-2026 Tuesday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :211 ರಾಯಚೂರು 11-08-2026 ಮಂಗಳವಾರ ಪುಟ 04 ಬೆಲೆ ರೂ.2/- ಮೊ:8660146563

ಕಾಮನ್‌ವೆಲ್ತ್ ಪದಕ ವಿಜೇತರೊಂದಿಗೆ ಪ್ರಧಾನಿ ಮೋದಿ ಸಂವಾದ

ನವದೆಹಲಿ,ಆ.10-

ಗ್ಲಾಸ್ಗೋದಲ್ಲಿ ಇತ್ತೀಚೆಗೆ ಮುಕ್ತಾಯಗೊಂಡ 2026ರ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಭಾರತದ ಕೀರ್ತಿ ಹೆಚ್ಚಿಸಿದ ಪದಕ ವಿಜೇತ ಕ್ರೀಡಾಪಟುಗಳೊಂದಿಗೆ ಪ್ರಧಾನಿ ನರೇಂದ್ರಮೋದಿ ನಡೆಸಿದ ಸಂವಾದ ಹಲವು ಭಾವನಾತಕ ಹಾಗೂ ಹಾಸ್ಯಭರಿತ ಕ್ಷಣಗಳಿಗೆ ಸಾಕ್ಷಿಯಾಯಿತು.

ಕ್ರೀಡಾಕೂಟದ ವೇಳೆ ಭಾರತದ ವಿರೂಪಗೊಂಡ ನಕ್ಷೆಯನ್ನು ಪ್ರಶ್ನಿಸಿದ ಬಾಕ್ಸರ್ ಲವ್ಲಿನಾ ಬೊರ್ಗೊಹೈನ್ ಅವರ ಧೈರ್ಯವನ್ನು ಪ್ರಧಾನಿ ಶ್ಲಾಘಿಸಿದರೆ, ನಾಲ್ಕು ವರ್ಷಗಳ ಕಠಿಣ ಹೋರಾಟದ ಬಳಿಕ ಚಿನ್ನ ಗೆದ್ದ ವೇಟ್‌ಲಿಫ್ಟರ್ ಮೀರಾಬಾಯಿ ಚಾನು ಅವರ ಭಾವನಾತಕ ಅನುಭವವನ್ನು ಆಲಿಸಿದರು.

ದೆಹಲಿಯ ತಮ ನಿವಾಸದಲ್ಲಿ ನಡೆದ ಈ ವಿಶೇಷ ಭೇಟಿಯಲ್ಲಿ ಪ್ರಧಾನಿ ಮೋದಿ ಅವರು ಕ್ರೀಡಾಪಟುಗಳೊಂದಿಗೆ ಗ್ಲಾಸ್ಗೋ ಕ್ರೀಡಾಕೂಟದ ಸಿದ್ಧತೆ, ಸ್ಪರ್ಧೆಯ ಅನುಭವ ಹಾಗೂ ಗೆಲುವಿನ ಕ್ಷಣಗಳ ಕುರಿತು ಮಾತುಕತೆ ನಡೆಸಿದರು. ಪ್ರಧಾನಿಯವರೊಂದಿಗಿನ ಸಂವಾದದ ವಿಡಿಯೋವನ್ನು ಪ್ರಧಾನ ಮಂತ್ರಿ ಕಚೇರಿ ಇಂದು ಬಿಡುಗಡೆ ಮಾಡಿದೆ.



ಲವ್ಲಿನಾ ನಡೆಗೆ ಮೋದಿ ಮೆಚ್ಚುಗೆ :

ಗ್ಲಾಸ್ಗೋದಲ್ಲಿ ಭಾರತೀಯ ಕ್ರೀಡಾಪಟುಗಳು ತಮ ಗೆಲುವನ್ನು ಸಂಭ್ರಮಿಸುತ್ತಿದ್ದ ಸಂದರ್ಭದಲ್ಲಿ, ತಾವು ತೆರಳಿದ್ದ ರೆಸ್ಟೋರೆಂಟ್‌ನಲ್ಲಿ ಭಾರತದ ನಕ್ಷೆಯನ್ನು ವಿರೂಪಗೊಳಿಸಿರುವುದನ್ನು ಗಮನಿಸಿದ ಲವ್ಲಿನಾ ಬೊರ್ಗೊಹೈನ್ ಅದಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದರು. ಅವರು ರೆಸ್ಟೋರೆಂಟ್ ಸಿಬ್ಬಂದಿಗೆ ಸೌಜನ್ಯದಿಂದ ವಿಷಯ ತಿಳಿಸಿ, ವಿಚಾರವನ್ನು ಗಮನಿಸಿ ಪ್ರತಿಕ್ರಿಯಿಸಿದ್ದಕ್ಕಾಗಿ ಲವ್ಲಿನಾ ಅವರನ್ನು ಪ್ರಶಂಸಿಸಿ ಅವರಿಗೆ ಲಾಡು ತಿನ್ನಿಸಿ ಶುಭ ಹಾರೈಸಿದರು.

ಪಾಕಿಸ್ತಾನಿ ಬಾಕ್ಸರ್‌ನ ತಮಾಷೆ:

+90 ಕೆಜಿ ವಿಭಾಗದಲ್ಲಿ ಪದಕ ಗೆದ್ದ ಬಾಕ್ಸರ್ ನರೇಂದರ್ ಬೆರ್ವಾಲ್ ಅವರು 2015ರ ಮಿಲಿಟರಿ ವರ್ಲ್ಡ್ ಗೇಮ್ಸ್‌ನ ನಕ್ಷೆಯನ್ನು ಸರಿಪಡಿಸುವಂತೆ ಮನವಿ ಮಾಡಿದ್ದರು. ನಂತರ ಸಿಬ್ಬಂದಿ ನಕ್ಷೆಯಲ್ಲಿ ಬದಲಾವಣೆ ಮಾಡಿದ್ದರು.

ಈ ಘಟನೆ ಕುರಿತು ಪ್ರಧಾನಿ ಮೋದಿ ಅವರು ಲವ್ಲಿನಾ ಅವರನ್ನು ನೇರವಾಗಿ ಪ್ರಶ್ನಿಸುತ್ತಾ, ಏನಾಯಿತು, ನೀವು ಆ ರೆಸ್ಟೋರೆಂಟ್‌ನವರೊಂದಿಗೆ ಜಗಳವಾಡುತ್ತಿದ್ದೀರಾ? ಎಂದು ಹಾಸ್ಯಭರಿತವಾಗಿ ಪ್ರಶ್ನಿಸಿದರಲ್ಲದೆ, ತಮ ಗೆಲುವಿನ ಸಂಭ್ರಮದ ನಡುವೆಯೂ ದೇಶದ ಭೌಗೋಳಿಕ ಅಖಂಡತೆಯಂತಹ ಸೂಕ್ಷ್ಮ

3 ನೇ ಪುಟಕ್ಕೆ

ಅಭಿರುದ್ಧಿ ಕಾರ್ಯಗಳನ್ನು ಮಾಡಲು ಕಾಯುತ್ತಿರುವ ನೂತನ ಸಚಿವರಿಗೆ ಇನ್ನೂ ಸಿಕ್ಕಿಲ್ಲ ಖಾತೆ ಭಾಗ್ಯ

ಬೆಂಗಳೂರು, ಆ.10-

ಸಂಪುಟದ ನೂತನ ಸಚಿವರಿಗೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇಂದು ಖಾತೆ ಹಂಚಿಕೆ ಮಾಡಲಿದ್ದು, ಹಾಲಿ ಸಚಿವರ ಪೈಕಿ ಕೆಲವರ ಖಾತೆಗಳು ಅದಲು-ಬದಲಾಗಲಿವೆ. ಆಗಸ್ಟ್ 3ರಂದು ಸಂಪುಟ ವಿಸ್ತರಣೆಯಾಗಿದ್ದು, 8 ದಿನ ಕಳೆದರೂ, ಖಾತೆ ಇಲ್ಲದೆ ಸಚಿವರು ಜಿಲ್ಲೆಗಳಲ್ಲಿ ಬರ ಅಧ್ಯಯನದ ಪ್ರವಾಸ ಮಾಡುತ್ತಿದ್ದಾರೆ. ವಿಧಾನಮಂಡಲ ಅಧಿವೇಶನಕ್ಕೆ ಮೂರು ದಿನ ಮಾತ್ರ ಬಾಕಿಯಿದ್ದು, ಖಾತೆಗಳ ಮಾಹಿತಿ ತಿಳಿಯದೆ ನೂತನ ಸಚಿವರು ಗೊಂದಲದಲ್ಲಿದ್ದಾರೆ.

ನಿನ್ನೆ ದೆಹಲಿಗೆ ತೆರಳಿದ್ದ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಡರಾತ್ರಿ ಒಂದು ಗಂಟೆಯವರೆಗೂ ಪಕ್ಷದ ವರಿಷ್ಠರನ್ನೂ ಭೇಟಿ ಮಾಡಿ, ಖಾತೆ ಹಂಚಿಕೆ ಕುರಿತು ಚರ್ಚೆ ನಡೆಸಿದ್ದಾರೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕರ್ನಾಟಕ ಕಾಂಗ್ರೆಸ್‌ನ ಉಸ್ತುವಾರಿ ನಾಯಕ ರಣದೀಪ್ ಸಿಂಗ್ ಸುರ್ಜೇವಾಲಾ ಅವರನ್ನು ನಿನ್ನೆ ತಡರಾತ್ರಿಯೇ ಭೇಟಿ ಮಾಡಿ ಚರ್ಚೆ ನಡೆಸಿರುವ ಡಿ.ಕೆ.ಶಿವಕುಮಾರ್ ಅವರು, ಇಂದು ಬೆಳಗ್ಗೆ ಕೆ.ಸಿ ವೇಣುಗೋಪಾಲ್ ಅವರ ಮನೆಗೆ ಭೇಟಿ ನೀಡಿ ಸಮಾಲೋಚನೆ ನಡೆಸಿದ್ದಾರೆ.

ಖಾತೆ ಹಂಚಿಕೆ, ವಿಧಾನಸಭೆ, ವಿಧಾನ ಪರಿಷತ್ತಿನ ಅಧ್ಯಕ್ಷರ ಆಯ್ಕೆ ಸಂಪುಟದಲ್ಲಿ ಖಾಲಿಯಿರುವ ಒಂದು ಸ್ಥಾನಕ್ಕೆ ನೇಮಕಾತಿ ಮತ್ತು ನಿಗಮ-ಮಂಡಳಿಗಳ ಅಧ್ಯಕ್ಷರ ಆಯ್ಕೆಯ ಬಗ್ಗೆ ಚರ್ಚೆ ನಡೆಸಿದ್ದಾರೆ.

ವಿಧಾನಸಭಾ ಅಧ್ಯಕ್ಷ ಸ್ಥಾನಕ್ಕೆ ಈ ಮೊದಲು ಜಿ.ಎಸ್.ಪಾಟೀಲ್ ಅವರನ್ನು ಅಧ್ಯಕ್ಷರೆಂದು ಘೋಷಿಸಲಾಗಿತ್ತು. ಆದರೆ ಟಿ.ಬಿ.ಜಯಚಂದ್ರ ಅವರನ್ನು ಸಮಾಧಾನ ಪಡಿಸಲು ವಿಧಾನಸಭೆಯ ಅಧ್ಯಕ್ಷ ಸ್ಥಾನ ನೀಡುವ ಚರ್ಚೆಗಳಾಗಿವೆ. ಜಿ.ಎಸ್.ಪಾಟೀಲ್ ಅವರನ್ನು ಸಮಾಧಾನ ಪಡಿಸುವ ಹೊಣೆಗಾರಿಕೆಯನ್ನು ಎಚ್.ಕೆ.ಪಾಟೀಲ್ ಅವರಿಗೆ ವಹಿಸಲಾಗುತ್ತಿದೆ.

ಸಚಿವ ಸಂಪುಟದ ಖಾತೆ ಹಂಚಿಕೆ ಬಗ್ಗೆ ಹೈಕಮಾಂಡ್ ನಾಯಕರು ಡಿ.ಕೆ.ಶಿವಕುಮಾರ್ ಅವರಿಗೆ ಕೆಲ ನಿರ್ದೇಶನಗಳನ್ನು ನೀಡಿದ್ದು, ಪ್ರಸ್ತಾವಿತ ಪಟ್ಟಿಗೆ ಅನುಮೋದನೆ ನೀಡಿದ್ದಾರೆ ಎಂದು ತಿಳಿದು ಬಂದಿದೆ.

3 ನೇ ಪುಟಕ್ಕೆ

ಅರಣ್ಯ ಜಾಗಕ್ಕೆ ವಸತಿ ವಿನ್ಯಾಸದ ಮುದ್ರೆ!

3 ಎಕರೆ 29 ಗುಂಟೆ ಒತ್ತುವರಿ ಆರೋಪ; 33 ಎಕರೆ 38 ಗುಂಟೆ ಜಾಗ 37 ಎಕರೆ 27 ಗುಂಟೆಯಾದದ್ದು ಹೇಗೆ?

ರಾಯಚೂರು,ಆ.10-

ರಾಯಚೂರು ನಗರದ ಹೊರವಲಯದ ಅನುಷಾ ನಗರದಲ್ಲಿ ಅರಣ್ಯ ಇಲಾಖೆಗೆ ಸೇರಿದ 3 ಎಕರೆ 29 ಗುಂಟೆ ಜಾಗವನ್ನು ವಸತಿ ವಿನ್ಯಾಸದ ವ್ಯಾಪ್ತಿಗೆ ಸೇರಿಸಿ ಅನುಮೋದನೆ ಪಡೆಯಲಾಗಿದೆ ಎಂಬ ಗಂಭೀರ ಆರೋಪಕ್ಕೆ ಸಂಬಂಧಿಸಿದ ದಾಖಲೆಗಳು ಬೆಳಕಿಗೆ ಬಂದಿವೆ. ಅರಣ್ಯ ಜಾಗದ ಒತ್ತುವರಿ ಕುರಿತು ನಗರಾಭಿವೃದ್ಧಿ ಪ್ರಾಧಿಕಾರದ ಸಭೆಯಲ್ಲಿಯೇ ಆಕ್ಷೇಪ ವ್ಯಕ್ತವಾಗಿದ್ದು, ಜಾಗವನ್ನು ಹಿಂಪಡೆಯುವಂತೆ ಜಿಲ್ಲಾಡಳಿತಕ್ಕೆ ವರದಿ ಸಲ್ಲಿಸಿರುವ ಅಂಶವೂ ದಾಖಲೆಗಳಲ್ಲಿ ಉಲ್ಲೇಖವಾಗಿದೆ.

ರಾಯಚೂರು ನಗರದ ಸರ್ವೆ ನಂ.1139ರ 10 ಎಕರೆ 20 ಗುಂಟೆ, 1140ರ 4 ಎಕರೆ 24 ಗುಂಟೆ ಹಾಗೂ 1164ರ 18 ಎಕರೆ 34 ಗುಂಟೆ ಸೇರಿದಂತೆ ಒಟ್ಟು 33 ಎಕರೆ 38 ಗುಂಟೆ ಜಮೀನನ್ನು ವಸತಿ ಉದ್ದೇಶಕ್ಕಾಗಿ ಬಿನ್‌ಶೇತ್ಕಿ ಮಾಡಲಾಗಿದೆ. ಆದರೆ ದಾಖಲೆಗಳ ಪ್ರಕಾರ, ಇದಕ್ಕೆ ಹೆಚ್ಚುವರಿಯಾಗಿ 3 ಎಕರೆ 29 ಗುಂಟೆ ಜಾಗವನ್ನು ಸೇರಿಸಿಕೊಂಡು ಒಟ್ಟು 37 ಎಕರೆ 27 ಗುಂಟೆ ಪ್ರದೇಶಕ್ಕೆ ವಸತಿ ಉದ್ದೇಶದ ಅನುಮೋದನೆ ಪಡೆಯಲಾಗಿದೆ ಎಂಬುದು ಪ್ರಕರಣದ ಪ್ರಮುಖ ಅಂಶವಾಗಿದೆ.

ಅರಣ್ಯ ಜಾಗವೇ ಆಗಿದ್ದರೆ ವಸತಿ ವಿನ್ಯಾಸಕ್ಕೆ ಹೇಗೆ ಸೇರಿತು?



ಅರಣ್ಯ ಇಲಾಖೆಗೆ ಸೇರಿದ ಜಾಗದ ಸುತ್ತಮುತ್ತಲೂ ಅರಣ್ಯ ಇಲಾಖೆಯ ಜಮೀನುಗಳೇ ಇರುವಾಗ, ಹೆಚ್ಚುವರಿಯಾಗಿ 3 ಎಕರೆ 29 ಗುಂಟೆ ಪ್ರದೇಶ ವಸತಿ ವಿನ್ಯಾಸದ ವ್ಯಾಪ್ತಿಗೆ ಬಂದಿದ್ದು ಹೇಗೆ ಎಂಬ ಪ್ರಶ್ನೆ ಈಗ ಸಾರ್ವಜನಿಕ ವಲಯದಲ್ಲಿ ತೀವ್ರವಾಗಿ ಕೇಳಿಬರುತ್ತಿದೆ.

ದಾಖಲೆಗಳಲ್ಲಿಯೇ ಈ ಹೆಚ್ಚುವರಿ ಜಾಗದ ಕುರಿತು ಆಕ್ಷೇಪ ವ್ಯಕ್ತವಾಗಿದ್ದು, ಅದು ಅರಣ್ಯ ಇಲಾಖೆಗೆ ಸೇರಿದ ಜಮೀನು ಎಂದು

3 ನೇ ಪುಟಕ್ಕೆ

ದಿ.28 :ಮಹಾತಪಸ್ವಿ ಶ್ರೀ ಕುಮಾರಸ್ವಾಮಿ ಪ್ರಶಸ್ತಿ ಪ್ರದಾನ ಸಮಾರಂಭ

ರಾಯಚೂರು,ಆ.10-

ದೇವದುರ್ಗ ತಾಲೂಕಿನ ಗಬ್ಬೂರು ಗ್ರಾಮದ ಮಹಾಶೈವ ಧರ್ಮಪೀಠ ಕೊಡಮಾಡುವ ಮಹಾತಪಸ್ವಿ ಶ್ರೀ ಕುಮಾರಸ್ವಾಮಿ ಪ್ರಶಸ್ತಿಗಳಿಗೆ 2026ನೇ ಸಾಲಿಗಾಗಿ ಸಾಹಿತ್ಯ, ಪತ್ರಿಕೋದ್ಯಮ ಮತ್ತು ಸಮಾಜಸೇವೆ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದ ವ್ಯಕ್ತಿಗಳನ್ನು ಆಯ್ಕೆ ಮಾಡಲಾಗಿದೆ ಎಂದು ಮಹಾಶೈವ ಧರ್ಮಪೀಠದ ಸಾಂಸ್ಕೃತಿಕ ಸಮಿತಿಯ ಸದಸ್ಯ ಬಸವರಾಜ ಸಿನ್ನೂರ ಹೇಳಿದರು.

ಅವರಿಂದು ನಗರದ ಸುದ್ದಿಗಾರರೊಂದಿಗೆ ಮಾತನಾಡಿ, ಮಹಾಶೈವ ಧರ್ಮಪೀಠದ ಪೀಠಾಧ್ಯಕ್ಷರಾದ ಶ್ರೀ ಮುಕ್ಕಣ್ಣ ಕರಿಗಾರ ಅವರು ಅವರ ಅಧ್ಯಾತ್ಮಿಕ ಗುರುಗಳಾದ ಧಾರವಾಡದ ತಪೋವನದ ಮಹಾ



ತಪಸ್ವಿ ಶ್ರೀ ಕುಮಾರಸ್ವಾಮಿ ಗಳವರ ಹೆಸರಿನಲ್ಲಿ ಕುಮಾರಸ್ವಾಮಿಗಳವರ ಹುಟ್ಟುಹಬ್ಬವಾದ ನೂಲ ಹುಣ್ಣಿಮೆಯಂದು ಸಾಹಿತ್ಯ, ಪತ್ರಿಕೋದ್ಯಮ ಮತ್ತು ಸಮಾಜಸೇವಾ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದ ಅವರಿಗೆ ಪ್ರಶಸ್ತಿ ನೀಡಿ, ಗೌರವಿಸಲಾಗುವುದು ಎಂದರು.

2026 ನೇ ಸಾಲಿನ ಮಹಾತಪಸ್ವಿ ಶ್ರೀ ಕುಮಾರಸ್ವಾಮಿ ಸಾಹಿತ್ಯ ರತ್ನ ಪ್ರಶಸ್ತಿಯನ್ನು ಕನ್ನಡದ ಹಿರಿಯ ವಿದ್ವಾಂಸರೂ ಬೆಂಗಳೂರಿನ ಸಂಸ್ಕೃತ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿಗಳಾದ ಪ್ರೊ.ಮಲ್ಲೇಪುರಂ ಜಿ ವೆಂಕಟೇಶ,

ಮಹಾತಪಸ್ವಿ ಶ್ರೀ ಕುಮಾರಸ್ವಾಮಿ ಪತ್ರಿಕಾಭೂಷಣ ಪ್ರಶಸ್ತಿಗೆ ಪ್ರಜಾಪ್ರಸಿದ್ದ ದಿನಪತ್ರಿಕೆಯ ಉಪಸಂಪಾದಕರಾದ ರಘುನಾಥರೆಡ್ಡಿ ಮನ್ಸಲಾಪುರ ಹಾಗೂ ಮಹಾತಪಸ್ವಿ ಶ್ರೀ ಕುಮಾರಸ್ವಾಮಿ ಸೇವಾಭೂಷಣ ಪ್ರಶಸ್ತಿಗೆ ಗಮಕ ಕಲೆಯನ್ನು ನಾಡಿನಾದ್ಯಂತ ಪರಿಚಯಿಸುತ್ತಿರುವ ಖಾಸೀಮ್ ಮಲ್ಲಿಗೆ ಮಡುವು ಅವರನ್ನು ಆಯ್ಕೆ ಮಾಡಲಾಗಿದೆ ಎಂದರು.

ಈ ಸಂದರ್ಭದಲ್ಲಿ ಸಮಿತಿಯ ಅಧ್ಯಕ್ಷ ಡಾ.ಎನ್.ಎಚ್. ಪೂಜಾರ ಧಾರವಾಡ, ಸದಸ್ಯರಾದ ಎಚ್.ಎಚ್.ಮೇಟಿ ಧಾರವಾಡ ಸೇರಿದಂತೆ ಉಪಸ್ಥಿತರಿದ್ದರು.

ಹಂಪನಗೌಡ ಬಾದರ್ಲಿಗೆ ಸಚಿವ ಸ್ಥಾನಕ್ಕೆ ಆಗ್ರಹಿಸಿ ರಾಯಚೂರಿನಲ್ಲಿ ಬೃಹತ್ ಪ್ರತಿಭಟನೆ

ವೀರಶೈವ ಲಿಂಗಾಯತರ ಸಮುದಾಯ, ಜಿಲ್ಲೆಯನ್ನು ಕಾಂಗ್ರೆಸ್ ಸರ್ಕಾರ ಕಡೆಗಣಿಸಿದೆ; ಸಚಿವ ಸ್ಥಾನ ನೀಡದಿದ್ದರೆ ಹೋರಾಟ ತೀವ್ರ – ಎಚ್ಚರಿಕೆ





ರಾಯಚೂರು,ಆ.10-

ಕಾಂಗ್ರೆಸ್ ಸಚಿವ ಸಂಪುಟದಲ್ಲಿ ರಾಯಚೂರು ಜಿಲ್ಲೆಯ ವೀರಶೈವ ಲಿಂಗಾಯತ ಸಮುದಾಯದ ಶಾಸಕರಿಗೆ ಸಚಿವ ಸ್ಥಾನ ನೀಡದಿರುವುದನ್ನು ಖಂಡಿಸಿ ಹಾಗೂ ಜಿಲ್ಲೆಯ ಹಿರಿಯ ಶಾಸಕ ಹಂಪನಗೌಡ ಬಾದರ್ಲಿ ಅವರಿಗೆ ಸಚಿವ ಸ್ಥಾನ ನೀಡುವಂತೆ ಒತ್ತಾಯಿಸಿ ವೀರಶೈವ ಲಿಂಗಾಯತ ಸಮುದಾಯದ ವತಿಯಿಂದ ಸೋಮವಾರ ನಗರದಲ್ಲಿ ಬೃಹತ್ ಪ್ರತಿಭಟನೆ ನಡೆಯಿತು.

ನಗರದ ವೀರಶೈವ ಲಿಂಗಾಯತ ಬಿ.ಇಡಿ. ಕಾಲೇಜು ಮೈದಾನದಲ್ಲಿ ನಡೆದ ಪ್ರತಿಭಟನಾ ಸಭೆಯಲ್ಲಿ ಸಹಸ್ರಾರು ಸಂಖ್ಯೆಯಲ್ಲಿ ಸಮುದಾಯದ ಜನರು ಪಾಲ್ಗೊಂಡು, ಹಂಪನಗೌಡ ಬಾದರ್ಲಿ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಆಗ್ರಹಿಸಿದರು. ಬಳಿಕ ಪ್ರಮುಖ ರಸ್ತೆಯಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಿ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಸಮುದಾಯದ ಮುಖಂಡ ಹಾಗೂ ಮಾಜಿ ಜಿಲ್ಲಾ ಪಂಚಾಯಿತಿ ಸದಸ್ಯ ಬಸವರಾಜ ಹಿರೇಗೌಡ ಮಾತನಾಡಿ, ರಾಜಕೀಯದಲ್ಲಿ ಗುಲಾಮಗಿರಿಗೆ ಹೆಚ್ಚಿನ ಮಹತ್ವ ನೀಡಬಾರದು. ಸರ್ಕಾರ ನಮ್ಮ ಪರವಾಗಿಲ್ಲ ಎಂದಾದರೆ ಅದರ ಪರಿಣಾಮ ಏನಾಗುತ್ತದೆ ಎಂಬುದನ್ನು ತೋರಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಹಂಪನಗೌಡ ಬಾದರ್ಲಿ ಅವರು ರಾಯಚೂರು, ಕೊಪ್ಪಳ ಹಾಗೂ ಬಳ್ಳಾರಿ ಜಿಲ್ಲೆಗಳಲ್ಲಿ ತಮ್ಮದೇ ಆದ ರಾಜಕೀಯ ವರ್ಚಸ್ಸು ಹೊಂದಿದ್ದಾರೆ. ಅವರಿಗೆ ಸಚಿವ ಸ್ಥಾನ ನೀಡುವ ವಿಶ್ವಾಸವನ್ನು ಹೈಕಮಾಂಡ್ ಮೂಡಿಸಿತ್ತು. ಆದರೆ ಕೊನೆಯ ಕ್ಷಣದಲ್ಲಿ ಸಚಿವ ಸ್ಥಾನ ಕೈತಪ್ಪಿರುವುದಕ್ಕೆ ಕಾರಣವೇನು ಎಂಬುದು ತಿಳಿಯುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ರಾಯಚೂರು ಗ್ರಾಮೀಣ ಶಾಸಕ ಬಸನಗೌಡ ದದ್ದಲ್ ಹಾಗೂ ವಿಧಾನ ಪರಿಷತ್ ಸದಸ್ಯ ಎ.ವಸಂತಕುಮಾರ್ ಅವರು ಕೂಡ ಹಂಪನಗೌಡ ಬಾದರ್ಲಿ ಅವರಿಗೆ ಸಚಿವ ಸ್ಥಾನ ನೀಡುವಂತೆ ಒತ್ತಾಯಿಸಿದ್ದಾರೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಿ ಕೂಡಲೇ ಸಚಿವ ಸ್ಥಾನ ನೀಡಬೇಕು ಎಂದು ಮುಖಂಡರು ಆಗ್ರಹಿಸಿದರು.

ಅಖಿಲ ಭಾರತ ವೀರಶೈವ ಮಹಾಸಭಾದ ಅಧ್ಯಕ್ಷ ಚಂದ್ರಶೇಖರ ಮಿರ್ಜಾಪುರ ಮಾತನಾಡಿ, ಹಂಪನಗೌಡ ಬಾದರ್ಲಿ ಅವರು ಹಿರಿಯ ಹಾಗೂ ಅನುಭವಿ ರಾಜಕಾರಣಿಯಾಗಿದ್ದು, ಅವರಿಗೆ ಸಚಿವ ಸ್ಥಾನ ನೀಡುವುದು ಸೂಕ್ತ.

3 ನೇ ಪುಟಕ್ಕೆ

ಕನಿಷ್ಠ ವೇತನ ಜಾರಿಗೆ ಆಗ್ರಹಿಸಿ ಬೃಹತ್ ಪ್ರತಿಭಟನೆ

ಅಂಗನವಾಡಿ, ಕಾರ್ಮಿಕರು, ರೈತರು, ಮಹಿಳೆಯರು ಸೇರಿ ವಿವಿಧ ಸಂಘಟನೆಗಳ ಹೋರಾಟ; ತಾಲೂಕು ಕಚೇರಿಗೆ ಮುತ್ತಿಗೆ ಯತ್ನ, ಪ್ರತಿಭಟನಾಕಾರರು ಪೊಲೀಸ್ ವಶಕ್ಕೆ



ರಾಯಚೂರು,ಆ.10-

ರಾಜ್ಯ ಸರ್ಕಾರ ಪರಿಷ್ಕರಿಸಿರುವ ಕನಿಷ್ಠ ವೇತನವನ್ನು ಕೂಡಲೇ ಜಾರಿಗೊಳಿಸಬೇಕು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಸಂಯುಕ್ತ ಹೋರಾಟ ಕರ್ನಾಟಕ ಹಾಗೂ ಕಾರ್ಮಿಕ ಸಂಘಗಳ ಜಂಟಿ ಸಮಿತಿ ಜಿಲ್ಲಾ ಘಟಕದ ನೇತೃತ್ವದಲ್ಲಿ ಸೋಮವಾರ ನಗರದಲ್ಲಿ ಬೃಹತ್ ಪ್ರತಿಭಟನೆ ಹಾಗೂ ಜೈಲ್‌ಭರೋ ಚಳವಳಿ ನಡೆಯಿತು.

ಹಳೆ ಜಿಲ್ಲಾಧಿಕಾರಿ ಕಚೇರಿ ಎದುರಿನಿಂದ ತಾಲೂಕು ದಂಡಾಧಿಕಾರಿಗಳ ಕಚೇರಿವರೆಗೆ ಪ್ರತಿಭಟನಾಕಾರರು ಮೆರವಣಿಗೆ ನಡೆಸಿ, ತಾಲೂಕು ದಂಡಾಧಿಕಾರಿಗಳ ಕಚೇರಿಗೆ ಮುತ್ತಿಗೆ ಹಾಕಲು ಮುಂದಾದರು. ಈ ವೇಳೆ ಪೊಲೀಸರು ಪ್ರತಿಭಟನಾಕಾರರನ್ನು ವಶಕ್ಕೆ ಪಡೆದು ಮಹಾತ್ಮ ಗಾಂಧಿ ಕ್ರೀಡಾಂಗಣಕ್ಕೆ ಕರೆದೊಯ್ದು ಬಿಡುಗಡೆ ಮಾಡಿದರು.

ಪ್ರತಿಭಟನೆಯ ನೇತೃತ್ವ ವಹಿಸಿದ್ದ ಕೆ.ಜಿ.ವಿರೇಶ ಹಾಗೂ ಡಿ.ಎಸ್.ಶರಣಬಸವ ಮಾತನಾಡಿ, ಕಾರ್ಮಿಕ ಸಂಘಟನೆಗಳ ನಿರಂತರ ಹೋರಾಟದ ಫಲವಾಗಿ ಮೇ 22, 2026ರಂದು ವೈಜ್ಞಾನಿಕ ಲೆಕ್ಕಾಚಾರ

3 ನೇ ಪುಟಕ್ಕೆ

ಕೊಲೆ ಪ್ರಕರಣದಿಂದ ಭೀಮರಾಯ ಹದ್ದಿನಾಳ ಕೈಬಿಡಲು ಎನ್. ರಘುವೀರ ನಾಯಕ ಆಗ್ರಹ



ರಾಯಚೂರು,ಆ.10-

ದೇವದುರ್ಗ ತಾಲೂಕಿನ ಸುಂಕೇಶ್ವರಹಾಳ ಗ್ರಾಮದಲ್ಲಿ ನಡೆದ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಹಿರಿಯ ಪತ್ರಕರ್ತ ಹಾಗೂ ಸಂಪಾದಕ ಭೀಮರಾಯ ಹದ್ದಿನಾಳ ಅವರನ್ನು ದುರುದ್ದೇಶಪೂರ್ವಕವಾಗಿ ಪ್ರಕರಣದಲ್ಲಿ ಸಿಲುಕಿಸಲಾಗಿದೆ ಎಂಬ ಅನುಮಾನವಿದ್ದು, ಸಮಗ್ರ ತನಿಖೆ ನಡೆಸಿ ಅವರ ವಿರುದ್ಧದ ಆರೋಪವನ್ನು ಕೈಬಿಡಬೇಕು ಎಂದು ಹೈದರಾಬಾದ್ ಕರ್ನಾಟಕ ಪ್ರದೇಶ ವಾಲ್ಮೀಕಿ ನಾಯಕ ಸಂಘದ ವಿಭಾಗೀಯ ಕಾರ್ಯದರ್ಶಿ ಎನ್. ರಘುವೀರ ನಾಯಕ ಆಗ್ರಹಿಸಿದರು.

ನಗರದ ಪತ್ರಿಕಾ ಭವನದಲ್ಲಿ ಸೋಮವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗಬ್ಬೂರು ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣ ಸಂಖ್ಯೆ 104/2026ರಲ್ಲಿ ಭೀಮರಾಯ ಹದ್ದಿನಾಳ ಅವರನ್ನು 8ನೇ ಆರೋಪಿಯನ್ನಾಗಿ ಸೇರಿಸಲಾಗಿದೆ. ಮಧ್ಯಾಹ್ನ 3 ಗಂಟೆಗೆ ದಾಖಲಾದ ಪ್ರಾಥಮಿಕ ಎಫ್‌ಐಆರ್‌ನಲ್ಲಿ ಅವರ ಹೆಸರು ಇರಲಿಲ್ಲ. ಬಳಿಕ ಸಂಜೆ 6 ಗಂಟೆಗೆ ಎಫ್‌ಐಆರ್ ತಿದ್ದುಪಡಿ ಮಾಡಿ ಹೆಸರು ಸೇರ್ಪಡೆ ಮಾಡಲಾಗಿದೆ ಎಂದು ಆರೋಪಿಸಿದರು.

ಪ್ರಕರಣಕ್ಕೆ ಯಾವುದೇ ಸಂಬಂಧವಿಲ್ಲದ

3 ನೇ ಪುಟಕ್ಕೆ

ವರ್ಷಧಾರೆಯಿಲ್ಲದೆ ಬರಗಾಲ; ವಲಸೆ ತಡೆಗೆ ವಿಬಿ - ಜಿ ರಾಮ್ ಜಿ ಆಸರೆ - ಪರಿಣಾಮಕಾರಿ ಅನುಷ್ಠಾನಕ್ಕೆ ಸಚಿವ ಈಶ್ವರ ಬಿ. ಖಂಡ್ರೆ ಸೂಚನೆ



ಬಳ್ಳಾರಿ,ಆ.10-

ಜಿಲ್ಲೆಯಲ್ಲಿ ಮಳೆಯ ಪ್ರಮಾಣ ಕಡಿಮೆಯಾಗಿದ್ದು, ಕೃಷಿ ಚಟುವಟಿಕೆಗಳು ಕ್ಷೀಣಿಸಿರುವುದರಿಂದ ಜನರು ಉದ್ಯೋಗ ಅರಸಿ ನಗರಗಳಿಗೆ ವಲಸೆ ಹೋಗುವ ಸಾಧ್ಯತೆಯಿದೆ. ಗ್ರಾಮೀಣ ಭಾಗದಲ್ಲೇ ಪ್ರತಿಯೊಬ್ಬ ಅರ್ಹ ಕೂಲಿಕಾರನಿಗೆ ವಿ ಬಿ - ಜಿ ರಾಮ್ ಜಿ ಯೋಜನೆಯಡಿ ಕೆಲಸ ನೀಡುವ ಮೂಲಕ ವಲಸೆಯನ್ನು ತಡೆಯಬೇಕು ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಬಿ. ಖಂಡ್ರೆ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಗರದ ಜಿಲ್ಲಾ ಪಂಚಾಯತ್ ನ ಹೊಸ ಅಬ್ದುಲ್ ನಜೀರ್ ಸಾಬ್ ಸಭಾಂಗಣದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿ ಗ್ರಾಮೀಣ ಭಾಗದ ಜನರಿಗೆ ಸ್ಥಳೀಯವಾಗಿಯೇ ಉದ್ಯೋಗ ಒದಗಿಸುವ ನಿಟ್ಟಿನಲ್ಲಿ 'ವಿಕಸಿತ್ ಭಾರತ್ - ಗ್ಯಾರಂಟಿ ಫಾರ್ ರೋಜ್‌ಗಾರ್ ಮತ್ತು ಆಜೀವಿಕಾ ಮಿಷನ್ (ಗ್ರಾಮೀಣ)' ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಬೇಕು ಎಂದು ತಿಳಿಸಿದರು.

ಜಿಲ್ಲೆಯಲ್ಲಿ ಜೂನ್ ತಿಂಗಳವರೆಗೆ ನಿಗದಿಪಡಿಸಿದ್ದ ಮಾನವ ದಿನಗಳ ಸೃಷ್ಟಿಯ ಗುರಿಯಲ್ಲಿ ಶೇ. 46 ರಷ್ಟು ಮಾತ್ರ ಸಾಧನೆಯಾಗಿದ್ದು, ನಿರೀಕ್ಷಿತ ಮಟ್ಟ ತಲುಪದಿರುವ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ ಸಚಿವರು, ಜಿಲ್ಲೆಯಲ್ಲಿ ಪ್ರಸಕ್ತ ವರ್ಷಕ್ಕೆ ಒಟ್ಟು 51.30 ಲಕ್ಷ ಮಾನವ ದಿನಗಳ ಸೃಷ್ಟಿಯ ಗುರಿ ಹೊಂದಲಾಗಿದೆ. ಜುಲೈ ತಿಂಗಳಿನಿಂದ ಉದ್ಯೋಗ ಸೃಷ್ಟಿ ವೇಗವನ್ನು ಹೆಚ್ಚಿಸಬೇಕಿದ್ದು, ಪ್ರತಿ ತಿಂಗಳು ಕನಿಷ್ಠ 5 ರಿಂದ 6 ಲಕ್ಷ ಮಾನವ ದಿನಗಳನ್ನು ಸೃಷ್ಟಿಸುವಂತೆ ಸಚಿವರು ನಿರ್ದೇಶನ ನೀಡಿದರು.

ಜಿಲ್ಲೆಯಲ್ಲಿ ಒಟ್ಟು 1.84 ಲಕ್ಷ ಸಕ್ರಿಯ ಜಾಬ್ ಕಾರ್ಡ್‌ಗಳಿದ್ದು, 4.60 ಲಕ್ಷ ಕಾರ್ಮಿಕರಿದ್ದಾರೆ. ಇದರಲ್ಲಿ ಸುಮಾರು 1.30 ಲಕ್ಷ ಜಾಬ್ ಕಾರ್ಡ್‌ಗಳಿಗೆ ಇ-ಕೆವೈಸಿ ಪ್ರಕ್ರಿಯೆ ಪೂರ್ಣಗೊಂಡಿದೆ. ಆದಷ್ಟು ಬೇಗ ಬಾಕಿ ಇರುವ ಪ್ರಕ್ರಿಯೆ ಮುಗಿಸುವಂತೆ ತಿಳಿಸಿದರು.

★ಬಳ್ಳಾರಿ ತಾಲೂಕು ಸಾಧನೆಗೆ ಅಸಮಾಧಾನ:★

ಬಳ್ಳಾರಿ ತಾಲೂಕಿನಲ್ಲಿ 48,000 ಸಕ್ರಿಯ ಜಾಬ್ ಕಾರ್ಡ್‌ಗಳಿದ್ದರೂ ದಿನಕ್ಕೆ ಕೇವಲ 11,000 ದಷ್ಟು ಕಾರ್ಮಿಕರಿಗೆ ಮಾತ್ರ ಕೆಲಸ ನೀಡುತ್ತಿರುವುದಕ್ಕೆ ಸಚಿವರು ಅಸಮಾಧಾನ ವ್ಯಕ್ತಪಡಿಸಿದರು. ಇದಕ್ಕೆ ಬಳ್ಳಾರಿ ತಾಲೂಕು ಇಓ ಪ್ರತಿಕ್ರಿಯಿಸಿ, ಹಳೆಯ ಕಾಮಗಾರಿಗಳು ಪೂರ್ಣಗೊಂಡಿದ್ದು, ಹೊಸ ಕಾಮಗಾರಿಗಳಿಗೆ ಆಕ್ಷನ್ ಪ್ಲಾನ್ ಸಿದ್ದಪಡಿಸಿ ಉದ್ಯೋಗ ನೀಡುವುದರಲ್ಲಿ ವಿಳಂಬವಾಗುತ್ತಿದೆ ಎಂದು ವಿವರಿಸಿದರು. ಇದಕ್ಕೆ ಸಚಿವರು ಸಾಬೂಬುಗಳನ್ನು ನೀಡದೆ ವೈಯಕ್ತಿಕ ಹಾಗೂ ಸಮುದಾಯ ಆಧಾರಿತ ಕಾಮಗಾರಿಗಳನ್ನು ತಕ್ಷಣವೇ ಪ್ರಾರಂಭಿಸಬೇಕು ಎಂದು ಎಚ್ಚರಿಸಿದರು.

ವಿ ಬಿ - ಜಿ ರಾಮ್ ಜಿ ಯೋಜನೆಯ ಸ್ವರೂಪ ಬದಲಾವಣೆಯಿಂದಾಗಿ ಆರಂಭದಲ್ಲಿ ಕೆಲವೊಂದು ಗೊಂದಲಗಳಿದ್ದವು. ಆದರೆ, ಈಗ ಆ ಗೊಂದಲಗಳಿಗೆ ಸ್ಪಷ್ಟೀಕರಣ ದೊರೆತಿದ್ದು, ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲಾಗಿದೆ. ಈವರೆಗೆ ಬೃಹತ್ ಪ್ರಮಾಣದ ಅನುದಾನ ವೆಚ್ಚಮಾಡಲಾಗಿದೆ. ಪ್ರಸಕ್ತ ಸಾಲಿನಲ್ಲಿ ಬಲವಾದ ಹಣಕಾಸು ಬೆಂಬಲ ಒದಗಿಸಲಾಗಿದ್ದು, ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರದ ಅನುದಾನದ ಸಹಯೋಗದೊಂದಿಗೆ ಯೋಜನೆ ಮುನ್ನಡೆಯುತ್ತಿದೆ ಎಂದು ತಿಳಿಸಿದರು.

★ಅಧಿಕಾರಿಗಳೇ ಹೊಣೆ:★

ಜಿಲ್ಲೆಯಲ್ಲಿ ಬಡವರು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಗಳ ಜನರು ಕೆಲಸ ಅರಸಿ ಬೇರೆಡೆ ವಲಸೆ ಹೋಗುವುದನ್ನು ತಡೆಯುವುದು ಸರ್ಕಾರದ ಪ್ರಮುಖ ಆದ್ಯತೆಯಾಗಿದೆ. ಯಾವುದೇ ಪ್ರದೇಶದಿಂದ ಜನರು ಕೆಲಸ ಸಿಗದೆ ವಲಸೆ ಹೋದರೆ, ಅದಕ್ಕೆ ಸಂಬಂಧಪಟ್ಟ ಇಓ, ಪಿಡಿಓ ಅಧಿಕಾರಿಗಳನ್ನೇ ಜವಾಬ್ದಾರರನ್ನಾಗಿ ಮಾಡಲಾಗುವುದು. ಜನರು ವಲಸೆ ಹೋಗಿದ್ದರೆ, ಅವರು ಯಾವ ಕಾರಣಕ್ಕಾಗಿ ತೆರಳಿದ್ದಾರೆ ಎಂಬುದಕ್ಕೆ ಅಧಿಕಾರಿಗಳು ಸ್ಪಷ್ಟ ವಿವರಣೆ ಮತ್ತು ಮಾಹಿತಿ ನೀಡಬೇಕಾಗುತ್ತದೆ ಎಂದು ಎಚ್ಚರಿಸಿದರು.

★ನಿಗಾ ಮತ್ತು ಶೀಘ್ರ ವೇತನ ಪಾವತಿ:★

ಉದ್ಯೋಗ ಖಾತರಿ ಯೋಜನೆಯಡಿ ನಿರಂತರ ನಿಗಾ ವಹಿಸಬೇಕು. ಬಡ ಕಾರ್ಮಿಕರಿಗೆ ಗ್ರಾಮ ಮಟ್ಟದಲ್ಲೇ ಕೂಲಿ ಉದ್ಯೋಗ ಒದಗಿಸಿ, ಅವರ ಬ್ಯಾಂಕ್ ಖಾತೆಗಳಿಗೆ ನಿಯಮಿತವಾಗಿ ಕೂಲಿ ಹಣ ಜಮೆಯಾಗುವಂತೆ ನೋಡಿಕೊಳ್ಳಬೇಕು. ಒಮ್ಮೆ ಕಾರ್ಮಿಕರ ಖಾತೆಗೆ ಹಣ ನೇರವಾಗಿ ಜಮೆಯಾದರೆ, ಯೋಜನೆಯ ಬಗ್ಗೆ ಅವರಲ್ಲಿ ನಂಬಿಕೆ ಮತ್ತು ಆಸಕ್ತಿ ಹೆಚ್ಚಾಗುತ್ತದೆ. ಹಾಗಾಗಿ, ಯೋಜನೆಗೆ ಹೆಚ್ಚಿನ ಆದ್ಯತೆ ನೀಡಿ, ಯಾವುದೇ ರೀತಿಯ ಲೋಪದೋಷಗಳಿಲ್ಲದೆ ಅತ್ಯಂತ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಬೇಕು ಎಂದು ಸಚಿವರು ಅಧಿಕಾರಿಗಳಿಗೆ ಸ್ಪಷ್ಟ ನಿರ್ದೇಶನ ನೀಡಿದರು.

★ಹಣಕಾಸಿನ ಕೊರತೆಯಿಲ್ಲ:★

ವಿ ಬಿ - ಜಿ ರಾಮ್ ಜಿ ಯೋಜನೆಗೆ ಅನುದಾನದ ಕೊರತೆಯಿಲ್ಲ. ಈಗಾಗಲೇ ಜಿಲ್ಲಾ ಪಂಚಾಯಿತಿಗಳಿಗೆ ರೂ.1,000 ಕೋಟಿಗೂ ಹೆಚ್ಚು ಹಣ ಬಿಡುಗಡೆ ಮಾಡಲಾಗಿದೆ. ಮೊದಲ ತ್ರೈಮಾಸಿಕದಲ್ಲಿ ರಾಜ್ಯ ಸರ್ಕಾರ ರೂ.1,200 ಕೋಟಿ ಹಾಗೂ ಕೇಂದ್ರ ಸರ್ಕಾರ ರೂ.1,700 ಕೋಟಿ ಅನುದಾನ ಒದಗಿಸಿದೆ. ಯೋಜನೆ ಅನುಷ್ಠಾನದಲ್ಲಿ ಸಂಪೂರ್ಣ ಪಾರದರ್ಶಕತೆ ಕಾಯ್ದುಕೊಳ್ಳಬೇಕು ಮತ್ತು ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ಕಾಮಗಾರಿ ಸ್ಥಳಕ್ಕೆ ಅಧಿಕಾರಿಗಳು ಖುದ್ದಾಗಿ ಭೇಟಿ ನೀಡಿ ಪರಿಶೀಲಿಸಬೇಕು, ಕೇವಲ ದಾಖಲೆಗಳಲ್ಲಿ ಕೆಲಸ ತೋರಿಸುವುದನ್ನು ಸಹಿಸುವುದಿಲ್ಲ ಎಂದು ಎಚ್ಚರಿಸಿದರು. ಕೇವಲ ಮೇಲಧಿಕಾರಿಗಳಷ್ಟೇ ಅಲ್ಲದೆ, ತಾಂತ್ರಿಕ ಸೂಪರ್‌ವೈಸರ್‌ಗಳು, ಇಓ ಹಾಗೂ ಐಇಸಿ ಸಂಯೋಜಕರು ಸಹ ಕ್ಷೇತ್ರಮಟ್ಟದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ಕೆಲಸ ನಿರ್ವಹಿಸಬೇಕು. ಪ್ರತಿಯೊಬ್ಬ ಅರ್ಹ ಕಾರ್ಮಿಕನಿಗೂ ಸಮಯಕ್ಕೆ ಸರಿಯಾಗಿ ಕೂಲಿ ಸಿಗುವಂತೆ ನೋಡಿಕೊಳ್ಳುವುದು ಅಧಿಕಾರಿಗಳ ಜವಾಬ್ದಾರಿಯಾಗಿದ್ದು, ಸಾರ್ವಜನಿಕ ಹಣದ ಸರಿಯಾದ ಬಳಕೆ ಹಾಗೂ ಪಾರದರ್ಶಕ ಆಡಳಿತಕ್ಕೆ ಮೊದಲ ಆದ್ಯತೆ ನೀಡಬೇಕೆಂದು ಎಂದು ಸಚಿವರು ನಿರ್ದೇಶನ ನೀಡಿದರು.

★ನೀರಾವರಿ ಕಾಲುವೆ ಹಾಗೂ ಫೀಲ್ಡ್ ಚಾನೆಲ್ ನಿರ್ಮಾಣ:★

ಮುಖ್ಯ ನೀರಾವರಿ ಕಾಲುವೆಗಳಿಂದ ಕೊನೆಯ ಹಂತದ ರೈತರ ಜಮೀನುಗಳಿಗೆ ನೀರು ತಲುಪಿಸಲು ಅಗತ್ಯವಿರುವ 'ಫೀಲ್ಡ್ ಚಾನೆಲ್' ಹಾಗೂ ಎಫ್‌ಐಸಿ ನಿರ್ಮಾಣ ಕಾರ್ಯಕ್ಕೆ ಆದ್ಯತೆ ನೀಡಬೇಕು. ಸಣ್ಣ ನೀರಾವರಿ ಹಾಗೂ ನೀರಾವರಿ ಇಲಾಖೆಯ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ, ನೀರು ಪೋಲಾಗದಂತೆ ರೈತರ ಹೊಲಗಳಿಗೆ ತಲುಪಿಸುವ ಕಾಮಗಾರಿಗಳನ್ನು ಪ್ರಥಮ ಆದ್ಯತೆಯಲ್ಲಿ ಹಮ್ಮಿಕೊಳ್ಳಲು ನಿರ್ದೇಶನ ನೀಡಿದರು.

★24 ಗಂಟೆಗಳಲ್ಲಿ ಜಾಬ್ ಕಾರ್ಡ್ ವಿತರಣೆ:★

ಸಾರ್ವಜನಿಕರು ಅಥವಾ ಕೂಲಿ ಕಾರ್ಮಿಕರು ನರೇಗಾ ಉದ್ಯೋಗಕ್ಕಾಗಿ ಬೇಡಿಕೆ ಸಲ್ಲಿಸಿದರೆ ಅಥವಾ ಜಾಬ್ ಕಾರ್ಡ್‌ಗೆ ಅರ್ಜಿ ಸಲ್ಲಿಸಿದರೆ, ಪರಿಶೀಲನೆ ನಡೆಸಿ 24 ಗಂಟೆಗಳ ಒಳಗೆ ಜಾಬ್ ಕಾರ್ಡ್ ವಿತರಿಸಬೇಕು. ಉದ್ಯೋಗ ಬೇಡಿಕೆ ಸಲ್ಲಿಸಿದರೂ ಕೆಲಸ ಸಿಗಲಿಲ್ಲ ಅಥವಾ ಜಾಬ್ ಕಾರ್ಡ್ ನೀಡುವಲ್ಲಿ ಅನಗತ್ಯ ವಿಳಂಬವಾಯಿತು ಎಂಬ ದೂರುಗಳು ಸಾರ್ವಜನಿಕರಿಂದ ಬರಬಾರದು ಎಂದರು.

ಗ್ರಾಮೀಣ ಭಾಗದ ಪ್ರತಿಯೊಂದು ಮನೆಗೂ ಕಲುಷಿತ ಮುಕ್ತ ಹಾಗೂ ಶುದ್ಧ ಕುಡಿಯುವ ನೀರನ್ನು ತಲುಪಿಸುವುದು ಸರ್ಕಾರದ ಮುಖ್ಯ ಆದ್ಯತೆಯಾಗಿದ್ದು, ಕಾಮಗಾರಿಗಳಲ್ಲಿ ಯಾವುದೇ ರೀತಿಯ ವಿಳಂಬ ಹಾಗೂ ಅಸಡ್ಡೆಯನ್ನು ಸಹಿಸುವುದಿಲ್ಲ ಎಂದು ಅಧಿಕಾರಿಗಳಿಗೆ ತಿಳಿಸಿದರು.

ಜಲಜೀವನ್ ಮಿಷನ್ ಕಾಮಗಾರಿಗಾಗಿ ತೋಡಲಾದ ರಸ್ತೆಗಳನ್ನು ಸರಿಯಾಗಿ ಮರುನಿರ್ಮಾಣ ಮಾಡಿಲ್ಲ. ಪೈಪ್‌ಲೈನ್ ಅಳವಡಿಕೆ ಪೂರ್ಣಗೊಂಡ ತಕ್ಷಣ ರಸ್ತೆಗಳನ್ನು ಹಳೆಯ ಸ್ಥಿತಿಗೆ ತರುವುದು ಗುತ್ತಿಗೆದಾರರು ಮತ್ತು ಎಂಜಿನಿಯರ್‌ಗಳ ಜವಾಬ್ದಾರಿಯಾಗಿದೆ ಎಂದು ತಿಳಸಿದರು.

ಗ್ರಾಮ ಪಂಚಾಯಿತಿ ಅಧಿಕಾರಿಗಳು ಮತ್ತು ಎಂಜಿನಿಯರ್‌ಗಳು ಜಂಟಿಯಾಗಿ ಕಾರ್ಯನಿರ್ವಹಿಸಿ, ಜಲಜೀವನ್ ಮಿಷನ್ ಯೋಜನೆಯನ್ನು ಸಂಪೂರ್ಣವಾಗಿ ಯಶಸ್ವಿಗೊಳಿಸಬೇಕು ಎಂದು ಸೂಚಿಸಿದ ಅವರು, ತೆರಿಗೆ ಸಂಗ್ರಹದಲ್ಲಿ ವೇಗ ನೀಡಬೇಕು. ಜಿಲ್ಲೆಯ ಎಲ್ಲಾ ಸಾರ್ವಜನಿಕ ಗ್ರಂಥಾಲಯಗಳ ಪುಸ್ತಕ ದಾಸ್ತಾನು, ನಿರ್ವಹಣೆ, ಡಿಜಿಟಲ್ ಸೌಲಭ್ಯ ಒದಗಿಸುವಂತೆ ತಿಳಿಸಿದರು.

★ಮನೆ-ಮನೆಗೆ ತೆರಳಿ ಇ-ಸ್ವತ್ತು ವಿತರಣೆ:★

ಸಾರ್ವಜನಿಕರು ಕಚೇರಿಗಳಿಗೆ ಅಲೆಯುವುದನ್ನು ತಪ್ಪಿಸಲು ಅಧಿಕಾರಿಗಳು ಹಾಗೂ ಸಿಬ್ಬಂದಿ ಹೆಚ್ಚುವರಿ ಶ್ರಮ ವಹಿಸಿ ಮನೆ-ಮನೆಗೆ ತೆರಳಿ ಸ್ವತ್ತುಗಳ ಇ-ಸ್ವತ್ತು ಮತ್ತು ಖಾತಾ ದಾಖಲೆಗಳನ್ನು ನೀಡಲು ಯೋಜನೆ ರೂಪಿಸಲಾಗಿದೆ. ಈಗಾಗಲೇ ಡ್ರಾಫ್ಟ್ ಖಾತಾ ತಯಾರಾಗಿದ್ದು, ಯಾವುದೇ ಅನಗತ್ಯ ವ್ಯಕ್ತಿಗಳಿಗೆ ಅಥವಾ ಮೂರನೇ ವ್ಯಕ್ತಿಗಳಿಗೆ ಖಾತಾ ವರ್ಗಾವಣೆಗೆ ಅವಕಾಶವಿರುವುದಿಲ್ಲ. ಯಾರು ಮೂಲ ಮಾಲೀಕರಿದ್ದಾರೋ ಅವರಿಗೆ ಮಾತ್ರವೇ ಖಾತೆಗಳನ್ನು ನೀಡಬೇಕು ಎಂದು ತಿಳಿಸಿದರು.

ಇದೇ ವೇಳೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಕ್ಯಾಲೆಂಡರ್ ಬಿಡುಗಡೆ ಮಾಡಿದರು.

ಸಭೆಯಲ್ಲಿ ಡಾ.ಬಾಬು ಜಗನ್ ಜೀವನ್ ರಾಮ್ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದ ಅಧ್ಯಕ್ಷ ಮುಂಡರಗಿ ನಾಗರಾಜ, ಬಳ್ಳಾರಿ ಮಹಾನಗರ ಪಾಲಿಕೆಯ ಮೇಯರ್ ಪಿ.ಗಾದೆಪ್ಪ, ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯದ ಆಯುಕ್ತರಾದ ಡಾ.ಅರುಂಧತಿ ಚಂದ್ರಶೇಖರ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಹಮ್ಮದ್ ಹಾರೀಸ್ ಸುಮೇರ್, ಜಿಪಂ ಉಪಕಾರ್ಯದರ್ಶಿ ಶಶಿಕಾಂತ್ ಶಿವಪುರೆ, ಜಿಪಂ ಮುಖ್ಯ ಯೋಜನಾಧಿಕಾರಿ ವಾಗೀಶ್ ಶಿವಾಚಾರ್ಯ, ಜಿಪಂ ಮುಖ್ಯ ಲೆಕ್ಕಾಧಿಕಾರಿ ವಿನೋದ್ ಹಾಗೂ ಜಿಲ್ಲೆಯ ವಿವಿಧ ತಾಲೂಕುಗಳ ತಾಪಂ ಇಓ ಗಳು, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಹಾಗೂ ಇತರರು ಉಪಸ್ಥಿತರಿದ್ದರು.

ಬಂಜಾರಾ ನೌಕರರ 4ನೇ ವಾರ್ಷಿಕ ಕ್ರೀಡಾಕೂಟಕ್ಕೆ ಅದ್ದೂರಿ ಚಾಲನೆ



ಕಲಬುರಗಿ,ಆ.10-

ಕ್ರೀಡೆ ದೈಹಿಕ ಆರೋಗ್ಯದ ಜೊತೆಗೆ ಮಾನಸಿಕ ಉಲ್ಲಾಸ, ಶಿಸ್ತು, ಸಮಯಪಾಲನೆ ಹಾಗೂ ಸಂಘಟನಾ ಮನೋಭಾವ ಬೆಳೆಸಲು ಸಹಕಾರಿಯಾಗಿದೆ ಎಂದು ಚಿಂಚೋಳಿ ಶಾಸಕ ಅವಿನಾಶ ಜಾಧವ್ ಹೇಳಿದರು.

ನಗರದ ಚಂದ್ರಶೇಖರ ಪಾಟೀಲ್ ಕ್ರೀಡಾಂಗಣದಲ್ಲಿ ರವಿವಾರ ಬಂಜಾರಾ ಸರ್ಕಾರಿ ಮತ್ತು ಅರೆ ಸರ್ಕಾರಿ ನೌಕರರ ಸಂಘದ ಜಿಲ್ಲಾ ಘಟಕದ ವತಿಯಿಂದ ಆಯೋಜಿಸಿದ್ದ ಬಂಜಾರಾ ನೌಕರರ 4ನೇ ವಾರ್ಷಿಕ ಕ್ರೀಡಾಕೂಟಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ವೃತ್ತಿ ಜೀವನದ ಒತ್ತಡದ ನಡುವೆಯೂ ನೌಕರರು ಕ್ರೀಡೆಯಲ್ಲಿ ಉತ್ಸಾಹದಿಂದ ಪಾಲ್ಗೊಳ್ಳುತ್ತಿರುವುದು ಶ್ಲಾಘನೀಯ. ಕ್ರೀಡೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುವುದರಿಂದ ದೈಹಿಕ ಸಾಮರ್ಥ್ಯದ ಜತೆಗೆ ಮಾನಸಿಕ ನೆಮ್ಮದಿ ಹಾಗೂ ಸ್ಪರ್ಧಾತ್ಮಕ ಮನೋಭಾವವೂ ವೃದ್ಧಿಯಾಗುತ್ತದೆ ಎಂದರು.

ಕಲಬುರಗಿ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಬಸವರಾಜ ಬಳ್ಳೂಂಡಗಿ ಮಾತನಾಡಿ, ನೌಕರರ ನಡುವೆ ಕ್ರೀಡಾ ಮನೋಭಾವ ಬೆಳೆಸುವುದರೊಂದಿಗೆ ಪರಸ್ಪರ ಸೌಹಾರ್ದತೆ, ಸ್ನೇಹಭಾವ ಮತ್ತು ಒಗ್ಗಟ್ಟು ಹೆಚ್ಚಿಸಲು ಇಂತಹ ಕ್ರೀಡಾಕೂಟಗಳು ಸಹಕಾರಿಯಾಗುತ್ತವೆ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಬಂಜಾರಾ ಸರ್ಕಾರಿ ಮತ್ತು ಅರೆ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಹರಿಶ್ಚಂದ್ರ ಎಸ್. ರಾಠೋಡ ಮಾತನಾಡಿ, ಬಂಜಾರಾ ಸಮುದಾಯದ ನೌಕರರಲ್ಲಿ ಪರಸ್ಪರ ಸೌಹಾರ್ದತೆ, ಸ್ನೇಹಭಾವ ಹಾಗೂ ಸಂಘಟನಾ ಮನೋಭಾವ ಬೆಳೆಸುವ ಉದ್ದೇಶದಿಂದ ಪ್ರತಿವರ್ಷ ಕ್ರೀಡಾಕೂಟ ಆಯೋಜಿಸಲಾಗುತ್ತಿದೆ. ಇದು ನೌಕರರ ದೈಹಿಕ ಹಾಗೂ ಮಾನಸಿಕ ಕ್ಷಮತೆ ಹೆಚ್ಚಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ ಎಂದರು.

ಕ್ರೀಡಾಕೂಟದಲ್ಲಿ ಕ್ರಿಕೆಟ್ ಸೇರಿದಂತೆ ವಿವಿಧ ಕ್ರೀಡಾ ಸ್ಪರ್ಧೆಗಳನ್ನು ಆಯೋಜಿಸಲಾಗಿದ್ದು, ಜಿಲ್ಲೆಯ ವಿವಿಧೆಡೆ ಕಾರ್ಯನಿರ್ವಹಿಸುತ್ತಿರುವ ಬಂಜಾರಾ ಸಮುದಾಯದ ಸರ್ಕಾರಿ ಹಾಗೂ ಅರೆ ಸರ್ಕಾರಿ ನೌಕರರು ತಂಡೋಪತಂಡವಾಗಿ ಉತ್ಸಾಹದಿಂದ ಪಾಲ್ಗೊಂಡರು. ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ಹಾಗೂ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಕಲಬುರಗಿ ಉಪನಿರ್ದೇಶಕ ರಾಜಕುಮಾರ ಜಿ. ರಾಠೋಡ, ಕಲಬುರಗಿ ಜಿಲ್ಲೆಯ ಎಸಿಎಫ್ ಸುನೀಲಕುಮಾರ ಜಿ. ಚವ್ಹಾಣ, ಸಂಘದ ಗೌರವಾಧ್ಯಕ್ಷ ಡಾ. ಪ್ರೇಮಸಿಂಗ ಚವ್ಹಾಣ, ಪ್ರಧಾನ ಕಾರ್ಯದರ್ಶಿ ಬಾಬು ಎಂ. ಜಾಧವ, ತಾರಾನಾಥ್ ಚೌಹಾಣ್, ಧನರಾಜ್ ಚೌಹಾಣ್, ಸತೀಶ್ ಚೌಹಾಣ್, ಶಿವರಾಮು ರಾಠೋಡ್, ಪ್ರಭು ಜಾಧವ್ ಸೇರಿದಂತೆ ಸಂಘದ ಪದಾಧಿಕಾರಿಗಳು, ನಿವೃತ್ತ ಸರ್ಕಾರಿ ಹಾಗೂ ಅರೆ ಸರ್ಕಾರಿ ನೌಕರರ ಸಂಘದ ಪದಾಧಿಕಾರಿಗಳು ಮತ್ತು ವಿವಿಧ ಇಲಾಖೆಗಳ ನೌಕರರು ಉಪಸ್ಥಿತರಿದ್ದರು.

ಒಲವಿನ ಮಾತುಗಳು ಕವಯಿತ್ರಿಯ ಕವನಗಳಲ್ಲಿ ಒಡಮೂಡಿವೆ: ಅಪರ ಜಿಲ್ಲಾಧಿಕಾರಿ



ಬಳ್ಳಾರಿ,ಆ.10-

ಒತ್ತಡದ ಬದುಕಿನಲ್ಲಿ ಅರಳಿದ, ಪ್ರೀತಿಯ ಪರಿಮಳವನ್ನು ತುಂಬಿದ ಭಾವಗಳು ಕಾವ್ಯದಲ್ಲಿ ಒಡಮೂಡಿವೆ ಎಂದು ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್.ಎನ್ ಅವರು ಅಭಿಪ್ರಾಯಪಟ್ಟರು.

ಭಾನುವಾರ ನಗರದ ಕನ್ನಡ ಭವನದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಜಿಲ್ಲಾ ಘಟಕ, ಬಸವ ಪಬ್ಲಿಕೇಷನ್ಸ್, ಸಂಡೂರು ಇವರ ಸಹಯೋಗದಲ್ಲಿ ಆಯೋಜಿಸಿದ್ದ ಕವಯಿತ್ರಿ ಟಿ. ಲೀಲಾವತಿ (ಸಾಯಿಲೀಲಾ) ಅವರ 'ಒಲವು ಮೂಡಿದಾಗ' ಕವನ ಸಂಕಲನ ಲೋಕಾರ್ಪಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಉದ್ಯೋಗದ ನಡುವೆ ಸಾಹಿತ್ಯದ ಪ್ರೀತಿಯನ್ನು ಬೆಳೆಸಿಕೊಂಡಿರುವ ಲೀಲಾವತಿಯವರು ಕನ್ನಡ ಸಾಹಿತ್ಯಕ್ಕೆ ಹೆಚ್ಚಿನ ಕೊಡುಗೆ ನೀಡಲಿ ಎಂದು ತಿಳಿಸಿದರು.

ಒಲವು ಮೂಡಿದಾಗ ಕವನ ಸಂಕಲನವನ್ನು ಲೋಕಾರ್ಪಣೆ ಮಾಡಿದ ಕುರುಗೋಡಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಡಾ. ಶಾಂತಲಾ ಅವರು ಮಾತನಾಡಿ, ಈ ಕವನ ಸಂಕಲನದ ಕವನಗಳೆಲ್ಲವೂ ಸಹ ನಮ್ಮ ಸುತ್ತಮುತ್ತಲಿನ ಘಟನೆಗಳಿಗೆ ಸಂಬಂಧಿಸಿವೆ. ಕೌಟುಂಬಿಕ ಸಾಮರಸ್ಯ, ಒಲವು, ಸಾಮಾಜಿಕ ಕಳಕಳಿ ಕವನಗಳ ಜೀವಾಳವಾಗಿದ್ದು, ಕವಯತ್ರಿ ಲೀಲಾವತಿಯವರ ಅವರ ಸಾಹಿತ್ಯದ ಅಭಿರುಚಿ ಹೀಗೆ ಮುಂದುವರೆಯಲಿ ಎಂದು ಶುಭ ಹಾರೈಸಿದರು.

ಡಾ. ವೇಣುಗೋಪಾಲ ಎನ್. ಎಸ್ ಕೃತಿ ಕುರಿತು ಮಾತನಾಡಿ, ಜ್ಞಾನದ ಹಸಿವನ್ನು ಹೊಂದಿದ ಪ್ರೀತಿಯ ವಿದ್ಯಾರ್ಥಿನಿ ಲೀಲಾವತಿ ಅವರು 'ಒಲವು ಮೂಡಿದಾಗ' ಎಂಬ ಕವನ ಸಂಕಲನವನ್ನು ಹೊರ ತರುತ್ತಿರುವುದು ತುಂಬಾ ಸಂತೋಷದ ಸಂಗತಿ. ಉದ್ಯೋಗ ಮತ್ತು ಸಂಸಾರಗಳ ನಡುವೆ ಸಾಹಿತ್ಯದ ಸದಭಿರುಚಿಯ ಸಹವಾಸ. ಇದರ ಪ್ರತಿಫಲವೇ ಈ ಕವನ ಸಂಕಲನ ಮೂಡಿಬಂದಿದೆ ಎಂದು ಹೇಳಿದರು.

ಇದರಲ್ಲಿ 35 ಕವನಗಳಿದ್ದು ಒಲುಮೆ, ಪುಸ್ತಕ ಪ್ರೀತಿ, ದೈವದ ಸ್ಮರಣೆ , ಹಸಿವು , ವಿಧಿ , ಸ್ನೇಹ, ವ್ಯಕ್ತಿ ಚಿತ್ರಣ, ನಿರಾಸೆ, ಛಲ ಮುಂತಾದ ಭಾವಗಳನ್ನು ಒಳಗೊಂಡ ಕವನಗಳು ಇವೆ. ಒಲುಮೆಗೆ ಸಂಬಂಧಿಸಿದ ಕವನಗಳೇ ಹೆಚ್ಚಾಗಿರುವುದರಿಂದ ಕವನ ಸಂಕಲನಕ್ಕೆ 'ಒಲವು ಮೂಡಿದಾಗ 'ಎಂಬ ಶೀರ್ಷಿಕೆ ಸೂಕ್ತವೆನಿಸಿದೆ. ಇಲ್ಲಿಯ ಕವನಗಳು ಅತ್ಯಂತ ಶಕ್ತಿಯುತವಾಗಿದ್ದು, ಆರಂಭದ ಕವನ ಸಂಕಲನ ಇದಾಗಿದ್ದು ಮುಂದಿನ ದಿನಗಳಲ್ಲಿ ಮತ್ತಷ್ಟು ಪ್ರಬುದ್ಧವಾದ ಕವನಗಳು ಈಕೆಯಿಂದ ಹೊರಹೊಮ್ಮಲಿ, ನಾಡಿನ ಎಲ್ಲರ ಮನೆ- ಮನಗಳಲ್ಲಿ ಈ ಸಾಹಿತ್ಯದ ಸುಗಂಧ ಹರಡಲಿ ಎಂದು ಶುಭ ಹಾರೈಸಿದರು. ಕವಿಯತ್ರಿ ಟಿ. ಲೀಲಾವತಿ ಮಾತನಾಡಿ 'ಸಾಯಿಲೀಲಾ' ಕಾವ್ಯನಾಮದಲ್ಲಿ ರಚಿಸಿದ ನನ್ನ ಮೊದಲ ಕವನ ಸಂಕಲನ ಒಲವು ಮೂಡಿದಾಗ ಪ್ರಕಟಗೊಳ್ಳುತ್ತಿ ರುವುದು ಸಂತಸದ ಸಂಗತಿ. ಈ ಕೃತಿಯ ಪ್ರಕಟಣೆಗೆ ಸಹಕರಿಸಿದ ಪ್ರತಿಯೊಬ್ಬರಿಗೂ ಧನ್ಯವಾದಗಳನ್ನು ತಿಳಿಸಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷರಾದ ಡಾ. ನಿಷ್ಠಿ ರುದ್ರಪ್ಪ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಕನ್ನಡ ಸಾಹಿತ್ಯ ಪರಿಷತ್ತು ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯಾಗಿದ್ದು ಸಾಹಿತ್ಯ ಸಂಸ್ಕೃತಿಯ ಸಂವರ್ಧನೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ, ಇಂತಹ ಕಾರ್ಯಕ್ರಮಗಳ ಆಯೋಜನೆಯ ಮೂಲಕ ಹೊಸ ಪ್ರತಿಭೆಗಳಿಗೆ ಅವಕಾಶವನ್ನು ನೀಡುವ ವೇದಿಕೆಯಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ. ನಾಗರಾಜ, ಜಿಲ್ಲಾ ಪರಿಶಿಷ್ಟ ವರ್ಗಗಳ ಅಧಿಕಾರಿ ಶಾಶು, ಜಿಲ್ಲಾ ಬಲಿಜ ಸಂಘದ ಅಧ್ಯಕ್ಷ ರಮೇಶ ಬುಜ್ಜಿ, ಮಹಾನಗರ ಪಾಲಿಕೆ ಸದಸ್ಯ ಹನುಮಂತಪ್ಪ, ಶ್ರೀ ಮಠಂ ತಿಪ್ಪೇಸ್ವಾಮಿ ಸೇರಿದಂತೆ ಕಂದಾಯ ಇಲಾಖೆಯ ಅಧಿಕಾರಿಗಳು, ಸಾಹಿತಿಗಳು ಮತ್ತು ಕನ್ನಡ ಅಭಿಮಾನಿಗಳು ಭಾಗವಹಿಸಿದ್ದರು.

ಕಾರ್ಯಕ್ರಮವನ್ನು ಡಾ. ತಿಪ್ಪೇರುದ್ರ ಸಂಡೂರು ನಿರೂಪಿಸಿದರು. ನಯನ ಪ್ರಾರ್ಥಿಸಿದರು, ರೇಣುಕಾ ಎಸ್. ಸ್ವಾಗತಿಸಿದರು.

ಶೈಕ್ಷಣಿಕವಾಗಿ, ಆರ್ಥಿಕವಾಗಿ ಸಬಲರಾದಾಗ ಮಾತ್ರ ಆದಿವಾಸಿಗಳ ಸಮಗ್ರ ಅಭಿವೃದ್ಧಿ ಸಾಧ್ಯ : ಮಾಣಿಕ್ ನೇಳಗಿ



ಬೀದರ್,ಆ.10-

ಬುಡಕಟ್ಟು ಸಮುದಾಯಗಳು ಶೈಕ್ಷಣಿಕ ಹಾಗೂ ಆರ್ಥಿಕವಾಗಿ ಸಬಲರಾದಾಗ ಮಾತ್ರ ಆದಿವಾಸಿಗಳ ಸಮಗ್ರ ಅಭಿವೃದ್ಧಿ ಸಾಧ್ಯ. ಹೀಗಾಗಿ ಸಮುದಾಯದ ಯುವಜನರು ಉನ್ನತ ಶಿಕ್ಷಣ ಪಡೆಯುವತ್ತ ಹೆಚ್ಚಿನ ಗಮನಹರಿಸಬೇಕು ಎಂದು ಹಿರಿಯ ಸಾಹಿತಿ ಮಾಣಿಕ್ ನೇಳಗಿ ಅವರು ಅಭಿಪ್ರಾಯಪಟ್ಟರು.

ನಗರದ ಬೋಮಗೊಂಡೇಶ್ವರ್ ವೃತ್ತದಲ್ಲಿ ರವಿವಾರ ಆಯೋಜಿಸಿದ್ದ ವಿಶ್ವ ಆದಿವಾಸಿ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಬೀದರ್ ಜಿಲ್ಲೆಯ ಬಹುತೇಕ ಗ್ರಾಮಗಳಲ್ಲಿ ಬುಡಕಟ್ಟು ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುತ್ತಿದ್ದು, ಅವರ ಸರ್ವತೋಮುಖ ಅಭಿವೃದ್ಧಿಗೆ ಸರ್ಕಾರ ಹಾಗೂ ಸಮಾಜ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಅವರು ಆಗ್ರಹಿಸಿದರು.


ಜಿಲ್ಲಾ ಆದಿವಾಸಿ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ವಿಜಯಕುಮಾರ್ ಡುಮ್ಮೆ ಅವರು ಮಾತನಾಡಿ, ದಕ್ಷಿಣ ಭಾರತದ ಟ್ರೈಬಲ್ ಐಕಾನ್ ಮಹಾತ್ಮ ಬೊಮ್ಮಗೊಂಡರು ಬೀದರ್ ಜಿಲ್ಲೆಯ ನೆಲದಲ್ಲಿ ಜನಿಸಿರುವುದು ಹೆಮ್ಮೆಯ ಸಂಗತಿಯಾಗಿದೆ. ಅವರ ಜನ್ಮಸ್ಥಳ ಚಿದ್ರಿಯಲ್ಲಿರುವುದರಿಂದ ಇಲ್ಲಿನ ವಿಮಾನ ನಿಲ್ದಾಣಕ್ಕೆ ಬೊಮ್ಮಗೊಂಡರ ಹೆಸರಿಡಬೇಕು. ಬೀದರ್ ಕೋಟೆಯಲ್ಲಿರುವ ಅವರ ಸಮಾಧಿ ಸ್ಥಳವನ್ನು ಅಭಿವೃದ್ಧಿಪಡಿಸುವುದರ ಜೊತೆಗೆ ಅವರ ಹೆಸರಿನ ಕೆರೆಯನ್ನೂ ಅಭಿವೃದ್ಧಿಪಡಿಸಬೇಕು ಎಂದು ಒತ್ತಾಯಿಸಿದರು.

ಗೊಂಡ, ಕೋಲ್, ಮುಂಡಾ, ಭಿಲ್, ಸಂತಾಲ್ ಸೇರಿದಂತೆ ದೇಶದ ವಿವಿಧ ಬುಡಕಟ್ಟು ಸಮುದಾಯಗಳ ಇತಿಹಾಸವನ್ನು ಸ್ಮರಿಸದೆ ಭಾರತದ ಆದಿವಾಸಿ ಇತಿಹಾಸ ಪೂರ್ಣವಾಗುವುದಿಲ್ಲ ಎಂದು ಅವರು ಪ್ರತಿಪಾದಿಸಿದರು.

ಜಿಲ್ಲೆಯಲ್ಲಿರುವ ಆದಿವಾಸಿ ಹಾಗೂ ಬುಡಕಟ್ಟು ಸಮುದಾಯಗಳ ಇತಿಹಾಸ, ಸಂಸ್ಕೃತಿ ಮತ್ತು ಪರಂಪರೆಯನ್ನು ಪರಿಚಯಿಸುವ ಟ್ರೈಬಲ್ ಮ್ಯೂಸಿಯಂ ಅನ್ನು ಬೀದರ್ ನಲ್ಲಿ ನಿರ್ಮಿಸಬೇಕು ಎಂದು ಬೀದರ್ ಜಿಲ್ಲಾ ಆದಿವಾಸಿ ರಕ್ಷಣಾ ಪರಿಷತ್ತು ಹಾಗೂ ಜಿಲ್ಲಾ ಆದಿವಾಸಿ ಸಾಹಿತ್ಯ ಪರಿಷತ್ತಿನಿಂದ ಈ ವೇಳೆ ಆಗ್ರಹಿಸಲಾಯಿತು.

ಈ ಸಂದರ್ಭದಲ್ಲಿ ಗೊಂಡ ಪರ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ತುಕಾರಾಮ್ ಚಿಮಕೋಡ್, ಜಿಲ್ಲಾ ಟೋಕರೆ ಕೋಳಿ ಸಮಾಜದ ಉಪಾಧ್ಯಕ್ಷ ಸುನೀಲ್ ಕಾಶಂಪೂರ್, ರವಿ ಫೋಣೆ, ಪ್ರಭು ಮೇತ್ರೆ, ಸಂಗೊಳ್ಳಿ ರಾಯಣ್ಣ ಯುವ ಗರ್ಜನೆಯ ಪ್ರಧಾನ ಕಾರ್ಯದರ್ಶಿ ಕುಮಾರ್ ಹಜ್ಜರಗಿ, ಆದಿವಾಸಿ ಸಮುದಾಯದ ಮುಖಂಡರಾದ ರಮೇಶ್ ಬಾಲೆಬಾಯಿ, ವಿವೇಕ್ ರಾಜಗೊಂಡ್ ಹಾಗೂ ಮಹೇಶ್ ಮೇದಾ ಸೇರಿದಂತೆ ಹಲವರು ಭಾಗವಹಿಸಿದ್ದರು.

2 ಕೋಟಿ ವೆಚ್ಚದ ಶಾದಿ ಮಹಲ್‌ಗೆ ಶಾಸಕ ಅಲ್ಲಂಪ್ರಭು ಪಾಟೀಲ್ ಅಡಿಗಲ್ಲು



ಕಲಬುರಗಿ,ಆ.10-

ನಗರದ ಹೊರವಲಯದಲ್ಲಿರುವ ಹಜರತ್ ಸೈಯ್ಯದ್ ರುಕ್ಮುದ್ದೀನ್ ತೋಲಾ ದರ್ಗಾ ಬಳಿ ಶಾದಿ ಮಹಲ್ ನಿರ್ಮಾಣಕ್ಕಾಗಿ 2 ಕೋಟಿ ವೆಚ್ಚದ ಯೋಜನೆಗೆ ಕಲಬುರಗಿ ದಕ್ಷಿಣ ಕ್ಷೇತ್ರದ ಶಾಸಕ ಅಲ್ಲಂಪ್ರಭು ಪಾಟೀಲ್ ರವಿವಾರ ಅಡಿಗಲ್ಲು ನೆರವೇರಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಶಾಸಕ ಅಲ್ಲಂಪ್ರಭು ಪಾಟೀಲ್, ಅಲ್ಪಸಂಖ್ಯಾತರ ಕಲ್ಯಾಣಕ್ಕೆ ಕಾಂಗ್ರೆಸ್ ಸರ್ಕಾರ ಬದ್ಧವಾಗಿದ್ದು, ಎಲ್ಲ ವರ್ಗದ ಜನರಿಗೆ ಅಗತ್ಯ ಮೂಲಸೌಕರ್ಯ ಒದಗಿಸುವುದು ಸರ್ಕಾರದ ಸಂಕಲ್ಪವಾಗಿದೆ. 2025-26ನೇ ಸಾಲಿನ ಅಭಿವೃದ್ಧಿ ಕಾಮಗಾರಿಗಳಡಿ ಶಾದಿ ಮಹಲ್ ನಿರ್ಮಾಣ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ ಎಂದರು.

ರುಕ್ಮುದ್ದೀನ್ ತೋಲಾ ಹಿಂದು ಮುಸ್ಲಿಂ ಸಾಮರಸ್ಯದ ಪ್ರತೀಕವಾಗಿದೆ. ಇಲ್ಲಿ ಎರಡೂ ಸಮುದಾಯಗಳ ಭಕ್ತರು ಭೇಟಿ ನೀಡಿ ಪೂಜೆ ಹಾಗೂ ಸೇವೆ ಸಲ್ಲಿಸುತ್ತಾರೆ. ವಿಶೇಷವಾಗಿ ಹಿಂದೂ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿ ದರ್ಗಾಕ್ಕೆ ಆಗಮಿಸಿ ಸೇವೆ ಸಲ್ಲಿಸುತ್ತಿರುವುದು ಈ ಕ್ಷೇತ್ರದ ಧಾರ್ಮಿಕ ಸೌಹಾರ್ದತೆಗೆ ಸಾಕ್ಷಿಯಾಗಿದೆ ಎಂದು ಹೇಳಿದರು.

ಚುನಾವಣೆಯ ಸಂದರ್ಭದಲ್ಲಿ ರುಕ್ಮುದ್ದೀನ್ ತೋಲಾ ಬಳಿ ಶಾದಿ ಮಹಲ್ ನಿರ್ಮಿಸುವ ಭರವಸೆ ನೀಡಿದ್ದೆ. ಇದೀಗ ನೀಡಿದ ಮಾತಿನಂತೆ ಕಾಮಗಾರಿಗೆ ಚಾಲನೆ ನೀಡಲಾಗಿದೆ. ಮಾಜಿ ಮುಖ್ಯಮಂತ್ರಿ ಧರಂಸಿಂಗ್ ಅವರೊಂದಿಗೆ ಇಲ್ಲಿಗೆ ಆಗಮಿಸಿ ಸೇವೆ ಸಲ್ಲಿಸಿದ ದಿನಗಳನ್ನು ಸ್ಮರಿಸಿದ ಅವರು, ರುಕ್ಮುದ್ದೀನ್ ತೋಲಾ ಅಭಿವೃದ್ಧಿಗೆ ಮುಂದಿನ ದಿನಗಳಲ್ಲಿಯೂ ಹೆಚ್ಚಿನ ಅನುದಾನ ಒದಗಿಸಲು ಬದ್ಧನಾಗಿದ್ದೇನೆ ಎಂದು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ರಾಣೇಶಪೀರ್ ದರ್ಗಾದ ಅನ್ವರ್ ಹುಸೇನ್ ಸಾಬ್, ಎಂಎಲ್‌ಸಿ ತಿಪ್ಪಣ್ಣ ಕಮಕನೂರ್ ಮುಖಂಡರಾದ ಇಳಿಯಾಸ್ ಸೇಠ್ ಭಾಗವಾನ್, ಪಾಲಿಕೆ ಸದಸ್ಯ ಅಲಂ ಪಟೇಲ್, ಸಂತೋಷ ಪಾಟೀಲ್ ದಣ್ಣೂರ, ಲಿಂಗರಾಜ, ಇರಫಾನ್ ಪಟೇಲ್, ಚಂದ್ರುಗೌಡ, ರವಿ ಪಾಟೀಲ್, ಎಪಿಎಂಸಿ ಸದಸ್ಯ ವೀರಣ್ಣ ಭಂಗೂರ್ ಲಾಡ್ಲೇಸಾಬ್, ಗಂಗಾಧರ, ಅಜೀಜ್ ಮಿಯಾ, ರಫೀಕ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಒಂದನೇಯ ಪುಟದಿಂದ

ವೇತನ ಜಾರಿಗೆ ಆಗ್ರಹಿಸಿ ಬೃಹತ್ ಪ್ರತಿಭಟನೆ

ಹಾಗೂ ಸುಪ್ರೀಂ ಕೋರ್ಟ್ ತೀರ್ಪಿನ ಆಧಾರದ ಮೇಲೆ ರಾಜ್ಯ ಸರ್ಕಾರ ಕನಿಷ್ಠ ವೇತನ ಪರಿಷ್ಕರಿಸಿ ಅಂತಿಮ ಅಧಿಸೂಚನೆ ಹೊರಡಿಸಿದೆ. ಆದರೆ ಎರಡು ತಿಂಗಳು ಕಳೆದರೂ ಪರಿಷ್ಕೃತ ವೇತನವನ್ನು ಜಾರಿಗೊಳಿಸಿಲ್ಲ. ಇದರಿಂದ ರಾಜ್ಯದ ಲಕ್ಷಾಂತರ ಕಾರ್ಮಿಕರು ಸಂಕಷ್ಟಕ್ಕೆ ಸಿಲುಕಿದ್ದಾರೆ ಎಂದು ಆರೋಪಿಸಿದರು.

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ರೈತ, ಕಾರ್ಮಿಕ, ದಲಿತ, ಮಹಿಳೆ, ವಿದ್ಯಾರ್ಥಿ ಮತ್ತು ಯುವಜನ ವಿರೋಧಿ ನೀತಿಗಳನ್ನು ಜಾರಿಗೊಳಿಸುತ್ತಿವೆ. ಭೂಸ್ವಾಧೀನ, ಖಾಸಗೀಕರಣ, ಬೆಲೆ ಏರಿಕೆ, ನಿರುದ್ಯೋಗ ಹಾಗೂ ಗುತ್ತಿಗೆ ಪದ್ಧತಿಯಿಂದ ದುಡಿಯುವ ವರ್ಗದ ಬದುಕು ಮತ್ತಷ್ಟು ಸಂಕಷ್ಟಕ್ಕೀಡಾಗಿದೆ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

ಕಾರ್ಮಿಕ ಸಂಹಿತೆಗಳನ್ನು ಹಿಂಪಡೆಯಬೇಕು, ಕರ್ನಾಟಕದಲ್ಲಿ ಅಧಿಸೂಚಿತ ಕನಿಷ್ಠ ವೇತನವನ್ನು ಜಾರಿಗೊಳಿಸಬೇಕು, ಖಾಯಂಮೇತರ ಹಾಗೂ ಗುತ್ತಿಗೆ ಕಾರ್ಮಿಕರ ಸೇವೆ ಖಾಯಂಗೊಳಿಸಬೇಕು, ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು. ಅಂಗನವಾಡಿ, ಬಿಸಿಯೂಟ ಹಾಗೂ ಆಶಾ ಕಾರ್ಯಕರ್ತೆಯರಿಗೆ ಕನಿಷ್ಠ ವೇತನ ಮತ್ತು ಪಿಂಚಣಿ ನೀಡಬೇಕು. ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಹಾಗೂ ಪಿಂಚಣಿ ಯೋಜನೆ ಜಾರಿಗೊಳಿಸಬೇಕು ಎಂದು ಆಗ್ರಹಿಸಿದರು.

ರೈತರ ಬಲವಂತದ ಭೂಸ್ವಾಧೀನ ಮತ್ತು ಕಾರ್ಪೊರೇಟ್ ಭೂ ಕಬಳಿಕೆ ತಡೆಯಬೇಕು. ಬಗರ್ ಹುಕುಂ ಸಾಗುವಳಿದಾರರಿಗೆ ಹಕ್ಕುಪತ್ರ ನೀಡಬೇಕು. ರೈತರು ಬೆಳೆದ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ ನೀಡಲು ಶಾಶ್ವತ ಕಾನೂನು ರೂಪಿಸಬೇಕು. ರೈತರು, ಕೃಷಿ ಕೂಲಿಕಾರರು ಹಾಗೂ ಮಹಿಳೆಯರ ಸಾಲ ಮನ್ನಾ ಮಾಡಬೇಕು ಎಂದು ಒತ್ತಾಯಿಸಿದರು.

ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ, ವಿದ್ಯುತ್, ದಿನಸಿ ಹಾಗೂ ಸಾರಿಗೆ ದರಗಳ ನಿರಂತರ ಏರಿಕೆಗೆ ಕಡಿವಾಣ ಹಾಕಬೇಕು. ಸಾರ್ವಜನಿಕ ಉದ್ದಿಮೆಗಳನ್ನು ಖಾಸಗೀಕರಣ ಮಾಡುವುದನ್ನು ನಿಲ್ಲಿಸಿ, ಖಾಯಂ ಉದ್ಯೋಗ ಹಾಗೂ ಹೊಸ ಉದ್ಯೋಗಗಳನ್ನು ಸೃಷ್ಟಿಸಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಜಿಲ್ಲೆಯ ಬೇಡಿಕೆಗಳಿಗೂ ಒತ್ತು

ರಾಯಚೂರು ಜಿಲ್ಲೆಯನ್ನು ಬರಪೀಡಿತ ಜಿಲ್ಲೆ ಎಂದು ಘೋಷಿಸಬೇಕು. ಫಸಲ್ ಭೀಮಾ ಯೋಜನೆಯಡಿ ರೈತರು ಪಾವತಿಸುವ ಪ್ರೀಮಿಯಂ ಮೊತ್ತ ಕಡಿಮೆ ಮಾಡಬೇಕು. ಎಸ್‌ಸಿಎಸ್‌ಟಿ ನಿಗಮಗಳಿಂದ ರೈತರ ಭೂಮಿ ಖರೀದಿಸುವ ಕುರಿತು ಸಭೆ ನಡೆಸಬೇಕು. ರಾಯಚೂರಿನಲ್ಲಿ ಏಮ್ಸ್ ಪ್ರಾರಂಭಿಸಬೇಕು. ಎಲ್ಲ ತಾಲೂಕುಗಳಲ್ಲಿ ಭೂ ಮಂಜೂರಾತಿ ಸಮಿತಿಗಳನ್ನು ರಚಿಸಬೇಕು ಹಾಗೂ ಡಿ.ರಾಂಪುರದಲ್ಲಿ ಕೃಷ್ಣಾ ನದಿಗೆ ತಡೆಗೋಡೆ ನಿರ್ಮಿಸಬೇಕು ಎಂದು ಸ್ಥಳೀಯ ಬೇಡಿಕೆಗಳನ್ನು ಮುಂದಿಟ್ಟರು.

ಪ್ರತಿಭಟನೆಯಲ್ಲಿ ಕರಿಯಪ್ಪ ಅಟ್ಟೋಳಿ, ಬಸಲಿಂಗಪ್ಪ ನಗನೂರು, ಹೆಚ್.ಪದ್ಮಾ, ಶ್ರೀನಿವಾಸ ಕಲವಲದೊಡ್ಡಿ, ನರಸಣ್ಣ ನಾಯಕ, ಸಾಜೀದ್ ಹುಸೇನ್, ಅಂಜಿನಯ್ಯ ಕುರುಬದೊಡ್ಡಿ, ಮಹೇಶ್ ಚೀಕಲಪರ್ವಿ, ಮುದ್ದಕಂಪ್ಪ ನಾಯಕ, ಸಂಗಯ್ಯ ಸ್ವಾಮಿ, ಮಲ್ಲನಗೌಡ, ಬಸಂತರಾಯ ಗೌಡ, ರಂಗನಾಥ, ವರಲಕ್ಷ್ಮೀ, ಎಸ್.ಮಾರೆಪ್ಪ, ಖಾಜಾ ಅಸ್ಲಂ ಸೇರಿದಂತೆ ವಿವಿಧ ಕಾರ್ಮಿಕ, ರೈತ ಹಾಗೂ ಜನಪರ ಸಂಘಟನೆಗಳ ಮುಖಂಡರು ಹಾಗೂ ಕಾರ್ಯಕರ್ತರು ಪಾಲ್ಗೊಂಡಿದ್ದರು.

ಹಂಪನಗೌಡ ಬಾದರ್ಲಿಗೆ ಸಚಿವ ಸ್ಥಾನಕ್ಕೆ ಆಗ್ರಹಿಸಿ ರಾಯಚೂರಿನಲ್ಲಿ ಬೃಹತ್ ಪ್ರತಿಭಟನೆ

ಕಾಂಗ್ರೆಸ್ ಸರ್ಕಾರ ಈ ಬಗ್ಗೆ ಕೂಡಲೇ ಗಮನ ಹರಿಸಬೇಕು ಎಂದು ಒತ್ತಾಯಿಸಿದರು.

ಭೂಪಾಲ್ ಗೌಡ ಕರಡಕಲ್ ಮಾತನಾಡಿ, ರಾಯಚೂರು ಜಿಲ್ಲೆಯ ವೀರಶೈವ ಸಮಾಜವನ್ನು ಕಾಂಗ್ರೆಸ್ ಸರ್ಕಾರ ಹಿಂದಿನಿಂದಲೂ ಕಡೆಗಣಿಸುತ್ತಿದೆ. ಹಲವು ವರ್ಷಗಳಿಂದ ಸಮಾಜದ ಕಾಂಗ್ರೆಸ್ ಶಾಸಕರಿಗೆ ಸಚಿವ ಸ್ಥಾನ ನೀಡದೆ ಅನ್ಯಾಯ ಮಾಡಲಾಗಿದೆ. ಇನ್ನು ಮುಂದೆ ಇದನ್ನು ಸಹಿಸುವುದಿಲ್ಲ ಎಂದು ಎಚ್ಚರಿಸಿದರು.

ವೀರಶೈವ ಸಮಾಜದ ಜಿಲ್ಲಾ ಅಧ್ಯಕ್ಷ ಶರಣ ಭೂಪಾಲ್ ನಾಡಗೌಡ ಮಾತನಾಡಿ, ಹಂಪನಗೌಡ ಬಾದರ್ಲಿ ಅವರು ಪಕ್ಷದ ಮೇಲೆ ಸಂಪೂರ್ಣ ವಿಶ್ವಾಸವಿಟ್ಟಿದ್ದರೂ ಅವರಿಗೆ ಸಚಿವ ಸ್ಥಾನ ನೀಡದಿರುವುದು ಅನ್ಯಾಯವಾಗಿದೆ. ಇದು ಒಬ್ಬ ವ್ಯಕ್ತಿಗೆ ಮಾತ್ರವಲ್ಲ, ಇಡೀ ರಾಯಚೂರು ಜಿಲ್ಲೆ ಹಾಗೂ ವೀರಶೈವ ಲಿಂಗಾಯತ ಸಮಾಜಕ್ಕೆ ಮಾಡಿದ ಅನ್ಯಾಯವಾಗಿದೆ ಎಂದು ಆರೋಪಿಸಿದರು.

ಪರಮಪೂಜ್ಯ ಮಹಾಂತಲಿಂಗ ಶಿವಾಚಾರ್ಯರು ಮಾತನಾಡಿ, ಜಿಲ್ಲೆಯ ಹಿರಿಯ ಶಾಸಕ ಹಂಪನಗೌಡ ಬಾದರ್ಲಿ ಅವರಿಗೆ ಸಚಿವ ಸ್ಥಾನ ನೀಡುವುದರಿಂದ ಸಾಮಾಜಿಕ ನ್ಯಾಯ ಒದಗಿಸಿದಂತಾಗುತ್ತದೆ. ಸಚಿವ ಸ್ಥಾನ ನೀಡದಿದ್ದರೆ ರಾಯಚೂರು ಜಿಲ್ಲೆಗೆ ಕಾಂಗ್ರೆಸ್ ಸರ್ಕಾರ ಅನ್ಯಾಯ ಮಾಡಿದಂತಾಗುತ್ತದೆ ಎಂದು ಹೇಳಿದರು.

ಪ್ರತಿಭಟನೆಯಲ್ಲಿ ವೀರಶೈವ ಲಿಂಗಾಯತ ಸಮಾಜದ ಮುಖಂಡರು, ವಿವಿಧ ಸಂಘಟನೆಗಳ ಪದಾಧಿಕಾರಿಗಳು ಹಾಗೂ ಸಹಸ್ರಾರು ಸಂಖ್ಯೆಯ ಜನರು ಭಾಗವಹಿಸಿದ್ದರು.

ಅರಣ್ಯ ಜಾಗಕ್ಕೆ ವಸತಿ ವಿನ್ಯಾಸದ ಮುದ್ರೆ!

ಉಲ್ಲೇಖಿಸಿ, ಒತ್ತುವರಿಯಾಗಿದ್ದರೆ ಹಿಂಪಡೆಯುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ/ವರದಿ ಮಾಡಿರುವುದು ಕಂಡುಬರುತ್ತದೆ.

ಇದಲ್ಲದೆ, ಜಾಗದ ಸ್ಥಿತಿಗತಿ ಕುರಿತು ಸ್ಯಾಟಲೈಟ್ ಸರ್ವೆ ಮೂಲಕ ಪರಿಶೀಲನೆ ನಡೆಸಿರುವ ಉಲ್ಲೇಖವೂ ದಾಖಲೆಗಳಲ್ಲಿ ಇದೆ. ಹೀಗಾಗಿ ಈ ಪ್ರಕರಣ ಕೇವಲ ಬಾಯಿಮಾತಿನ ಆರೋಪವಾಗಿರದೆ, ಹಲವು ವರ್ಷಗಳ ಹಿಂದೆಯೇ ಸರ್ಕಾರಿ ಮಟ್ಟದಲ್ಲಿ ಚರ್ಚೆಗೆ ಬಂದಿರುವ ವಿಷಯ ಎಂಬುದು ದಾಖಲೆಗಳಿಂದ ಸ್ಪಷ್ಟವಾಗುತ್ತದೆ.

ನಿರ್ಣಯದ ಬಳಿಕವೂ ನಿರ್ಮಾಣ ಕಾಮಗಾರಿ?

ಅರಣ್ಯ ಇಲಾಖೆಯ ಜಾಗದ ಒತ್ತುವರಿ ಕುರಿತು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಚರ್ಚೆ ನಡೆದು, ವಿವಾದಿತ 3 ಎಕರೆ 29 ಗುಂಟೆ ಪ್ರದೇಶವನ್ನು ವಸತಿ ಪ್ರದೇಶವಾಗಿ ಪರಿಗಣಿಸಬಾರದು ಹಾಗೂ ಒತ್ತುವರಿ ಜಾಗವನ್ನು ತೆರವುಗೊಳಿಸುವ ಕುರಿತು ನಿರ್ಣಯ/ವರದಿ ಮಾಡಲಾಗಿದೆ ಎಂದು ದಾಖಲೆಗಳು ಸೂಚಿಸುತ್ತವೆ.

ಆದರೆ, ವಿವಾದ ಇತ್ಯರ್ಥವಾಗುವ ಮುನ್ನವೇ ಈ ಪ್ರದೇಶದಲ್ಲಿ ನಿವೇಶನಗಳ ಖರೀದಿ, ಮನೆಗಳ ನಿರ್ಮಾಣ ಹಾಗೂ ಇತರೆ ಕಟ್ಟಡ ಚಟುವಟಿಕೆಗಳು ಮುಂದುವರಿದಿರುವ ಆರೋಪ ಕೇಳಿಬರುತ್ತಿದೆ.

ಅನುಷಾ ನಗರದಲ್ಲಿ ಪೂರ್ಣಿಮಾ ಶಾಲೆ, ವೇದಾಂತ ಮಹಾವಿದ್ಯಾಲಯ ಸೇರಿದಂತೆ ಹಲವು ಕಟ್ಟಡಗಳು ನಿರ್ಮಾಣಗೊಂಡಿರುವ ಹಿನ್ನೆಲೆಯಲ್ಲಿ, ಇವು ನಿರ್ಮಾಣಗೊಂಡಿರುವ ಜಾಗಗಳ ಮೂಲ ದಾಖಲೆಗಳು, ಅನುಮೋದನೆಗಳು ಮತ್ತು ಭೂಮಿಯ ಮಾಲೀಕತ್ವವನ್ನು ಸಂಬಂಧಪಟ್ಟ ಇಲಾಖೆ ಪರಿಶೀಲಿಸಬೇಕಾಗಿದೆ.

ನೋಂದಣಿ, ಕಟ್ಟಡ ಅನುಮತಿ, ಬ್ಯಾಂಕ್ ಸಾಲದ ಮೇಲೂ ಅನುಮಾನ

ಅರಣ್ಯ ಜಾಗದ ಮಾಲೀಕತ್ವದ ವಿವಾದ ಬಗೆಹರಿಯದಿರುವಾಗಲೇ ಕೆಲವು ನಿವೇಶನಗಳ ಖರೀದಿಮಾರಾಟ, ನೋಂದಣಿ, ಕಟ್ಟಡ ನಿರ್ಮಾಣ ಹಾಗೂ ಬ್ಯಾಂಕ್ ಸಾಲ ಪಡೆಯುವ ಪ್ರಕ್ರಿಯೆಗಳು ನಡೆದಿವೆ ಎಂಬ ಆರೋಪಗಳಿವೆ. ವಿವಾದಿತ ಜಾಗಕ್ಕೆ ಸಂಬಂಧಿಸಿದ ದಾಖಲೆಗಳನ್ನು ಆಧರಿಸಿ ನೋಂದಣಿ ಮಾಡಲಾಗಿದೆಯೇ? ಕಟ್ಟಡ ನಿರ್ಮಾಣಕ್ಕೆ ಅನುಮತಿ ನೀಡಲಾಗಿದೆಯೇ? ಬ್ಯಾಂಕ್‌ಗಳಿಗೆ ಯಾವ ದಾಖಲೆಗಳನ್ನು ಸಲ್ಲಿಸಿ ಸಾಲ ಪಡೆಯಲಾಗಿದೆ? ಎಂಬುದನ್ನು ತನಿಖೆ ಮೂಲಕ ಬಹಿರಂಗಪಡಿಸಬೇಕಾಗಿದೆ. ಇದರಲ್ಲಿ ಉಪನೋಂದಣಾಧಿಕಾರಿ ಕಚೇರಿ, ಮಹಾನಗರ ಪಾಲಿಕೆ ಹಾಗೂ ಅರಣ್ಯ ಇಲಾಖೆಯ ಅಧಿಕಾರಿಗಳ ಪಾತ್ರವಿದ್ದರೆ, ಅದನ್ನೂ ತನಿಖೆಗೊಳಪಡಿಸಬೇಕು ಎಂಬ ಆಗ್ರಹ ಸಾರ್ವಜನಿಕರಿಂದ ಕೇಳಿಬಂದಿದೆ.

ಲೋಕಾಯುಕ್ತ ತನಿಖೆಯೂ ನಡೆದಿತ್ತು ಈ ಜಾಗದ ಒತ್ತುವರಿ ಹಾಗೂ ಅಕ್ರಮಕ್ಕೆ ಸಂಬಂಧಿಸಿದಂತೆ ಲೋಕಾಯುಕ್ತ ಮಟ್ಟದಲ್ಲಿಯೂ ತನಿಖೆ ನಡೆದಿರುವುದಾಗಿ ತಿಳಿದುಬಂದಿದೆ. ಹೀಗಿದ್ದರೂ ವಿವಾದಿತ ಜಾಗದಲ್ಲಿ ಕಟ್ಟಡ ನಿರ್ಮಾಣ ಹಾಗೂ ನಿವೇಶನ ವಹಿವಾಟು ಮುಂದುವರಿದಿದ್ದರೆ, ಸಂಬಂಧಪಟ್ಟ ಅಧಿಕಾರಿಗಳು ಇದನ್ನು ಏಕೆ ತಡೆಯಲಿಲ್ಲ ಎಂಬ ಪ್ರಶ್ನೆ ಎದುರಾಗಿದೆ.

ಆಯುಕ್ತರು ದಾಖಲೆಗಳ ಸಮಗ್ರ ಪರಿಶೀಲನೆಗೆ ಮುಂದಾಗಲಿ ಮಹಾನಗರ ಪಾಲಿಕೆ ಆಯುಕ್ತರು ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ, ಸರ್ವೆ ನಂ.1139, 1140 ಮತ್ತು 1164ರ ಮೂಲ ಪಹಣಿ, ಬಿನ್‌ಶೇತ್ಕಿ ಆದೇಶ, ವಸತಿ ವಿನ್ಯಾಸದ ಮೂಲ ನಕ್ಷೆ, ಅನುಮೋದಿತ ವಿಸ್ತೀರ್ಣ, ಅರಣ್ಯ ಇಲಾಖೆಯ ದಾಖಲೆ, ಸ್ಯಾಟಲೈಟ್ ಸರ್ವೆ ವರದಿ, ನಿವೇಶನ ನೋಂದಣಿ ಹಾಗೂ ಕಟ್ಟಡ ಪರವಾನಗಿ ದಾಖಲೆಗಳನ್ನು ಸಮಗ್ರವಾಗಿ ಪರಿಶೀಲಿಸಬೇಕು ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ. ವಿಶೇಷವಾಗಿ 33 ಎಕರೆ 38 ಗುಂಟೆ ಜಾಗಕ್ಕೆ ಅನುಮೋದನೆ ಇದ್ದರೆ, ಹೆಚ್ಚುವರಿಯಾಗಿ 3 ಎಕರೆ 29 ಗುಂಟೆ ಹೇಗೆ ಸೇರಿ 37 ಎಕರೆ 27 ಗುಂಟೆಯಾಯಿತು? ಎಂಬ ಪ್ರಶ್ನೆಗೆ ಸಂಬಂಧಪಟ್ಟ ಇಲಾಖೆಗಳು ಸ್ಪಷ್ಟ ಉತ್ತರ ನೀಡಬೇಕಾಗಿದೆ. 3 ಎಕರೆ 29 ಗುಂಟೆ ಅರಣ್ಯ ಇಲಾಖೆಯ ಜಾಗವೇ ಎಂಬುದು ದಾಖಲೆಗಳ ಪರಿಶೀಲನೆಯಲ್ಲಿ ದೃಢಪಟ್ಟರೆ, ಯಾವುದೇ ಪ್ರಭಾವಕ್ಕೆ ಮಣಿಯದೆ ಅದನ್ನು ಕೂಡಲೇ ಸರ್ಕಾರದ ವಶಕ್ಕೆ ಪಡೆಯಬೇಕು. ಒತ್ತುವರಿಗೆ ಸಹಕರಿಸಿದವರು, ಅಕ್ರಮ ದಾಖಲೆ ಅಥವಾ ಅನುಮೋದನೆ ನೀಡಿದವರು ಹಾಗೂ ನಿಯಮ ಉಲ್ಲಂಘಿಸಿ ಕಟ್ಟಡ ನಿರ್ಮಾಣಕ್ಕೆ ಅವಕಾಶ ನೀಡಿದವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ಕಾಮನ್‌ವೆಲ್ತ್ ಪದಕ ವಿಜೇತರೊಂದಿಗೆ ಪ್ರಧಾನಿ ಮೋದಿ ಸಂವಾದ

ಒಂದು ಹಾಸ್ಯಭರಿತ ಘಟನೆಯನ್ನು ಮೋದಿ ಅವರೊಂದಿಗೆ ಹಂಚಿಕೊಂಡರು.

ಕ್ರೀಡಾಪಟುಗಳ ಸಾಧನೆಯನ್ನು ಕೇವಲ ಪದಕಗಳ ಗೆಲುವಾಗಿ ನೋಡದೆ ದೇಶದ ಯುವಜನತೆಗೆ ಸ್ಫೂರ್ತಿ ನೀಡುವ ಶಕ್ತಿಯಾಗಿದೆ. ಭಾರತಕ್ಕಾಗಿ ಪದಕ ಗೆಲ್ಲುವ ನಿಮ ಪ್ರಯತ್ನಗಳು ಮತ್ತು ಹೊಸ ಎತ್ತರ ತಲುಪುವ ನಿಮ ಸಂಪ್ರದಾಯವೇ ಇದಕ್ಕೆ ಕಾರಣ ಎಂದು ಪ್ರಧಾನಿ ಹೇಳಿದರು.

ಗ್ಲಾಸ್ಗೋ 2026ರಲ್ಲಿ 13 ಚಿನ್ನ ಸೇರಿದಂತೆ 39 ಪದಕಗಳನ್ನು ಗೆದ್ದು ನಾಲ್ಕನೇ ಸ್ಥಾನ ಪಡೆದಿರುವ ಭಾರತಕ್ಕೆ, ಪ್ರಧಾನಿಯವರ ಈ ಸಂವಾದ ಕ್ರೀಡಾಪಟುಗಳ ಸಾಧನೆಗೆ ರಾಷ್ಟ್ರೀಯ ಮಟ್ಟದಲ್ಲಿ ನೀಡಲಾಗುತ್ತಿರುವ ಮಹತ್ವದ ಮತ್ತೊಂದು ಸಂಕೇತವಾಗಿದೆ.

ಸ್ಪರ್ಧಾತ್ಮಕ ಪರೀಕ್ಷೆಗೆ ಉತ್ತಮ ಸ್ಪಂದನೆ ಯುವಕರು ಪುಸ್ತಕ ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು: ಎಂ.ವೈ. ಪಾಟೀಲ್



ಅಫಜಲಪುರ,ಆ.10-

ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಯುವ ವಿಕಾಸ ವೇದಿಕೆ ವತಿಯಿಂದ ರವಿವಾರ ರಾಜ್ಯಮಟ್ಟದ ಮುಕ್ತ ಸ್ಪರ್ಧಾತ್ಮಕ ಪರೀಕ್ಷೆ ಯಶಸ್ವಿಯಾಗಿ ನಡೆಯಿತು. ವಿವಿಧ ಜಿಲ್ಲೆಗಳಿಂದ ಆಗಮಿಸಿದ್ದ ಸ್ಪರ್ಧಾರ್ಥಿಗಳು ಪರೀಕ್ಷೆಯಲ್ಲಿ ಭಾಗವಹಿಸಿದರು.

ಶಾಸಕ ಎಂ.ವೈ. ಪಾಟೀಲ ಅವರು ಕಾರ್ಯಕ್ರಮ ಅಧ್ಯಕ್ಷತೆ ವಹಿಸಿ ಮಾತನಾಡಿ ಇಂದಿನ ಯುಗವು ಸ್ಪರ್ಧಾತ್ಮಕ ಯುಗವಾಗಿದ್ದು, ಜೀವನದಲ್ಲಿ ಯಶಸ್ಸು ಸಾಧಿಸಲು ಸ್ಪರ್ಧಾತ್ಮಕ ಮನೋಭಾವ ಹಾಗೂ ನಿರಂತರ ಶ್ರಮ ಅಗತ್ಯ ಎಂದರು.

ಭಾರತವು ಯುವಕರ ದೇಶವಾಗಿದ್ದು, ದೇಶದ ಶೇ.60 ರಷ್ಟು ಜನಸಂಖ್ಯೆ ಯುವಕರದ್ದಾಗಿದೆ. ದೇಶದ ಅಭಿವೃದ್ಧಿಯಲ್ಲಿ ಯುವಕರ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಇಂದಿನ ಯುವಕರು ಮೊಬೈಲ್‌ಗೆ ಹೆಚ್ಚು ಒಲವು ತೋರಿಸುತ್ತಿದ್ದು, ಅದರ ಉತ್ತಮ ಹಾಗೂ ದುಷ್ಪರಿಣಾಮಗಳೆರಡನ್ನೂ ಅರಿತು ಬಳಸಬೇಕು. ಪುಸ್ತಕ ಓದುವ ಅಭ್ಯಾಸ ಬೆಳೆಸಿಕೊಂಡರೆ ಯಾವುದೇ ಕಠಿಣ ಸವಾಲನ್ನು ಎದುರಿಸುವ ಸಾಮರ್ಥ್ಯ ಬೆಳೆಯುತ್ತದೆ. ನಿಮ್ಮ ತಂದೆ-ತಾಯಿ ಹಾಗೂ ಶಿಕ್ಷಣ ನೀಡಿದ ಗುರುಗಳ ಹೆಸರನ್ನು ತರುವಂತಹ ಸಾಧನೆ ಮಾಡಬೇಕು ಎಂದು ಅವರು ಕರೆ ನೀಡಿದರು.

ಸರ್ಕಾರ ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಸಾಕಷ್ಟು ಅವಕಾಶಗಳನ್ನು ಕಲ್ಪಿಸಿದ್ದು, ಶಾಲೆ-ಕಾಲೇಜುಗಳ ಗ್ರಂಥಾಲಯಗಳಲ್ಲಿರುವ ಉತ್ತಮ ಪುಸ್ತಕಗಳನ್ನು ಓದಿ ಜ್ಞಾನ ವೃದ್ಧಿಸಿಕೊಳ್ಳುವಂತೆ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಕೆಪಿಸಿಸಿ ರಾಜ್ಯ ಹಿಂದುಳಿದ ವರ್ಗಗಳ ಉಪಾಧ್ಯಕ್ಷ ಜೆ.ಎಂ. ಕೊರಬು ಮಾತನಾಡಿ, ಡಾ. ಬಾಬಾಸಾಹೇಬ ಅಂಬೇಡ್ಕರ್, ಛತ್ರಪತಿ ಸಾಹು ಮಹಾರಾಜ ಹಾಗೂ ಮಹಾತ್ಮ ಜ್ಯೋತಿರಾವ್ ಫುಲೆ ಅವರ ಸಮಾನತೆಯ ವಿಚಾರಧಾರೆಗಳು ಸಂಪೂರ್ಣವಾಗಿ ಜಾರಿಯಾದಾಗ ಮಾತ್ರ ಎಲ್ಲರಿಗೂ ಸಮಾನ ಹಕ್ಕುಗಳು ದೊರೆಯಲಿವೆ ಎಂದರು. ಈ ಭಾಗದಲ್ಲಿ ರಾಜ್ಯ ಮಟ್ಟದ ಸ್ಪರ್ಧಾತ್ಮಕ ಪರೀಕ್ಷೆ ಆಯೋಜಿಸಿ ರುವುದು ಅರ್ಥ ಪೂರ್ಣ ಕಾರ್ಯ ವಾಗಿದೆ. ಇಂತಹ ಕಾರ್ಯಕ್ರಮಗಳು ವಿದ್ಯಾರ್ಥಿಗಳಲ್ಲಿ ಸ್ಪರ್ಧಾತ್ಮಕ ಮನೋಭಾವ ಬೆಳೆಸುವುದರ ಜೊತೆಗೆ ಸ್ಪರ್ಧಾತ್ಮಕ ಪರೀಕ್ಷೆಗಳ ತಯಾರಿ ಹಾಗೂ ಸಿದ್ಧತೆಯ ಬಗ್ಗೆ ಅರಿವು ಮೂಡಿಸುತ್ತವೆ ಎಂದು ತಿಳಿಸಿದರು.

ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ವಿಜೇತರಾದವರಿಗೆ ಪ್ರಥಮ ಬಹುಮಾನ 51,000, ದ್ವಿತೀಯ ಬಹುಮಾನ 25,000 ಹಾಗೂ ತೃತೀಯ ಬಹುಮಾನ 15,000 ನಿಗದಿಪಡಿಸಲಾಗಿತ್ತು. ಪರೀಕ್ಷೆಯ ಫಲಿತಾಂಶವನ್ನು ಅದೇ ದಿನ ಪ್ರಕಟಿಸಿ ಗಣ್ಯರ ಸಮ್ಮುಖದಲ್ಲಿ ವಿಜೇತರಿಗೆ ಬಹುಮಾನ ವಿತರಿಸಲಾಯಿತು. ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ನಿತೀನ್ ಗುತ್ತೇದಾರ ಮಾತನಾಡಿ ಯುವಕರು ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಉತ್ತಮ ಸಿದ್ದತೆ ಪಡೆಯಬೇಕು ಎಂದರು.

ಬೆಂಗಳೂರಿನ ಇನ್‌ಸೈಟ್ ಐಎಎಸ್ ಸಂಸ್ಥೆಯ ಸಂಸ್ಥಾಪಕ ಜಿ.ಬಿ. ವಿನಯಕುಮಾರ ವಿಶೇಷ ಉಪನ್ಯಾಸ ನೀಡಿದರು.

ಈ ಸಂಧರ್ಭದಲ್ಲಿ ಶಂಕರ ಮ್ಯಾಕೇರಿ, ಜೆಡಿಎಸ್ ತಾಲೂಕಾಧ್ಯಕ್ಷ ಮಲ್ಲಿಕಾರ್ಜುನ ಸಿಂಗೆ, ನಾಮದೇವ ಕಡಕೋಳ, ವಕೀಲರ ಸಂಘದ ಅಧ್ಯಕ್ಷ ಅರ್ಜುನ ಕೆರೂರ, ವಕೀಲ ಕೆ.ಜಿ. ಪೂಜಾರಿ, ಭೀಮರಾಯ ಗೌರ, ಡಾ.ಸಂಗಣ್ಣ ಸಿಂಗೆ, ಡಾ.ಸಂತೋಷ ಹುಗ್ಗಿ, ರಾಜಕುಮಾರ ಬಳೂರ್ಗಿ, ಡಾ.ಶಿವಶರಣಪ್ಪ ಮೊತಕಪಳ್ಳಿ, ಗುರು ಪೂಜಾರಿ, ಮಹಾಂತ ಬಳೂಂಡಗಿ ಮುತ್ತು ಕುರಿಮನಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.



ವಾರ್ಡ್ 52ರಲ್ಲಿ 1.45 ಕೋಟಿ ವೆಚ್ಚದ ರಸ್ತೆ ಕಾಮಗಾರಿಗೆ ಚಾಲನೆ

ಕಲಬುರಗಿ:

ದಕ್ಷಿಣ ವಿಧಾನಸಭಾ ಕ್ಷೇತ್ರದ ವಾರ್ಡ್ 52ರ ಹೈಕೋರ್ಟ್ ಪಕ್ಕದ ಕೆಎಚ್‌ಬಿ ಅಕ್ಕ ಮಹಾದೇವಿ ಕಾಲೋನಿಯಲ್ಲಿ 1.45 ಕೋಟಿ ವೆಚ್ಚದಲ್ಲಿ ಕೈಗೊಳ್ಳಲಿರುವ ರಸ್ತೆ ಕಾಮಗಾರಿಗೆ ರವಿವಾರ ಶಾಸಕ ಅಲ್ಲಂಪ್ರಭು ಪಾಟೀಲ ಅಡಿಗಲ್ಲು ಪೂಜೆ ನೆರವೇರಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಕೆಕೆಆರ್‌ಡಿಬಿಯ 4.90 ಕೋಟಿ ಪ್ಯಾಕೇಜ್ ಅನುದಾನವನ್ನು ನಗರದ ವಿವಿಧ ಬಡಾವಣೆಗಳ ಅಭಿವೃದ್ಧಿಗೆ ಬಳಸಲಾಗುತ್ತಿದೆ. ನಿಜಾಂಪೂರ, ಕಮಲಾ ನಗರ, ಓಝಾ ಬಡಾವಣೆ, ಕುರುಬ ನಗರ, ಸಾವಿತ್ರಿಬಾಯಿ ಫುಲೆ ಬಡಾವಣೆ, ವೆಂಕಟೇಶ ನಗರ, ಗಿರಿ ಬಡಾವಣೆ ಹಾಗೂ ಶರಣ ನಗರ ಸೇರಿದಂತೆ ಹಲವು ಪ್ರದೇಶಗಳಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ ಎಂದರು.

ಅಭಿವೃದ್ಧಿ ಕಾಮಗಾರಿಗಳು ಯಶಸ್ವಿಯಾಗಿ ಪೂರ್ಣಗೊಳ್ಳಲು ಸಾರ್ವಜನಿಕರ ಸಹಕಾರ ಅಗತ್ಯ ಎಂದು ಅವರು ಹೇಳಿದರು.

ಈ ಸಂದರ್ಭದಲ್ಲಿ ಲಿಂಗರಾಜ ತಾರಫೈಲ್, ಧರ್ಮರಾಜ ಹೆರೂರ್, ಸುಶೀಲ್ ಮಮದೆ, ರವಿ ಕೊಳ್ಳೂರ, ದಯಾನಂದ ಸ್ವಾಮಿ, ರಾಣಪ್ಪ, ಬಾಬು, ಚಂದ್ರಕಾಂತ ಸೇರಿದಂತೆ ಅಧಿಕಾರಿಗಳು ಹಾಗೂ ಸ್ಥಳೀಯ ಮುಖಂಡರು ಉಪಸ್ಥಿತರಿದ್ದರು.

ಲಾರಿ ಚಾಲನೆ ವೇಳೆ ಹೃದಯಾಘಾತದಿಂದ ಚಾಲಕ ಮೃತ್ಯು



ಬಾಗಲಕೋಟೆ ,ಆ.10-

ಮಾಜಿ ಸಚಿವ ಆರ್.ಬಿ.ತಿಮ್ಮಾಪುರ ಅವರೊಂದಿಗೆ ದೂರವಾಣಿ ಸಂಭಾಷಣೆ ನಡೆಸಿರುವುದು ನಿಜ. ಆದರೆ ಆ ಮಾತುಕತೆಯಲ್ಲಿ ಇಲ್ಲದ ವಿಷಯಗಳನ್ನು ಸೇರಿಸಿ ಷಡ್ಯಂತ್ರ ರೂಪಿಸಿ ವೈರಲ್ ಮಾಡಲಾಗಿದೆ ಎಂದು ಕಾಂಗ್ರೆಸ್ ಬಾಗಲಕೋಟೆ ಜಿಲ್ಲಾ ಘಟಕದ ಅಧ್ಯಕ್ಷ ಎಸ್.ಜಿ.ನಂಜಯ್ಯನಮಠ ಸ್ಪಷ್ಟನೆ ನೀಡಿದ್ದಾರೆ.

ನಗರದ ನವನಗರ ಪತ್ರಿಕಾ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಸಚಿವರಾದ ಬಳಿಕ ವಿಜಯಾನಂದ ಕಾಶಪ್ಪನವರ ಅವರನ್ನು ಭೇಟಿ ಮಾಡಿ ಸನ್ಮಾನಿಸಿದ್ದೇನೆ. ಅವರು ನನ್ನೊಂದಿಗೆ ಗೌರವಯುತವಾಗಿ ನಡೆದುಕೊಂಡಿದ್ದಾರೆ. ಸನ್ಮಾನ ಕಾರ್ಯಕ್ರಮದಿಂದ ಹಿಂದಿರುಗುವ ವೇಳೆ ಕಾರಿನಲ್ಲಿ ತಿಮ್ಮಾಪುರ ಅವರೊಂದಿಗೆ ದೂರವಾಣಿ ಮೂಲಕ ಮಾತನಾಡಿದ್ದೇನೆ ಎಂದು ಹೇಳಿದರು.

ಸಚಿವ ಸಂಪುಟದ ಬಗ್ಗೆ ತಿಮ್ಮಾಪುರ ಅವರೊಂದಿಗೆ ಅಸಮಾಧಾನ ವ್ಯಕ್ತಪಡಿಸಿರುವುದು ನಿಜ. ಆದರೆ ವೈರಲ್ ಆಗಿರುವ ಆಡಿಯೋದಲ್ಲಿ ಕೆಲವೊಂದು ವಿಷಯಗಳನ್ನು ಉದ್ದೇಶಪೂರ್ವಕವಾಗಿ ಸೇರಿಸಲಾಗಿದೆ. ಹೈಕಮಾಂಡ್ ಅಥವಾ ಪೇಮೆಂಟ್ ಸೀಟ್ ಕುರಿತು ನಾವು ಯಾವುದೇ ಮಾತುಕತೆ ನಡೆಸಿಲ್ಲ ಎಂದು ಸ್ಪಷ್ಟಪಡಿಸಿದರು.

ತಮ್ಮ ಹಾಗೂ ತಿಮ್ಮಾಪುರ ಅವರ ನಡುವೆ ಭಿನ್ನಾಭಿಪ್ರಾಯ ಉಂಟುಮಾಡುವ ಉದ್ದೇಶದಿಂದ ಈ ಷಡ್ಯಂತ್ರ ರೂಪಿಸಲಾಗಿದೆ. ಇದರ ಹಿಂದೆ ಬಿಜೆಪಿ ಕಾರ್ಯಕರ್ತರ ಕೈವಾಡ ಇರಬಹುದೆಂಬ ಅನುಮಾನವಿದೆ ಎಂದು ಆರೋಪಿಸಿದರು.

ಈ ಪ್ರಕರಣದ ಕುರಿತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ದೂರು ನೀಡಿ, ಆಡಿಯೋ ವೈರಲ್ ಮಾಡಿದವರು ಯಾರು ಹಾಗೂ ಅದರಲ್ಲಿ ಸುಳ್ಳು ಮಾಹಿತಿಯನ್ನು ಸೇರಿಸಿರುವವರ ವಿರುದ್ಧ ಸಮಗ್ರ ತನಿಖೆ ನಡೆಸುವಂತೆ ಆಗ್ರಹಿಸುವುದಾಗಿ ತಿಳಿಸಿದರು.

''ನಾನು ಕಟ್ಟಾ ಕಾಂಗ್ರೆಸ್ ಕಾರ್ಯಕರ್ತ. ಯಾವುದೇ ಕಾರಣಕ್ಕೂ ಕಾಂಗ್ರೆಸ್ ಪಕ್ಷವನ್ನು ಬಿಡುವುದಿಲ್ಲ'' ಎಂದು ಎಸ್.ಜಿ. ನಂಜಯ್ಯನಮಠ ಸ್ಪಷ್ಟಪಡಿಸಿದರು.

ಕರ್ನಾಟಕ ದಲಿತ ಸಂಘರ್ಷ ಸಮಿತಿ ಜಿಲ್ಲಾ ಪದಾಧಿಕಾರಿಗಳ ಆಯ್ಕೆ

ಬೀದರ್,ಆ.10-

ಕರ್ನಾಟಕ ದಲಿತ ಸಂಘರ್ಷ ಸಮಿತಿ (ಭೀಮವಾದ)ಯ ನೂತನ ರಾಜ್ಯ ಸಂಚಾಲಕ ಪರಶುರಾಮ್ ನೀಲನಾಯಕ ಅವರ ಆದೇಶದಂತೆ ಸಂಘಟನೆಯ ಜಿಲ್ಲಾ ಸಮಿತಿಯ ಪದಾಧಿಕಾರಿಗಳ ಆಯ್ಕೆ ಮಾಡಲಾಯಿತು ಎಂದು ಸಂಘಟನೆಯ ಸಂಚಾಲಕ ಸುನಿಲ್ ಸಂಗವ್ ಅವರು ಪ್ರಕಟಣೆ ಮೂಲಕ ತಿಳಿಸಿದ್ದಾರೆ. ನಗರದ ಪ್ರಿಯದರ್ಶಿನಿ ಉಡುಪಿ ಹೋಟೆಲ್ ನಲ್ಲಿ ಶನಿವಾರ ಸಂಘಟನೆಯ ಸಂಚಾಲಕ ಸುನಿಲ್ ಸಂಗವ್ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಜಿಲ್ಲಾ ಸಮಿತಿಯ ಪದಾಧಿಕಾರಿಗಳು ಆಯ್ಕೆ ಮಾಡಲಾಯಿತು. ಈ ವೇಳೆ ಭಂತೆ ಸಂಘ ರಖ್ಷಿತ್ ಅವರು ಡಾ.ಅಂಬೇಡ್ಕರ್ ಹಾಗೂ ಬುದ್ಧರ ಭಾವಚಿತ್ರಕ್ಕೆ ಪುಷ್ಪ ಹಾಕಿ ಪೂಜೆ ಮಾಡಿದರು.

ಸಂಘಟನೆಯ ಜಿಲ್ಲಾ ಕಾರ್ಯದರ್ಶಿಗಳಾಗಿ ತುಕಾರಾಮ್ ತಾಳಮಡಗಿ ಹಾಗೂ ತುಕಾರಾಮ್ ಮುತ್ತಂಗಿಕರ್, ಖಜಾಚಿಯಾಗಿ ಸತೀಶಕುಮಾರ್ ದೀನೆ, ಜಿಲ್ಲಾ ಕಲಾವಿದರ ಸಂಘದ ಅಧ್ಯಕ್ಷರಾಗಿ ಸುನಿಲಕುಮಾರ್ ಭಾವಿಕಟ್ಟಿ, ಜಿಲ್ಲಾ ಸಮಿತಿಯ ಸದಸ್ಯರಾಗಿ ಪ್ರೇಮನಾಥ್ ಸೇರಿಕಾರ್ ಸುದರ್ಶನ್ ಧನ್ವಂತ್, ಬಕ್ಕಪ್ಪ ತಾರೆ, ಅಶೋಕ್ ಚವಳಿಕರ್, ಶಿವಾನಂದ್ ಕುದುರೆ ಮೈಲೂರ್ ಅವರನ್ನು ಸಮಿತಿಯ ಎಲ್ಲರ ಸಮ್ಮುಖದಲ್ಲಿ ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು. ಈ ಸಂದರ್ಭದಲ್ಲಿ ದಲಿತ ಮುಖಂಡ ರಾಜು ಕಪನೂರ್ ಮಹೇಶ್ ಗೋರನಾಳಕರ್, ಭರತ್ ಕಾಂಬಳೆ ಹಾಗೂ ಶಿವರಾಜ್ ವಿದ್ಯಾಸಾಗರ್ ಸೇರಿದಂತೆ ಇತರರು ಇದ್ದರು.

ಕಾರ್ಯಗಳನ್ನು ಮಾಡಲು ಕಾಯುತ್ತಿರುವ ನೂತನ ಸಚಿವರಿಗೆ ಇನ್ನೂ ಸಿಕ್ಕಿಲ್ಲ ಖಾತೆ ಭಾಗ್ಯ

ಮೂಲಗಳ ಪ್ರಕಾರ ರಾಮಲಿಂಗಾರೆಡ್ಡಿಯವರಿಗೆ ಜಲ ಸಂಪನ್ಮೂಲ ಬದಲಾಗಿ ವಸತಿ ಖಾತೆ ನೀಡುವ ಸಾಧ್ಯತೆ ಇದೆ. ಸಚಿವ ಕೆ.ಎಚ್.ಮುನಿಯಪ್ಪ ತಮಗೆ ಆಹಾರ ಮತ್ತು ನಾಗರಿಕ ಪೂರೈಕೆ ಬೇಡ, ಸಮಾಜ ಕಲ್ಯಾಣ ಇಲಾಖೆ ಬೇಕು ಎಂದು ಪಟ್ಟು ಹಿಡಿದಿದ್ದರು. ಡಿ.ಕೆ.ಶಿವಕುಮಾರ್ ಅವರ ಜೊತೆ ಮುನಿಯಪ್ಪ ದೆಹಲಿಗೂ ತೆರಳಿದ್ದರು. ಸಮಾಜ ಕಲ್ಯಾಣ ಇಲಾಖೆಯ ಮೇಲೆ ಕಣ್ಣಿಟ್ಟಿರುವ ಪಿ.ಎಂ.ನರೇಂದ್ರ ಸ್ವಾಮಿ, ಶಿವರಾಜ್ ತಂಗಡಗಿ ಅವರು ಕೂಡ ದೆಹಲಿ ಪ್ರವಾಸದಲ್ಲಿ ಮುಖ್ಯಮಂತ್ರಿಯವರ ಜೊತೆಗಿದ್ದರು.

ಮಹಿಳಾ ಕೋಟಾದಡಿ ಸಚಿವ ಸ್ಥಾನ ನೀಡಲು ಮುನಿಯಪ್ಪ ಅವರ ಪುತ್ರಿ ರೂಪಕಲಾ ಅವರನ್ನು ಹೈಕಮಾಂಡ್ ಗುರುತಿಸಿದೆ. ಮುನಿಯಪ್ಪ ಅವರಿಗೆ ಸಚಿವ ಸ್ಥಾನ ತೊರೆದು ಮುಂದಿನ ಲೋಕಸಭಾ ಚುನಾವಣೆಗೆ ತಯಾರಿ ನಡೆಸುವಂತೆ ಸಲಹೆ ನೀಡಲಾಗಿತ್ತು. ಮುನಿಯಪ್ಪ ಅವರಿಂದ ತೆರವಾದ ಸಚಿವ ಸ್ಥಾನಕ್ಕೆ ಪುತ್ರಿ ರೂಪಕಲಾ ಅವರನ್ನು ನಿಯೋಜಿಸುವುದಾಗಿ ಹೈಕಮಾಂಡ್ ಭರವಸೆ ನೀಡಿತ್ತು. ಆದರೆ ಮುನಿಯಪ್ಪ ಇದನ್ನು ತಳ್ಳಿ ಹಾಕಿದ್ದು, ಸಚಿವ ಸ್ಥಾನ ನಾನು ಬಿಡುವುದಿಲ್ಲ. ತಾವೇ ಮುಂದುವರೆಯುವುದಾಗಿ ಸ್ಪಷ್ಟಪಡಿಸಿದ್ದಾರೆ.

ಸಚಿವ ಸ್ಥಾನದಲ್ಲಿ ಮುಂದುವರೆಯುವುದಾದರೆ, ಸಮಾಜ ಕಲ್ಯಾಣ ಇಲಾಖೆ ಕೇಳಬಾರದು ಎಂದು ಷರತ್ತು ವಿಧಿಸಲಾಗಿದ್ದು, ಅದಕ್ಕೆ ಮುನಿಯಪ್ಪ ಒಪ್ಪಿದ್ದಾರೆ ಎಂದು ತಿಳಿದು ಬಂದಿದೆ.

ರಾಮಲಿಂಗಾರೆಡ್ಡಿಯವರ ಬಳಿ ಇರುವ ಜಲ ಸಂಪನ್ಮೂಲ ಖಾತೆಯನ್ನು ಮುನಿಯಪ್ಪ ಅಥವಾ ಶಿವರಾಜ್ ತಂಗಡಗಿ ಅವರಿಗೆ ನೀಡುವ ಸಾಧ್ಯತೆ ಇದೆ. ಎಚ್.ಸಿ.ಬಾಲಕೃಷ್ಣ ಅವರಿಗೆ ಅರಣ್ಯ, ಪರಿಸರ ಜೀವಶಾಸ್ತ್ರ ಖಾತೆ ನೀಡುವುದಾಗಿ ಹೇಳಲಾಗಿತ್ತು, ಆದರೆ ಕೊನೆ ಕ್ಷಣದಲ್ಲಿ ಉನ್ನತ ಶಿಕ್ಷಣ ಖಾತೆಗೆ ಅವರ ಹೆಸರು ಕೇಳಿ ಬರುತ್ತಿದೆ. ಲಕ್ಷ್ಮಣ ಸವದಿ ಅವರಿಗೆ-ಸಹಕಾರ, ವಿಜಯಾನಂದ ಕಾಶಪ್ಪನವರ್ -ಕೃಷಿ ಮಾರುಕಟ್ಟೆ, ಬಸವರಾಜ ರಾಯರೆಡ್ಡಿಯವರಿಗೆ-ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕೆ.ಎಸ್.ಬಸಂತಪ್ಪ ಅವರಿಗೆ- ಪೌರಾಡಳಿತ, ರುದ್ರಪ್ಪ ಲಮಾಣಿಗೆ-ಅಬಕಾರಿ, ಟಿ.ರಘುಮೂರ್ತಿಯವರಿಗೆ-ಪರಿಶಿಷ್ಟ ಪಂಗಡಗಳ ಅಭಿವೃದ್ಧಿ, ರಿಜ್ವಾನ್ ಅರ್ಷದ್‌ಗೆ- ಹಜ್ ಮತ್ತು ವಕ್ಫ್, ಪುಟ್ಟರಂಗಶೆಟ್ಟಿ ಅವರಿಗೆ-ಹಿಂದುಳಿದ ವರ್ಗಗಳ ಕಲ್ಯಾಣ, ಅಜಯ್ ಸಿಂಗ್‌ಗೆ- ಆಹಾರ ಮತ್ತು ನಾಗರಿಕ ಪೂರೈಕೆ, ಸಂತೋಷ್‌ಲಾಡ್‌ಗೆ- ಕಾರ್ಮಿಕ ಸೇರಿದಂತೆ ಕೆಲ ಖಾತೆಗಳ ಹಂಚಿಕೆ ಕುರಿತು ಚರ್ಚೆಗಳಾಗಿವೆ.

ಉಳಿದಂತೆ ಚೆಲುವರಾಯಸ್ವಾಮಿಗೆ- ಕೃಷಿ, ಮಧುಬಂಗಾರಪ್ಪ ಅವರಿಗೆ-ಶಾಲಾ ಶಿಕ್ಷಣ, ಸಾಕ್ಷರತೆ, ಜಮೀರ್ ಅಹಮದ್ ಖಾನ್‌ಗೆ- ಅಲ್ಪಸಂಖ್ಯಾತರ ಅಭಿವೃದ್ಧಿ ಖಾತೆ ಹಂಚಿಕೆಯಾಗುವ ಸಾಧ್ಯತೆ ಇದೆ.ಬಿ.ನಾಗೇಂದ್ರ ಅವರ ಪರಿಸ್ಥಿತಿ ಗೊಂದಲಕಾರಿಯಾಗಿದೆ. ಇಂದು ಸಂಜೆ ಒಳಗಾಗಿ ಮುಖ್ಯಮಂತ್ರಿಯವರು ಖಾತೆ ಹಂಚಿಕೆ ಪಟ್ಟಿಯನ್ನು ರಾಜ್ಯಪಾಲರಿಗೆ ರವಾನಿಸಲಿದ್ದಾರೆ ಎಂದು ತಿಳಿದು ಬಂದಿದೆ.

ಕೊಲೆ ಪ್ರಕರಣದಿಂದ ಭೀಮರಾಯ ಹದ್ದಿನಾಳ ಕೈಬಿಡಲು ಎನ್. ರಘುವೀರ ನಾಯಕ ಆಗ್ರಹ

ವ್ಯಕ್ತಿಯನ್ನು ಯಾವ ಕಾರಣಕ್ಕಾಗಿ ಆರೋಪಿಯನ್ನಾಗಿ ಸೇರಿಸಲಾಗಿದೆ ಹಾಗೂ ಯಾರ ಒತ್ತಡಕ್ಕೆ ಮಣಿದು ಈ ಕ್ರಮ ಕೈಗೊಳ್ಳಲಾಗಿದೆ ಎಂಬುದನ್ನು ಪೊಲೀಸ್ ಇಲಾಖೆ ಸ್ಪಷ್ಟಪಡಿಸಬೇಕು ಎಂದು ಒತ್ತಾಯಿಸಿದರು.

ಭೀಮರಾಯ ಹದ್ದಿನಾಳ ಅವರು 33 ವರ್ಷಗಳಿಂದ ಪತ್ರಿಕೋದ್ಯಮ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಕಳೆದ 15 ವರ್ಷಗಳಿಂದ ರಾಯಚೂರಿನಲ್ಲಿ ವಾಸವಾಗಿದ್ದಾರೆ. ಪತ್ರಕರ್ತರು ಕರ್ತವ್ಯದ ನಿಮಿತ್ತ ಘಟನೆ ನಡೆದ ಸ್ಥಳಕ್ಕೆ ತೆರಳಿ ವರದಿ ಮಾಡುವುದು ಸಹಜ. ಹೀಗಾಗಿ ಘಟನೆ ಸ್ಥಳದಲ್ಲಿ ಪತ್ರಕರ್ತರು ಹಾಗೂ ಪೊಲೀಸರು ಹಾಜರಿರುವುದನ್ನು ಅಪರಾಧದೊಂದಿಗೆ ತಳುಕು ಹಾಕಬಾರದು ಎಂದರು.

ಪ್ರಕರಣಕ್ಕೆ ಸಂಬಂಧಿಸಿದ ಸಿಡಿಆರ್ ಸಿಸಿಟಿವಿ ದೃಶ್ಯಗಳು, ಮೊಬೈಲ್ ಲೊಕೇಶನ್ ಸೇರಿದಂತೆ ಎಲ್ಲ ಸಾಕ್ಷ್ಯಾಧಾರಗಳನ್ನು ಸಮಗ್ರವಾಗಿ ಪರಿಶೀಲಿಸಬೇಕು. ಕೇವಲ ಹೇಳಿಕೆ ಅಥವಾ ಒತ್ತಡದ ಆಧಾರದ ಮೇಲೆ ಪತ್ರಕರ್ತರೊಬ್ಬರನ್ನು ಪ್ರಕರಣದಲ್ಲಿ ಆರೋಪಿಯನ್ನಾಗಿ ಮಾಡುವುದು ಸರಿಯಲ್ಲ ಎಂದು ಹೇಳಿದರು.

ಎಫ್‌ಐಆರ್‌ನಲ್ಲಿ ಹೆಸರು ಸೇರ್ಪಡೆಯಾದ ಹಿನ್ನೆಲೆಯಲ್ಲಿ ಭೀಮರಾಯ ಹದ್ದಿನಾಳ ಹಾಗೂ ಅವರ ಕುಟುಂಬಕ್ಕೆ ಮಾನಸಿಕ ಆಘಾತ ಉಂಟಾಗಿದೆ. ನ್ಯಾಯಸಮ್ಮತ ತನಿಖೆ ನಡೆಸಿ, ಪ್ರಕರಣದಲ್ಲಿ ಅವರ ಪಾತ್ರವಿಲ್ಲ ಎಂಬುದು ದೃಢಪಟ್ಟರೆ ಆರೋಪಿಗಳ ಪಟ್ಟಿಯಿಂದ ಅವರನ್ನು ಕೈಬಿಟ್ಟು ಗೌರವಯುತವಾಗಿ ಬದುಕಲು ಅವಕಾಶ ಕಲ್ಪಿಸಬೇಕು ಎಂದು ಆಗ್ರಹಿಸಿದರು.

ಭೀಮರಾಯ ಹದ್ದಿನಾಳ ಅವರ ಬಂಧನಕ್ಕೆ ಯಾವುದೇ ರೀತಿಯ ಪ್ರಯತ್ನ ನಡೆದರೆ ಸಂಘ ಹಾಗೂ ಸಮಾಜದ ವತಿಯಿಂದ ಉಗ್ರ ಹೋರಾಟ ನಡೆಸಲಾಗುವುದು. ಮುಂದಾಗುವ ಯಾವುದೇ ಬೆಳವಣಿಗೆಗೆ ಪೊಲೀಸ್ ಇಲಾಖೆಯೇ ಹೊಣೆಗಾರರಾಗಬೇಕಾಗುತ್ತದೆ ಎಂದು ರಘುವೀರ ನಾಯಕ ಎಚ್ಚರಿಸಿದರು. ಸುದ್ದಿಗೋಷ್ಠಿಯಲ್ಲಿ ರಾಮು ನಾಯಕ್, ಮಲ್ಲೇಶ್ ನಾಯಕ್, ರಂಗಸ್ವಾಮಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

ನಿಮ್ಮೂರು ಸುದ್ದಿ

ಸಂಪಾದಕೀಯ



ಮಧ್ಯಪ್ರದೇಶದ ಡಿಂಡೋರಿಯಲ್ಲಿ ಆದಿವಾಸಿಗಳು ಪೂಜಿಸುತ್ತಿದ್ದ ಪವಿತ್ರ ಶಿಲೆ

6.5 ಕೋಟಿ ವರ್ಷಗಳ ಹಿಂದಿನ ಭೌಗೋಳಿಕ ವಸ್ತು, ಸಾವಿರಾರು ವರ್ಷಗಳ ಮಾನವ ಆರಾಧನಾ ಪರಂಪರೆ, ಮತ್ತು ಇಂದಿನ ಆಧುನಿಕ ವೈಜ್ಞಾನಿಕ ಗುರುತಿಸುವಿಕೆ. ಪ್ರಕೃತಿಯ ಮೇಲಿನ ಅಗಾಧ ಭಕ್ತಿಯಿಂದ, 6.5 ಕೋಟಿ ವರ್ಷಗಳ ಹಳೆಯ ಹವಳದ ಪಳೆಯುಳಿಕೆಯನ್ನು ಪವಿತ್ರ ಶಿಲೆಯೆಂದು ಆರಾಧಿಸಿ ಸಂರಕ್ಷಿಸಿದ ಬೈಗಾ ಆದಿವಾಸಿಗಳ ಪರಂಪರೆ ನಿಜಕ್ಕೂ ಶ್ಲಾಘನೀಯ. ಇದು ಕೇವಲ ಒಂದು ಕಲ್ಲಿನ ಕಥೆಯಲ್ಲ; ಬದಲಾಗಿ ಮನುಷ್ಯ, ನಂಬಿಕೆ ಮತ್ತು ಭೂಮಿಯ ಇತಿಹಾಸದ ನಡುವಿನ ಅವಿನಾಭಾವ ಸಂಬಂಧವನ್ನು ಸಾರುವ ಅಮರ ಕಾವ್ಯವಾಗಿದೆ.

ನಮ್ಮ ಈ ವಿಸ್ಮಯಕಾರಿ ಭೂಮಿ ಹುಟ್ಟಿ ಬರೋಬ್ಬರಿ 454 ಕೋಟಿ ವರ್ಷಗಳಾಗಿವೆ ಎಂದು ವಿಜ್ಞಾನ ಹೇಳುತ್ತದೆ. ಈ ಸುದೀರ್ಘವಾದ ಇತಿಹಾಸದ ಪುಟಗಳಲ್ಲಿ ಅಡಗಿರುವ ಎಷ್ಟೋ ರಹಸ್ಯಗಳು ಇಂದಿಗೂ ನಿಗೂಢವಾಗಿಯೇ ಉಳಿದಿವೆ. ಕಾಲಗರ್ಭದಲ್ಲಿ ಹುದುಗಿರುವ ಇಂತಹದ್ದೇ ಒಂದು ರೋಚಕ ಹಾಗೂ ಬೆರಗು ಮೂಡಿಸುವ ರಹಸ್ಯವೊಂದು ಮಧ್ಯಪ್ರದೇಶದ ಡಿಂಡೋರಿ ಜಿಲ್ಲೆಯ ದಟ್ಟ ಅರಣ್ಯ ಪ್ರದೇಶದಲ್ಲಿ ಬಯಲಾಗಿದೆ. ಶತಮಾನಗಳಿಂದ ಬೈಗಾ () ಸಮುದಾಯದ ಆದಿವಾಸಿಗಳು ಪೂಜಿಸಿಕೊಂಡು ಬರುತ್ತಿದ್ದ ಪವಿತ್ರ ಶಿಲೆಯೊಂದನ್ನು, 6.5 ಕೋಟಿ ವರ್ಷಗಳಷ್ಟು ಹಳೆಯದಾದ ಅತ್ಯಂತ ಅಪರೂಪದ ಹವಳದ ಪಳೆಯುಳಿಕೆ ( ) ಎಂದು ತಜ್ಞರು ಗುರುತಿಸಿದ್ದು, ಇದು ಇದೀಗ ತಜ್ಞರ ಹಾಗೂ ಪರಿಸರಾಸಕ್ತರ ಗಮನ ಸೆಳೆದಿದೆ.

ಈ 454 ಕೋಟಿ ವರ್ಷಗಳೆಂಬ ಸುದೀರ್ಘ ಹಿನ್ನೆಲೆಯನ್ನು ಅರಿಯಲು ಭೂಮಿಯ ಉಗಮದತ್ತ ಒಮ್ಮೆ ಕಣ್ಣಾಯಿಸಬೇಕು. ಖಗೋಳ ವಿಜ್ಞಾನಿಗಳ ಪ್ರಕಾರ, ಸೌರವ್ಯೂಹದ ಆರಂಭಿಕ ಹಂತದಲ್ಲಿ ಸೂರ್ಯನ ಸುತ್ತ ಸುತ್ತುತ್ತಿದ್ದ ಬೃಹತ್ ಅನಿಲ ಮತ್ತು ಬಾಹ್ಯಾಕಾಶದ ಧೂಳಿನ ಮೋಡಗಳ ( ) ಸಂಯೋಜನೆ ಹಾಗೂ ಗುರುತ್ವಾಕರ್ಷಣೆಯ ಪರಿಣಾಮವಾಗಿ ಭೂಮಿ ರೂಪುಗೊಂಡಿತು. ಆರಂಭದಲ್ಲಿ ಅತ್ಯಂತ ಬಿಸಿಯಾದ, ಕುದಿಯುವ ಶಿಲಾರಸದಿಂದ () ಕೂಡಿದ್ದ ಈ ಗ್ರಹ, ಕೋಟ್ಯಂತರ ವರ್ಷಗಳ ನಿರಂತರ ಪ್ರಕ್ರಿಯೆಯ ನಂತರ ತಂಪಾಗಿ ಗಟ್ಟಿಯಾದ ಮೇಲ್ಮೈ () ಹಾಗೂ ಜಲಮೂಲಗಳನ್ನು ಸೃಷ್ಟಿಸಿಕೊಂಡು ಜೀವಸಂಕುಲಕ್ಕೆ ಆಶ್ರಯವಾಯಿತು. ಇಂತಹ ಊಹೆಗೂ ನಿಲುಕದ ಅಗಾಧವಾದ ಭೂವಿಕಾಸದ ಹಾದಿಯಲ್ಲಿ, 6.5 ಕೋಟಿ ವರ್ಷಗಳ ಹಿಂದಿನ ಈ ಪಳೆಯುಳಿಕೆಯು ನಮ್ಮ ಗ್ರಹದ ಕಥೆಯ ಒಂದು ಪ್ರಮುಖ ಅಧ್ಯಾಯವನ್ನು ನಮ್ಮ ಮುಂದಿಡುತ್ತದೆ.

ಡಿಂಡೋರಿ ಜಿಲ್ಲೆಯ ಅರಣ್ಯ ಪ್ರದೇಶದಲ್ಲಿರುವ ಗುಡಿಯೊಂದರಲ್ಲಿ ಈ ವಿಶಿಷ್ಟವಾದ ಕಲ್ಲನ್ನು ಪವಿತ್ರ ದೈವವೆಂದು ಭಾವಿಸಿ ಆರಾಧಿಸಲಾಗುತ್ತಿತ್ತು. ಇತ್ತೀಚೆಗೆ ಮಧ್ಯಪ್ರದೇಶದ ಪುರಾತತ್ವ, ಪತ್ರಾಗಾರ ಮತ್ತು ವಸ್ತುಸಂಗ್ರಹಾಲಯ ನಿರ್ದೇಶನಾಲಯದ (,) ತಜ್ಞರ ತಂಡವು ಈ ಪ್ರದೇಶದ ಭೌಗೋಳಿಕ ಸಂಪತ್ತಿನ ಬಗ್ಗೆ ಸಮೀಕ್ಷೆ ನಡೆಸಿದಾಗ ಈ ಅಚ್ಚರಿಯ ಸತ್ಯ ಹೊರಬಿದ್ದಿದೆ. ಕಾಡಿನ ಮಧ್ಯೆ ಆದಿವಾಸಿಗಳ ಆರಾಧನೆಗೆ ಒಳಪಟ್ಟಿದ್ದ ಈ ಕಲ್ಲು ಕೇವಲ ಸಾಮಾನ್ಯ ಶಿಲೆಯಲ್ಲ, ಬದಲಾಗಿ ಅದು ಸುಮಾರು 6.5 ಕೋಟಿ ವರ್ಷಗಳ ಹಿಂದಿನ ಹವಳದ ಪಳೆಯುಳಿಕೆ ಎಂದು ತಜ್ಞರು ಗುರುತಿಸಿದ್ದಾರೆ. ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ () ಪುರಾತತ್ವಶಾಸ್ತ್ರಜ್ಞ ಡಾ. ಮನೋಜ್ ಕುಮಾರ್ ಕುರ್ಮಿ ಅವರು ಸಹ ಈ ಶಿಲೆಯ ಕುರಿತು ಅಧ್ಯಯನ ನಡೆಸಿ, ಇದರ ಐತಿಹಾಸಿಕ ಮಹತ್ವವನ್ನು ವಿಶ್ಲೇಷಿಸಿದ್ದಾರೆ.

ಕಾಡೇ ತಮ್ಮ ಬದುಕು ಎಂದು ನಂಬಿರುವ ಬೈಗಾ ಆದಿವಾಸಿಗಳಿಗೆ ಪ್ರಕೃತಿಯೇ ಮೂಲ ದೇವರು. ಆ ನಿರ್ದಿಷ್ಟ ಶಿಲೆಯ ರಚನೆ, ಅದರ ಮೇಲಿದ್ದ ವಿಶಿಷ್ಟವಾದ ಪದರಗಳು ಮತ್ತು ಹವಳದಂತಹ ವಿನ್ಯಾಸವು (, -) ತಲೆಮಾರುಗಳ ಹಿಂದೆಯೇ ಅವರನ್ನು ಆಕರ್ಷಿಸಿತ್ತು. ತಜ್ಞರ ಅಂದಾಜಿನ ಪ್ರಕಾರ, ಈ ಶಿಲೆಯನ್ನು ಆರಾಧಿಸುವ ಗುಡಿಯ ಪರಂಪರೆಯು ಸುಮಾರು 8,000 ದಿಂದ 10,000 ವರ್ಷಗಳಷ್ಟು ಹಳೆಯದಾಗಿರಬಹುದು! ಪಳೆಯುಳಿಕೆಯ ಮಹತ್ವವನ್ನು ಅರಿತಿದ್ದ ಆದಿವಾಸಿಗಳು, ಅದರ ಸುತ್ತ ಗುಡಿಯೊಂದನ್ನು ನಿರ್ಮಿಸಿ ತಲೆಮಾರುಗಳಿಂದ ಅದರ ರಕ್ಷಣೆ ಮಾಡುತ್ತಾ ಬಂದಿದ್ದಾರೆ. ಅವರ ಈ ನಂಬಿಕೆ ಮತ್ತು ಪರಂಪರೆಯ ಜ್ಞಾನವೇ ಇಂದು ಭೂಮಿಯ ಇತಿಹಾಸದ ಮಹತ್ವದ ಕೊಂಡಿಯೊಂದನ್ನು ಉಳಿಸುವಲ್ಲಿ ಯಶಸ್ವಿಯಾಗಿದೆ.

ಸುಮಾರು 6.5 ಕೋಟಿ ವರ್ಷಗಳ ಹಿಂದಿನ ಈ ಪಳೆಯುಳಿಕೆಯ ಕಾಲಘಟ್ಟವು ಭೂಮಿಯ ಇತಿಹಾಸದ ಮಹತ್ವದ ತಿರುವಿನ ಸಮೀಪದಲ್ಲಿದೆ. ವಿಜ್ಞಾನಿಗಳ ಪ್ರಕಾರ, ಸುಮಾರು 6.6 ಕೋಟಿ ವರ್ಷಗಳ ಹಿಂದೆ ನಡೆದ ಕೆ-ಪಿಜಿ (-) ಸಾಮೂಹಿಕ ವಿನಾಶದಲ್ಲಿ ಡೈನೋಸಾರ್‌ಗಳು ಸೇರಿದಂತೆ ಭೂಮಿಯ ಮೇಲಿದ್ದ ಅನೇಕ ಜೀವಸಂಕುಲಗಳು ನಾಶವಾದವು. ಇದೇ ವಿಶಾಲ ಕಾಲಘಟ್ಟದಲ್ಲಿ ಭಾರತದ ದಖನ್ ಪ್ರದೇಶದಲ್ಲಿ ( ) ಭಾರಿ ಜ್ವಾಲಾಮುಖಿ ಚಟುವಟಿಕೆಗಳೂ ನಡೆದಿದ್ದವು. ಅಂತಹ ರೋಚಕ ಭೌಗೋಳಿಕ ಬದಲಾವಣೆಗಳ ಕಾಲಘಟ್ಟದಲ್ಲಿ ಜೀವಿಸಿದ್ದ ಹವಳವೊಂದು ಕಾಲಾನಂತರದಲ್ಲಿ ಪಳೆಯುಳಿಕೆಯಾಗಿ ರೂಪುಗೊಂಡು ಇಂದು ನಮ್ಮ ಮುಂದಿದೆ.

ಸಾಮಾನ್ಯವಾಗಿ ಹವಳಗಳು () ಸಮುದ್ರ ಅಥವಾ ಉಪ್ಪುನೀರಿನ ಜಲಮೂಲಗಳಲ್ಲಿ ಮಾತ್ರ ಕಂಡುಬರುತ್ತವೆ. ಆದರೆ, ಇಂದು ದಟ್ಟ ಅರಣ್ಯ ಹಾಗೂ ಗುಡ್ಡಗಾಡು ಪ್ರದೇಶವಾಗಿರುವ ಮಧ್ಯಪ್ರದೇಶದ ಡಿಂಡೋರಿಯಲ್ಲಿ ಇಂತಹ ಜೀವಿಗಳ ಪಳೆಯುಳಿಕೆ ಸಿಕ್ಕಿರುವುದು ಕುತೂಹಲಕಾರಿಯಾಗಿದೆ. ಈ ಪಳೆಯುಳಿಕೆಯ ಭೌಗೋಳಿಕ ಹಿನ್ನೆಲೆ, ಅದು ಯಾವ ಶಿಲಾಸ್ತರದಲ್ಲಿ ರೂಪುಗೊಂಡಿತು ಮತ್ತು ಅದರ ಸುತ್ತಲಿನ ಭೂವೈಜ್ಞಾನಿಕ ರಚನೆಗಳು ಕಾಲಕ್ರಮೇಣ ಹೇಗೆ ಬದಲಾಗಿವೆ ಎಂಬುದನ್ನು ಆಳವಾಗಿ ಅಧ್ಯಯನ ಮಾಡಿದರೆ, ಪ್ರಾಚೀನ ಭಾರತದ ಪರಿಸರ ಮತ್ತು ಭೂವೈಜ್ಞಾನಿಕ ಇತಿಹಾಸದ ಕುರಿತು ಹೆಚ್ಚಿನ ಹಾಗೂ ನಿಖರ ಮಾಹಿತಿ ದೊರೆಯಬಹುದು ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಡಿಂಡೋರಿ ಜಿಲ್ಲೆ ಪಳೆಯುಳಿಕೆಗಳ ಪಾಲಿಗೆ ಹೊಸದೇನಲ್ಲ. ಈ ಪ್ರದೇಶದಲ್ಲಿ ಈಗಾಗಲೇ 75 ಎಕರೆ ವಿಸ್ತೀರ್ಣದ ಘುಘ್ವಾ ಫಾಸಿಲ್ ನ್ಯಾಷನಲ್ ಪಾರ್ಕ್ ( ) ಇದ್ದು, ಅಲ್ಲಿ 4 ಕೋಟಿಯಿಂದ 15 ಕೋಟಿ ವರ್ಷಗಳಷ್ಟು ಹಳೆಯದಾದ ಅಪರೂಪದ ಸಸ್ಯಗಳ ಪಳೆಯುಳಿಕೆಗಳನ್ನು ಸಂರಕ್ಷಿಸಲಾಗಿದೆ. ಈಗ ಬೈಗಾ ಆದಿವಾಸಿಗಳ ಪೂಜಾ ಸ್ಥಳದಲ್ಲಿ ಪತ್ತೆಯಾಗಿರುವ ಈ ಹವಳದ ಪಳೆಯುಳಿಕೆಯು, ಡಿಂಡೋರಿ ಜಿಲ್ಲೆಯು ಭೌಗೋಳಿಕ ವಿಸ್ಮಯಗಳ ಬೀಡು ಎಂಬುದನ್ನು ಮತ್ತೊಮ್ಮೆ ನಿರೂಪಿಸಿದೆ.

ಇದೊಂದು ಅಪರೂಪದ ನಿದರ್ಶನವಾಗಿದ್ದು, ಇಲ್ಲಿ ಆಧುನಿಕ ವಿಜ್ಞಾನ ಮತ್ತು ಜನರ ಪ್ರಾಚೀನ ನಂಬಿಕೆಗಳು ಮುಖಾಮುಖಿಯಾಗಿವೆ. ಎಎಸ್‌ಐ ಪುರಾತತ್ವ ತಜ್ಞ ಡಾ. ಮನೋಜ್ ಕುಮಾರ್ ಕುರ್ಮಿ ಅವರು ವಿಶ್ಲೇಷಿಸುವಂತೆ, ಬಹಳ ಹಿಂದಿನ ಕಾಲದಲ್ಲಿ ಜನರು ಪ್ರಕೃತಿಯಲ್ಲಿ ಕಂಡುಬರುವ ವಿಶಿಷ್ಟವಾದ ಮರ, ಬೆಟ್ಟ ಅಥವಾ ಕಲ್ಲುಗಳನ್ನು ದೈವಿಕ ಶಕ್ತಿಯ ಸಂಕೇತವೆಂದು ಪೂಜಿಸುತ್ತಿದ್ದಿರಬಹುದು. ಬೈಗಾ ಆದಿವಾಸಿಗಳ ಈ ನಿಷ್ಕಲ್ಮಶ ಪ್ರಕೃತಿ ಆರಾಧನಾ ಪದ್ಧತಿಯೇ, ಕೋಟ್ಯಂತರ ವರ್ಷಗಳ ಹಿಂದಿನ ಈ ಪಳೆಯುಳಿಕೆಯನ್ನು ಮಳೆಯಿಂದ, ಬಿಸಿಲಿನಿಂದ ಹಾಗೂ ಭೂಗಳ್ಳರ, ಪ್ರಾಕೃತಿಕ ಸಂಪತ್ತು ಲೂಟಿ ಹೊಡೆಯುವವರಿಂದ ಬಹುಶಃ ಸಂರಕ್ಷಿಸಿರಬಹುದು.

ಈ ಮಹತ್ವದ ಶೋಧನೆಯ ನಂತರ, ಆಯುಕ್ತ ಮದನ್ ಕುಮಾರ್ ನಾಗರಗೋಜೆಯವರ ನೇತೃತ್ವದಲ್ಲಿ ಅಧಿಕಾರಿಗಳು ಡಿಂಡೋರಿಯ ಈ ಅಪಾರ ಭೂವೈಜ್ಞಾನಿಕ ಸಂಪತ್ತಿನ ನಿಖರ ದಾಖಲೀಕರಣವನ್ನು ಆರಂಭಿಸಿದ್ದಾರೆ. ಭೋಪಾಲ್‌ನಲ್ಲಿರುವ ರಾಜ್ಯ ವಸ್ತುಸಂಗ್ರಹಾಲಯದ ( ) ಹೊಸ ಗ್ಯಾಲರಿಯಲ್ಲಿ ಈ ಅಪರೂಪದ ಪಳೆಯುಳಿಕೆಗಳ ಮಾದರಿಗಳನ್ನು ಪ್ರದರ್ಶಿಸುವ ಮೂಲಕ, ಸಾಮಾನ್ಯ ಜನರಿಗೂ ಈ ಮಾಹಿತಿ ತಲುಪಿಸುವ ಪ್ರಯತ್ನ ನಡೆಯುತ್ತಿದೆ. ಇದರಿಂದ ಡಿಂಡೋರಿಯ ಭೂವೈಜ್ಞಾನಿಕ ಹಾಗೂ ಮಾನವ-ಸಾಂಸ್ಕೃತಿಕ ಪರಂಪರೆಯ ಕುರಿತು ಹೆಚ್ಚಿನ ಅಧ್ಯಯನಕ್ಕೆ ಮುಕ್ತ ಅವಕಾಶ ಸಿಕ್ಕಂತಾಗಿದೆ.

ಈ ಘಟನೆಯು ಅತ್ಯಂತ ರೋಚಕವಾದ ಮೂರು ಕಾಲಘಟ್ಟಗಳನ್ನು ಬೆಸೆಯುತ್ತದೆ; 6.5 ಕೋಟಿ ವರ್ಷಗಳ ಹಿಂದಿನ ಭೌಗೋಳಿಕ ವಸ್ತು, ಸಾವಿರಾರು ವರ್ಷಗಳ ಮಾನವ ಆರಾಧನಾ ಪರಂಪರೆ, ಮತ್ತು ಇಂದಿನ ಆಧುನಿಕ ವೈಜ್ಞಾನಿಕ ಗುರುತಿಸುವಿಕೆ. ಪ್ರಕೃತಿಯ ಮೇಲಿನ ಅಗಾಧ ಭಕ್ತಿಯಿಂದ, 6.5 ಕೋಟಿ ವರ್ಷಗಳ ಹಳೆಯ ಹವಳದ ಪಳೆಯುಳಿಕೆಯನ್ನು ಪವಿತ್ರ ಶಿಲೆಯೆಂದು ಆರಾಧಿಸಿ ಸಂರಕ್ಷಿಸಿದ ಬೈಗಾ ಆದಿವಾಸಿಗಳ ಪರಂಪರೆ ನಿಜಕ್ಕೂ ಶ್ಲಾಘನೀಯ. ಇದು ಕೇವಲ ಒಂದು ಕಲ್ಲಿನ ಕಥೆಯಲ್ಲ; ಬದಲಾಗಿ ಮನುಷ್ಯ, ನಂಬಿಕೆ ಮತ್ತು ಭೂಮಿಯ ಇತಿಹಾಸದ ನಡುವಿನ ಅವಿನಾಭಾವ ಸಂಬಂಧವನ್ನು ಸಾರುವ ಅಮರ ಕಾವ್ಯವಾಗಿದೆ.

ಎಂಎಸ್ಸಿ ಎಲೆಕ್ಟ್ರಾನಿಕ್ ಮೀಡಿಯಾ - ಬದಲಾಗುತ್ತಿರುವ ಜಗತ್ತಿನಲ್ಲಿ ಭವಿಷ್ಯ ಕಟ್ಟಿಕೊಳ್ಳುವ ದಾರಿ

ಎಂಎಸ್ಸಿ ಎಲೆಕ್ಟ್ರಾನಿಕ್ ಮೀಡಿಯಾ ಎನ್ನುವುದು ಕೇವಲ ಒಂದು ಕೋರ್ಸ್ ಅಲ್ಲ. ಬದಲಾಗುತ್ತಿರುವ ಮಾಧ್ಯಮ ಜಗತ್ತಿಗೆ ವಿದ್ಯಾರ್ಥಿಗಳನ್ನು ಸಿದ್ಧಪಡಿಸುವ ಒಂದು ಅವಕಾಶ. ಈ ಕೋರ್ಸ್ ಆಯ್ಕೆ ಮಾಡಿಕೊಳ್ಳುವ ವಿದ್ಯಾರ್ಥಿಗಳು ತಂತ್ರಜ್ಞಾನ ಕಲಿಯಬೇಕು, ಸೃಜನಶೀಲತೆಯನ್ನು ಬೆಳೆಸಿಕೊಳ್ಳಬೇಕು, ಸಂವಹನ ಕೌಶಲ್ಯ ಹೆಚ್ಚಿಸಿಕೊಳ್ಳಬೇಕು, ಕನ್ನಡ ಸೇರಿದಂತೆ ಭಾಷಾ ಸಾಮರ್ಥ್ಯ ಬೆಳೆಸಿಕೊಳ್ಳಬೇಕು ಮತ್ತು ನಿರಂತರವಾಗಿ ಹೊಸದನ್ನು ಕಲಿಯುವ ಮನೋಭಾವ ಹೊಂದಬೇಕು.

ಮಾಧ್ಯಮ ಕ್ಷೇತ್ರ ಬದಲಾಗುತ್ತಿದೆ. ಅದರೊಂದಿಗೆ ಉದ್ಯೋಗದ ಸ್ವರೂಪವೂ ಬದಲಾಗುತ್ತಿದೆ. ಈ ಬದಲಾವಣೆಯನ್ನು ಅರ್ಥಮಾಡಿಕೊಂಡು ಕೌಶಲ್ಯ ಬೆಳೆಸಿಕೊಳ್ಳುವವರಿಗೆ ಎಲೆಕ್ಟ್ರಾನಿಕ್ ಮೀಡಿಯಾ ಕ್ಷೇತ್ರದಲ್ಲಿ ಅವಕಾಶಗಳ ಕೊರತೆಯಿಲ್ಲ.

ವಿದ್ಯಾರ್ಥಿಗಳ ಜೀವನದಲ್ಲಿ ಪದವಿ ಆಯ್ಕೆ ಎನ್ನುವುದು ಅತ್ಯಂತ ಮಹತ್ವದ ನಿರ್ಧಾರ. ಯಾವ ಕೋರ್ಸ್ ಓದಬೇಕು? ಓದಿದ ನಂತರ ಉದ್ಯೋಗ ಸಿಗುತ್ತದೆಯೇ? ಭವಿಷ್ಯದಲ್ಲಿ ಆ ಕ್ಷೇತ್ರಕ್ಕೆ ಬೇಡಿಕೆ ಇರುತ್ತದೆಯೇ? ಉದ್ಯೋಗ ಭದ್ರತೆ ಹೇಗಿರುತ್ತದೆ? ಇಂತಹ ಹಲವು ಪ್ರಶ್ನೆಗಳು ವಿದ್ಯಾರ್ಥಿಗಳು ಮತ್ತು ಪೋಷಕರ ಮನಸ್ಸಿನಲ್ಲಿ ಸಹಜವಾಗಿಯೇ ಮೂಡುತ್ತವೆ.

ಈ ಪ್ರಶ್ನೆಗಳಿಗೆ ಉತ್ತರ ಹುಡುಕುವಾಗ ಇಂದು ಎಂಎಸ್ಸಿ ಎಲೆಕ್ಟ್ರಾನಿಕ್ ಮೀಡಿಯಾ ಒಂದು ಗಮನಾರ್ಹ ಆಯ್ಕೆಯಾಗಿ ಕಾಣಿಸಿಕೊಳ್ಳುತ್ತದೆ. ಏಕೆಂದರೆ ಇದು ಕೇವಲ ಒಂದು ಪದವಿ ಅಲ್ಲ. ತಂತ್ರಜ್ಞಾನ, ಸೃಜನಶೀಲತೆ, ಸಂವಹನ ಮತ್ತು ಉದ್ಯೋಗ ಕೌಶಲ್ಯಗಳನ್ನು ಒಂದೇ ವೇದಿಕೆಯಲ್ಲಿ ಬೆಳೆಸುವ ಶಿಕ್ಷಣ.

ಒಂದು ಕಾಲದಲ್ಲಿ ಮಾಧ್ಯಮ ಎಂದರೆ ಪತ್ರಿಕೆ, ರೇಡಿಯೋ ಮತ್ತು ದೂರದರ್ಶನ. ಆದರೆ ಇಂದು ಮಾಧ್ಯಮದ ವ್ಯಾಪ್ತಿ ಬಹಳ ವಿಸ್ತಾರವಾಗಿದೆ.

ಸ್ಮಾರ್ಟ್‌ಫೋನ್ ನಮ್ಮ ಕೈಯಲ್ಲೇ ಕ್ಯಾಮೆರಾವನ್ನು ತಂದಿದೆ. ಸಾಮಾಜಿಕ ಜಾಲತಾಣಗಳು ಪ್ರತಿಯೊಬ್ಬರನ್ನೂ ಒಂದು ರೀತಿಯಲ್ಲಿ ಕಂಟೆಂಟ್ ಕ್ರಿಯೇಟರ್‌ಗಳನ್ನಾಗಿ ಮಾಡಿವೆ. ಯೂಟ್ಯೂಬ್, ಒಟಿಟಿ, ಪಾಡ್‌ಕಾಸ್ಟ್, ಡಿಜಿಟಲ್ ನ್ಯೂಸ್, ಇನ್‌ಸ್ಟಾಗ್ರಾಂ, ಫೇಸ್‌ಬುಕ್, ಶಾರ್ಟ್ ವಿಡಿಯೋ ವೇದಿಕೆಗಳು, ಡಿಜಿಟಲ್ ಜಾಹೀರಾತು ಹಾಗೂ ಕಾರ್ಪೊರೇಟ್ ಕಮ್ಯುನಿಕೇಷನ್‌ಗಳು ಮಾಧ್ಯಮ ಕ್ಷೇತ್ರದ ವ್ಯಾಪ್ತಿಯನ್ನು ಮತ್ತಷ್ಟು ವಿಸ್ತರಿಸಿವೆ. ಈ ಬದಲಾವಣೆಯ ಪರಿಣಾಮವಾಗಿ ಮಾಧ್ಯಮ ಕ್ಷೇತ್ರದಲ್ಲಿ ಹೊಸ ಉದ್ಯೋಗಗಳು ಸೃಷ್ಟಿಯಾಗುತ್ತಿವೆ. ಆದ್ದರಿಂದ ಎಲೆಕ್ಟ್ರಾನಿಕ್ ಮೀಡಿಯಾ ಓದುವ ವಿದ್ಯಾರ್ಥಿಗಳಿಗೆ ಭವಿಷ್ಯ ಕೇವಲ ಟಿವಿ ಚಾನೆಲ್‌ಗಳಲ್ಲಿ ಕೆಲಸ ಮಾಡುವುದಕ್ಕೆ ಸೀಮಿತವಾಗಿಲ್ಲ.

ಎಂಎಸ್ಸಿ ಎಲೆಕ್ಟ್ರಾನಿಕ್ ಮೀಡಿಯಾ ಆಯ್ಕೆ ಮಾಡಿಕೊಳ್ಳಲು ಮೊದಲ ಕಾರಣವೆಂದರೆ ಇದು ಬಹುಮುಖ ಕೌಶಲ್ಯಗಳನ್ನು ಕಲಿಸುವ ಕ್ಷೇತ್ರ.

ಕ್ಯಾಮೆರಾ ನಿರ್ವಹಣೆ, ವಿಡಿಯೋ ಎಡಿಟಿಂಗ್, ಸ್ಕ್ರಿಪ್ಟ್ ರೈಟಿಂಗ್, ನ್ಯೂಸ್ ಪ್ರೊಡಕ್ಷನ್, ಆಡಿಯೋ-ವಿಜುವಲ್ ಪ್ರೊಡಕ್ಷನ್, ಡಿಜಿಟಲ್ ಕಂಟೆಂಟ್, ಗ್ರಾಫಿಕ್ ಡಿಸೈನ್, ಪಾಡ್‌ಕಾಸ್ಟ್, ಮೊಬೈಲ್ ಜರ್ನಲಿಸಂ, ಸಾಮಾಜಿಕ ಮಾಧ್ಯಮ ನಿರ್ವಹಣೆ, ಡಿಜಿಟಲ್ ಮಾರ್ಕೆಟಿಂಗ್, ಡಾಕ್ಯುಮೆಂಟರಿ ನಿರ್ಮಾಣ ಮುಂತಾದ ಹಲವು ಕ್ಷೇತ್ರಗಳ ಪರಿಚಯ ವಿದ್ಯಾರ್ಥಿಗಳಿಗೆ ದೊರೆಯುತ್ತದೆ. ಅಂದರೆ ಒಂದು ಕೌಶಲ್ಯಕ್ಕೆ ಸೀಮಿತವಾಗದೆ ಮಾಧ್ಯಮದ ಹಲವು ವಿಭಾಗಗಳಲ್ಲಿ ಕೆಲಸ ಮಾಡುವ ಸಾಮರ್ಥ್ಯವನ್ನು ವಿದ್ಯಾರ್ಥಿಗಳು ಬೆಳೆಸಿಕೊಳ್ಳಬಹುದು.

ಯಾವುದೇ ಒಂದು ಕೋರ್ಸ್‌ನ ಉದ್ಯೋಗಾವಕಾಶವನ್ನು ಅಳೆಯುವಾಗ, ''ಈ ಪದವಿ ಪಡೆದರೆ ಯಾವ ಒಂದು ಕೆಲಸ ಸಿಗುತ್ತದೆ?'' ಎಂಬ ಪ್ರಶ್ನೆಗಿಂತ, ''ಈ ಪದವಿ ನನ್ನ ಮುಂದೆ ಎಷ್ಟು ವೃತ್ತಿ ದಾರಿಗಳನ್ನು ತೆರೆದಿಡುತ್ತದೆ?'' ಎಂಬ ಪ್ರಶ್ನೆ ಮುಖ್ಯ. ಎಂಎಸ್ಸಿ ಎಲೆಕ್ಟ್ರಾನಿಕ್ ಮೀಡಿಯಾ ವಿದ್ಯಾರ್ಥಿಗಳ ಮುಂದೆ ಹಲವು ದಾರಿಗಳಿವೆ. ಮಾಧ್ಯಮ ಸಂಸ್ಥೆಗಳಲ್ಲಿ ವಿಡಿಯೋ ಜರ್ನಲಿಸ್ಟ್, ಕ್ಯಾಮೆರಾ ಪರ್ಸನ್, ವಿಡಿಯೋ ಎಡಿಟರ್, ಪ್ರೊಡಕ್ಷನ್ ಎಕ್ಸಿಕ್ಯೂಟಿವ್, ನ್ಯೂಸ್ ಪ್ರೊಡ್ಯೂಸರ್, ಸ್ಕ್ರಿಪ್ಟ್ ರೈಟರ್ ಆಗಿ ಕೆಲಸ ಮಾಡಬಹುದು. ಡಿಜಿಟಲ್ ಕ್ಷೇತ್ರದಲ್ಲಿ ಕಂಟೆಂಟ್ ಕ್ರಿಯೇಟರ್, ಸೋಶಿಯಲ್ ಮೀಡಿಯಾ ಮ್ಯಾನೇಜರ್, ಡಿಜಿಟಲ್ ಕಂಟೆಂಟ್ ಎಡಿಟರ್, ವಿಡಿಯೋ ಕಂಟೆಂಟ್ ಸ್ಪೆಷಲಿಸ್ಟ್, ಡಿಜಿಟಲ್ ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ ಆಗಬಹುದು.

ಕಾರ್ಪೊರೇಟ್ ಕ್ಷೇತ್ರದಲ್ಲಿ ಕಾರ್ಪೊರೇಟ್ ಕಮ್ಯುನಿಕೇಷನ್, ಬ್ರ್ಯಾಂಡ್ ಕಂಟೆಂಟ್, ಆಂತರಿಕ ಸಂವಹನ ಮತ್ತು ಡಿಜಿಟಲ್ ಕಮ್ಯುನಿಕೇಷನ್ ಕ್ಷೇತ್ರಗಳಲ್ಲಿ ಅವಕಾಶಗಳನ್ನು ಹುಡುಕಬಹುದು. ಇದರ ಜೊತೆಗೆ ಜಾಹೀರಾತು ಸಂಸ್ಥೆಗಳು, ಶಿಕ್ಷಣ ಸಂಸ್ಥೆಗಳು, ಸರ್ಕಾರಿ ಇಲಾಖೆಗಳಿಗೆ ಸಂಬಂಧಿಸಿದ ಮಾಧ್ಯಮ ವಿಭಾಗಗಳು, ಎನ್‌ಜಿಒಗಳು, ಸ್ಟಾರ್ಟ್‌ಅಪ್‌ಗಳು ಮತ್ತು ಸ್ವತಂತ್ರ ಮಾಧ್ಯಮ ಸಂಸ್ಥೆಗಳಲ್ಲಿಯೂ ಅವಕಾಶಗಳಿವೆ

ವಿದ್ಯಾರ್ಥಿಗಳು ಮತ್ತು ಪೋಷಕರಿಗೆ ಸಹಜವಾಗಿ ಬರುವ ಪ್ರಶ್ನೆ''ಈ ಕ್ಷೇತ್ರದಲ್ಲಿ ಉದ್ಯೋಗ ಭದ್ರತೆ ಇದೆಯೇ?'' ಇದಕ್ಕೆ ನೇರವಾದ ಉತ್ತರವೆಂದರೆ, ಇಂದಿನ ಬದಲಾಗುತ್ತಿರುವ ಉದ್ಯೋಗ ಮಾರುಕಟ್ಟೆಯಲ್ಲಿ ಯಾವುದೇ ಒಂದು ಪದವಿ ಶಾಶ್ವತ ಉದ್ಯೋಗದ ಖಾತರಿ ನೀಡುವುದಿಲ್ಲ. ಆದರೆ ಬಹುಮುಖ ಕೌಶಲ್ಯ ಹೊಂದಿರುವವರಿಗೆ ಉದ್ಯೋಗದ ಅವಕಾಶಗಳನ್ನು ಉಳಿಸಿಕೊಳ್ಳುವ ಸಾಮರ್ಥ್ಯ ಹೆಚ್ಚು. ಇಲ್ಲಿ ಎಲೆಕ್ಟ್ರಾನಿಕ್ ಮೀಡಿಯಾ ಶಿಕ್ಷಣದ ಮಹತ್ವ ಬರುತ್ತದೆ. ಒಬ್ಬ ವಿದ್ಯಾರ್ಥಿಗೆ ಕ್ಯಾಮೆರಾ ಮಾತ್ರ ಗೊತ್ತಿದ್ದರೆ ಅವನ ಅವಕಾಶಗಳು ಒಂದು ಹಂತದವರೆಗೆ ಸೀಮಿತವಾಗಬಹುದು. ಆದರೆ ಕ್ಯಾಮೆರಾ ಜೊತೆಗೆ ಎಡಿಟಿಂಗ್, ಸ್ಕ್ರಿಪ್ಟ್, ಸೋಶಿಯಲ್ ಮೀಡಿಯಾ, ಡಿಜಿಟಲ್ ಕಂಟೆಂಟ್, ಗ್ರಾಫಿಕ್ಸ್ ಮತ್ತು ಎಐ ಸಾಧನಗಳ ಬಳಕೆಯ ಜ್ಞಾನವಿದ್ದರೆ ಆತ ಹಲವು ವಿಭಾಗಗಳಲ್ಲಿ ಕೆಲಸ ಮಾಡಬಲ್ಲ. ಒಂದು ಉದ್ಯೋಗ ಕಳೆದುಕೊಂಡರೂ ಮತ್ತೊಂದು ಕೌಶಲ್ಯದ ಮೂಲಕ ಹೊಸ ಅವಕಾಶ ಹುಡುಕುವ ಸಾಮರ್ಥ್ಯವೇ ಇಂದಿನ ಉದ್ಯೋಗ ಭದ್ರತೆಯ ನಿಜವಾದ ರೂಪ. ಹೀಗಾಗಿ ಎಲೆಕ್ಟ್ರಾನಿಕ್ ಮೀಡಿಯಾ ವಿದ್ಯಾರ್ಥಿಗಳು ಒಂದು ಕೆಲಸಕ್ಕಾಗಿ ಸಿದ್ಧರಾಗಬಾರದು. ಹಲವು ಕೆಲಸಗಳಿಗೆ ಅಗತ್ಯವಾಗುವ ಕೌಶಲ್ಯಕ್ಕಾಗಿ ಸಿದ್ಧರಾಗಬೇಕು.



ಇಂದು ವಿದ್ಯಾರ್ಥಿಗಳಲ್ಲಿ ಮತ್ತೊಂದು ಆತಂಕವಿದೆಕೃತಕ ಬುದ್ಧಿಮತ್ತೆ ಮಾಧ್ಯಮ ಕ್ಷೇತ್ರದ ಉದ್ಯೋಗಗಳನ್ನು ಕಡಿಮೆ ಮಾಡಬಹುದೇ? ತಂತ್ರಜ್ಞಾನ ಕೆಲವು ಕೆಲಸಗಳ ಸ್ವರೂಪವನ್ನು ಬದಲಾಯಿಸಬಹುದು. ಆದರೆ ಮಾಧ್ಯಮ ಕ್ಷೇತ್ರದಲ್ಲಿ ಮಾನವೀಯ ಸೃಜನಶೀಲತೆ, ಕಥೆ ಹೇಳುವ ಸಾಮರ್ಥ್ಯ, ಸಂದರ್ಶನ ಕೌಶಲ್ಯ, ಸ್ಥಳೀಯ ಅರಿವು, ನೈತಿಕ ನಿರ್ಧಾರ ಮತ್ತು ಪ್ರೇಕ್ಷಕರ ಮನಸ್ಥಿತಿಯನ್ನು ಅರ್ಥಮಾಡಿಕೊಳ್ಳುವ ಸಾಮರ್ಥ್ಯಕ್ಕೆ ಸದಾ ಮಹತ್ವವಿರುತ್ತದೆ. ಹೀಗಾಗಿ ಎಐಯೊಂದಿಗೆ ಸ್ಪರ್ಧಿಸುವ ಬದಲು ಎಐಯನ್ನು ಬಳಸಬಲ್ಲ ಮಾಧ್ಯಮ ವೃತ್ತಿಪರರಾಗುವುದು ಇಂದಿನ ಅಗತ್ಯ.

ಎಐ ಬಳಸಿ ಸಂಶೋಧನೆ, ಸ್ಕ್ರಿಪ್ಟ್‌ನ ಪ್ರಾಥಮಿಕ ಕೆಲಸ, ಉಪಶೀರ್ಷಿಕೆ, ಭಾಷಾಂತರ, ಗ್ರಾಫಿಕ್ಸ್, ಕಂಟೆಂಟ್ ವಿಶ್ಲೇಷಣೆ ಮತ್ತು ಎಡಿಟಿಂಗ್‌ನ ಕೆಲವು ಹಂತಗಳನ್ನು ವೇಗಗೊಳಿಸಬಹುದು. ಆದರೆ ಅಂತಿಮವಾಗಿ ಯಾವ ಕಥೆ ಹೇಳಬೇಕು, ಹೇಗೆ ಹೇಳಬೇಕು ಮತ್ತು ಅದರ ಸಾಮಾಜಿಕ ಪರಿಣಾಮವೇನು ಎಂಬುದನ್ನು ನಿರ್ಧರಿಸುವ ಮಾನವೀಯ ಬುದ್ಧಿವಂತಿಕೆಯೇ ಮುಖ್ಯ.

ಎಂಎಸ್ಸಿ ಓದುತ್ತಿರುವ ವಿದ್ಯಾರ್ಥಿಗಳು ಮತ್ತೊಂದು ವಿಷಯವನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಕೋರ್ಸ್ ಮುಗಿದ ನಂತರ ಕೆಲಸ ಹುಡುಕುವುದನ್ನು ಆರಂಭಿಸುವ ಬದಲು, ಕೋರ್ಸ್‌ನ ಮೊದಲ ದಿನದಿಂದಲೇ ಕೆಲಸಕ್ಕೆ ಸಿದ್ಧರಾಗಬೇಕು. ಕಾಲೇಜಿನಲ್ಲಿರುವಾಗಲೇ ತಮ್ಮದೇ ಪೋರ್ಟ್‌ಫೋಲಿಯೊ ನಿರ್ಮಿಸಿಕೊಳ್ಳಬೇಕು.

ಒಂದು ಡಾಕ್ಯುಮೆಂಟರಿ ಮಾಡಿ. ಒಂದು ಶಾರ್ಟ್ ಫಿಲ್ಮ್ ನಿರ್ಮಿಸಿ. ಸಂದರ್ಶನಗಳ ಸರಣಿ ಮಾಡಿ. ಪಿಡ್‌ಕಾಸ್ಟ್ ಆರಂಭಿಸಿ. ಸಾಮಾಜಿಕ ಸಮಸ್ಯೆಯ ಕುರಿತು ರೀಲ್ಸ್ ಮಾಡಿ. ಯೂಟ್ಯೂಬ್ ಚಾನೆಲ್ ನಡೆಸಿ.ಸ್ಥಳೀಯ ಕಥೆಗಳನ್ನು ದಾಖಲಿಸಿ. ನೀವು ಮಾಡಿದ ಕೆಲಸಗಳೇ ನಾಳೆ ನಿಮ್ಮ ರೆಸ್ಯೂಮೆಗಿಂತ ದೊಡ್ಡ ಪರಿಚಯವಾಗಬಹುದು. ಸಂಸ್ಥೆಗಳು ''ನೀವು ಏನು ಓದಿದ್ದೀರಿ?'' ಎನ್ನುವುದರ ಜೊತೆಗೆ ''ನೀವು ಏನು ಮಾಡಬಲ್ಲಿರಿ?'' ಎನ್ನುವುದನ್ನೂ ನೋಡುತ್ತವೆ.

ಕನ್ನಡ ಭಾಷೆಯಲ್ಲಿರುವ ಅಪಾರ ಡಿಜಿಟಲ್ ಅವಕಾಶಗಳನ್ನು ವಿದ್ಯಾರ್ಥಿಗಳು ಗುರುತಿಸಬೇಕಾಗಿದೆ. ಸ್ಥಳೀಯ ಸುದ್ದಿ, ಸಂಸ್ಕೃತಿ, ಕಲೆ, ಸಾಹಿತ್ಯ, ಗ್ರಾಮೀಣ ಬದುಕು, ಪ್ರವಾಸೋದ್ಯಮ, ಕೃಷಿ, ಯುವಜನರ ಸಮಸ್ಯೆಗಳು, ಶಿಕ್ಷಣ, ಉದ್ಯೋಗ, ಸಾಮಾಜಿಕ ವಿಷಯಗಳುಇವೆಲ್ಲವೂ ಉತ್ತಮ ಡಿಜಿಟಲ್ ಕಂಟೆಂಟ್‌ಗೆ ದೊಡ್ಡ ಅವಕಾಶಗಳಾಗಿವೆ. ಕನ್ನಡದಲ್ಲಿ ಉತ್ತಮವಾಗಿ ಬರೆಯಬಲ್ಲ, ಮಾತನಾಡಬಲ್ಲ ಮತ್ತು ದೃಶ್ಯ ರೂಪದಲ್ಲಿ ಕಥೆ ಹೇಳಬಲ್ಲ ಯುವಜನರಿಗೆ ಡಿಜಿಟಲ್ ಯುಗದಲ್ಲಿ ವಿಶಿಷ್ಟ ಗುರುತು ನಿರ್ಮಿಸಿಕೊಳ್ಳುವ ಅವಕಾಶವಿದೆ.

ವಿದ್ಯಾರ್ಥಿಗಳ ಭವಿಷ್ಯವನ್ನು ಕೇವಲ ವಿದ್ಯಾರ್ಥಿಗಳ ಪ್ರಯತ್ನಕ್ಕೆ ಬಿಟ್ಟುಕೊಡಲಾಗುವುದಿಲ್ಲ. ಶಿಕ್ಷಣ ಸಂಸ್ಥೆಗಳ ಜವಾಬ್ದಾರಿಯೂ ಅಷ್ಟೇ ಮುಖ್ಯ.

ಪಠ್ಯಕ್ರಮದ ಜೊತೆಗೆ ಪ್ರಾಯೋಗಿಕ ತರಬೇತಿ, ಮಾಧ್ಯಮ ಸಂಸ್ಥೆಗಳಲ್ಲಿ ಇಂಟರ್ನ್‌ಶಿಪ್, ಲೈವ್ ಪ್ರಾಜೆಕ್ಟ್‌ಗಳು, ಸ್ಟುಡಿಯೋ ಅನುಭವ, ಡಿಜಿಟಲ್ ಮೀಡಿಯಾ ಲ್ಯಾಬ್, ಎಐ ಆಧಾರಿತ ಮಾಧ್ಯಮ ತರಬೇತಿ ಮತ್ತು ಉದ್ಯಮ ತಜ್ಞರೊಂದಿಗೆ ಸಂವಾದಗಳಿಗೆ ಹೆಚ್ಚಿನ ಆದ್ಯತೆ ನೀಡಬೇಕು.

ವಿದ್ಯಾರ್ಥಿ ಕಾಲೇಜಿನಿಂದ ಹೊರಬರುವಾಗ ಪದವಿ ಪತ್ರದ ಜೊತೆಗೆ ಕನಿಷ್ಠ ಕೆಲವು ಉತ್ತಮ ಮಾಧ್ಯಮ ಪ್ರಾಜೆಕ್ಟ್‌ಗಳನ್ನೂ ಕೈಯಲ್ಲಿ ಹಿಡಿದುಕೊಂಡು ಹೊರಬರಬೇಕು.

ಎಂಎಸ್ಸಿ ಎಲೆಕ್ಟ್ರಾನಿಕ್ ಮೀಡಿಯಾ ಎನ್ನುವುದು ಕೇವಲ ಒಂದು ಕೋರ್ಸ್ ಅಲ್ಲ. ಬದಲಾಗುತ್ತಿರುವ ಮಾಧ್ಯಮ ಜಗತ್ತಿಗೆ ವಿದ್ಯಾರ್ಥಿಗಳನ್ನು ಸಿದ್ಧಪಡಿಸುವ ಒಂದು ಅವಕಾಶ. ಈ ಕೋರ್ಸ್ ಆಯ್ಕೆ ಮಾಡಿಕೊಳ್ಳುವ ವಿದ್ಯಾರ್ಥಿಗಳು ತಂತ್ರಜ್ಞಾನ ಕಲಿಯಬೇಕು, ಸೃಜನಶೀಲತೆಯನ್ನು ಬೆಳೆಸಿಕೊಳ್ಳಬೇಕು, ಸಂವಹನ ಕೌಶಲ್ಯ ಹೆಚ್ಚಿಸಿಕೊಳ್ಳಬೇಕು, ಕನ್ನಡ ಸೇರಿದಂತೆ ಭಾಷಾ ಸಾಮರ್ಥ್ಯ ಬೆಳೆಸಿಕೊಳ್ಳಬೇಕು ಮತ್ತು ನಿರಂತರವಾಗಿ ಹೊಸದನ್ನು ಕಲಿಯುವ ಮನೋಭಾವ ಹೊಂದಬೇಕು.

ಏಕೆಂದರೆ ಭವಿಷ್ಯದಲ್ಲಿ ಒಂದೇ ಕೌಶಲ್ಯ ಹೊಂದಿರುವವರಿಗಿಂತ ಹಲವು ಕೌಶಲ್ಯಗಳನ್ನು ಒಟ್ಟಿಗೆ ಬಳಸಬಲ್ಲ ಮಾಧ್ಯಮ ವೃತ್ತಿಪರರಿಗೆ ಹೆಚ್ಚಿನ ಬೇಡಿಕೆ ಇರಲಿದೆ. ಮಾಧ್ಯಮ ಬದಲಾಗುತ್ತಿದೆ. ತಂತ್ರಜ್ಞಾನ ಬದಲಾಗುತ್ತಿದೆ. ಉದ್ಯೋಗದ ಸ್ವರೂಪ ಬದಲಾಗುತ್ತಿದೆ. ಆದರೆ ಕಥೆ ಹೇಳುವ ಮಾನವೀಯ ಅಗತ್ಯ ಮಾತ್ರ ಬದಲಾಗುವುದಿಲ್ಲ. ಆ ಕಥೆಯನ್ನು ಸತ್ಯವಾಗಿ, ಸೃಜನಶೀಲವಾಗಿ ಮತ್ತು ತಂತ್ರಜ್ಞಾನದ ನೆರವಿನಿಂದ ಜಗತ್ತಿಗೆ ಹೇಳಬಲ್ಲ ಯುವಜನರೇ ನಾಳೆಯ ಮಾಧ್ಯಮವನ್ನು ಮುನ್ನಡೆಸಲಿದ್ದಾರೆ.

ಆದ್ದರಿಂದ ಎಂಎಸ್ಸಿ ಎಲೆಕ್ಟ್ರಾನಿಕ್ ಮೀಡಿಯಾವನ್ನು ಕೇವಲ ಪದವಿ ಪಡೆಯುವ ಕೋರ್ಸ್ ಎಂದು ನೋಡಬೇಡಿ. ನಿಮ್ಮ ಕೌಶಲ್ಯ, ಸೃಜನಶೀಲತೆ ಮತ್ತು ಭವಿಷ್ಯದ ವೃತ್ತಿಜೀವನವನ್ನು ಕಟ್ಟಿಕೊಳ್ಳುವ ವೇದಿಕೆಯಾಗಿ ನೋಡಿ

ಇಸ್ರೇಲಿ ಮಾದರಿ ಬುಲ್ಡೋಜರ ಪ್ರಯೋಗ: ವಿರೋಧಿ ದನಿ ಎದುರಿಸಲು ಕೊಳಚೆ ಅಸ್ತ್ರ, ಬಳಸುತ್ತಾ ಮೋದಿ ಸರ್ಕಾರ?

ಇಸ್ರೇಲ್ ಸರ್ಕಾರವು ಪ್ಯಾಲೆಸ್ತೀನ್ ಪ್ರದೇಶಗಳಲ್ಲಿ ಭದ್ರತೆಗೆ ಬೆದರಿಕೆ ಹಾಕಿದ ಅಥವಾ ಪ್ರತಿಭಟನೆಯಲ್ಲಿ ಭಾಗಿಯಾದ ಆರೋಪ ಎದುರಿಸುತ್ತಿರುವವರ ಕುಟುಂಬದ ಮನೆಗಳನ್ನು ಯಾವುದೇ ನ್ಯಾಯಾಲಯದ ವಿಲೇವಾರಿಗೆ ಕಾಯದೆ ಧ್ವಂಸಗೊಳಿಸುತ್ತದೆ. ಅಂದರೆ ಬುಲ್ಡೋಜರ್ ಪ್ರಯೋಗಿಸಲಾಗುತ್ತದೆ. ಇದನ್ನು ಸಾಮೂಹಿಕ ಶಿಕ್ಷೆ ಎಂದು ಪರಿಗಣಿಸಲಾಗುತ್ತದೆ.

ಉತ್ತರ ಪ್ರದೇಶ ಸೇರಿದಂತೆ ದೇಶದ ಬಹುತೇಕ ಬಿಜೆಪಿ ಆಡಳಿತ ನಡೆಸುತ್ತಿರುವ ರಾಜ್ಯಗಳಲ್ಲಿ ಸರ್ಕಾರ ವಿರುದ್ಧ ಧ್ವನಿ ಎತ್ತಿದವರನ್ನು, ಪ್ರತಿಭಟನಾಕಾರರು, ಮಾನವ ಹಕ್ಕುಗಳ ಹೋರಾಟಗಾರರು ಮತ್ತು ರಾಜಕೀಯ ವಿರೋಧಿಗಳನ್ನು ಹತ್ತಿಕ್ಕಲು ಬುಲ್ಡೋಜರ್ ಪ್ರಯೋಗ ಮಾಡಲಾಗುತ್ತಿದೆ. ಈ ರೀತಿ ರಾಜಕೀಯ ವಿರೋಧಿಗಳ ಆಸ್ತಿಗಳನ್ನು ಬುಲ್ಡೋಜರ್ ಮೂಲಕ ನೆಲಸಮಗೊಳಿಸುತ್ತಿರುವ ಪ್ರವೃತ್ತಿಯು ಜಾಗತಿಕ ಮಟ್ಟದಲ್ಲಿ ತೀವ್ರ ಚರ್ಚೆಗೆ ಗ್ರಾಸವಾಗುತ್ತಿದೆ. ಅಷ್ಟಕ್ಕೂ ಇದು ಇಸ್ರೇಲಿ ಮಾದರಿ ಬುಲ್ಡೋಜರ್ ಪ್ರಯೋಗವಲ್ಲವೇ? ಇಸ್ರೇಲಿ ಮಾದರಿಯನ್ನು ಪಾಲಿಸುತ್ತಾ ಬಂದಿರುವ ಬಿಜೆಪಿ ಸರ್ಕಾರ ಮುಂದೆ ಕೊಳಚೆ ಅಸ್ತ್ರ (ಸ್ಟಂಕ್ ಕೆಮಿಕಲ್ ಸ್ಪ್ರೇ -) ಪ್ರಯೋಗಕ್ಕೂ ಇಳಿಯಬಹುದೇ?

ದೇಶದಲ್ಲಿ ಬಿಜೆಪಿ ನಡೆಸುತ್ತಿರುವ ಈ ಬುಲ್ಡೋಜರ್ ಕ್ರಮವನ್ನು ಮಧ್ಯಪ್ರಾಚ್ಯದಲ್ಲಿ ಇಸ್ರೇಲ್ ಸರ್ಕಾರವು ಪ್ಯಾಲೆಸ್ತೀನ್ ಪ್ರತಿಭಟನಾಕಾರರು ಹಾಗೂ ಸಶಸ್ತ್ರ ಗುಂಪುಗಳ ವಿರುದ್ಧ ಬಳಸುವ ''ಪಾಲಿಸಿ ಆಫ್ ಹೌಸ್ ಡೆಮೋಲಿಷನ್'' (ಮನೆ ಧ್ವಂಸಗೊಳಿಸುವ ಧೋರಣೆ) ಕಾರ್ಯತಂತ್ರಕ್ಕೆ ಹಲವು ಅಂತಾರಾಷ್ಟ್ರೀಯ ವಿಶ್ಲೇಷಕರು ಮತ್ತು ಮಾನವ ಹಕ್ಕುಗಳ ಸಂಸ್ಥೆಗಳು ಹೋಲಿಸಿವೆ.

ಇಸ್ರೇಲ್ ಸರ್ಕಾರವು ಪ್ಯಾಲೆಸ್ತೀನ್ ಪ್ರದೇಶಗಳಲ್ಲಿ ಭದ್ರತೆಗೆ ಬೆದರಿಕೆ ಹಾಕಿದ ಅಥವಾ ಪ್ರತಿಭಟನೆಯಲ್ಲಿ ಭಾಗಿಯಾದ ಆರೋಪ ಎದುರಿಸುತ್ತಿರುವವರ ಕುಟುಂಬದ ಮನೆಗಳನ್ನು ಯಾವುದೇ ನ್ಯಾಯಾಲಯದ ವಿಲೇವಾರಿಗೆ ಕಾಯದೆ ಧ್ವಂಸಗೊಳಿಸುತ್ತದೆ. ಅಂದರೆ ಬುಲ್ಡೋಜರ್ ಪ್ರಯೋಗಿಸಲಾಗುತ್ತದೆ. ಇದನ್ನು ಸಾಮೂಹಿಕ ಶಿಕ್ಷೆ ( ) ಎಂದು ಪರಿಗಣಿಸಲಾಗುತ್ತದೆ.

ಇದೇ ಮಾದರಿಯಲ್ಲಿ, ಉತ್ತರ ಪ್ರದೇಶದಲ್ಲಿ ಪೌರತ್ವ ತಿದ್ದುಪಡಿ ಕಾಯ್ದೆ () ವಿರೋಧಿ ಪ್ರತಿಭಟನೆಗಳು ಅಥವಾ ಕೋಮು ಘರ್ಷಣೆಗಳು ಸಂಭವಿಸಿದ ತಕ್ಷಣವೇ, ಅಂತಹ ಘಟನೆಗಳಲ್ಲಿ ಭಾಗಿಯಾದ ಆರೋಪಿಗಳ ಆಸ್ತಿಗಳನ್ನು ಅದರಲ್ಲೂ ಹೆಚ್ಚಾಗಿ ಮುಸ್ಲಿಮರ ಮನೆಗಳನ್ನುಅಕ್ರಮ ನಿರ್ಮಾಣ ಎಂಬ ನೆಪದಲ್ಲಿ ಕೆಡವಲಾಗುತ್ತಿದೆ.

ಇಂತಹ ಘಟನೆಗಳು ಹೇರಳವಾಗಿ ನಡೆಯುತ್ತಿದ್ದರೂ ಹೆಚ್ಚು ಚರ್ಚೆಗೆ ಗ್ರಾಸವಾದ ಒಂದು ಉದಾಹರಣೆ 2022ರ ಪ್ರಯಾಗ್‌ರಾಜ್ ಕಾರ್ಯಾಚರಣೆ. ಪ್ರವಾದಿ ಮೊಹಮ್ಮದ್ ಕುರಿತಾದ ಹೇಳಿಕೆ ವಿರೋಧಿಸಿ ನಡೆದ ಪ್ರತಿಭಟನೆಯ ಬೆನ್ನಲ್ಲೇ, ಹೋರಾಟಗಾರ ಜಾವೇದ್ ಅಹ್ಮದ್ ಅವರ ನಿವಾಸವನ್ನು ಮಹಾನಗರ ಪಾಲಿಕೆ ಮತ್ತು ಪೊಲೀಸರ ನೇತೃತ್ವದಲ್ಲಿ ಧ್ವಂಸಗೊಳಿಸಲಾಗಿತ್ತು. ಹೀಗೆಯೇ ಬಿಜೆಪಿ ಸರ್ಕಾರವು ಅನೇಕ ಪ್ರಕರಣಗಳಲ್ಲಿ ಕಾನೂನುಬದ್ಧ ನೋಟಿಸ್ ನೀಡದೆ, ರಾತ್ರೋರಾತ್ರಿ ತೆರವು ಕಾರ್ಯಾಚರಣೆ ನಡೆಸಿದೆ.

ಸುಪ್ರೀಂ ಕೋರ್ಟ್ ಈ ಬುಲ್ಡೋಜರ್ ನ್ಯಾಯವನ್ನು ತೀವ್ರವಾಗಿ ಖಂಡಿಸಿದೆ. ''ಕಾನೂನಿನ ಸರಿಯಾದ ಪ್ರಕ್ರಿಯೆಯನ್ನು ( ) ಪಾಲಿಸದೆ ನಾಗರಿಕರ ಮನೆಗಳನ್ನು ಕೆಡವುವುದು ಸಂವಿಧಾನಬಾಹಿರ ಮತ್ತು ಕಾನೂನುಬಾಹಿರ'' ಎಂದು ತಿಳಿಸಿರುವ ನ್ಯಾಯಪೀಠ, ಈ ರೀತಿ ಸಂವಿಧಾನ ಬಾಹಿರವಾಗಿ ಮನೆ ಧ್ವಂಸಗೊಳಿಸಿದ ಪ್ರಕರಣಗಳಲ್ಲಿ ಸಂತ್ರಸ್ತರಿಗೆ ಪರಿಹಾರ ನೀಡುವಂತೆ ರಾಜ್ಯ ಸರ್ಕಾರಕ್ಕೆ ಆದೇಶಿಸಿದೆ. ಆದರೆ ಸರ್ಕಾರ ಸುಪ್ರೀಂ ಕೋರ್ಟ್‌ನ ಈ ಆದೇಶವನ್ನು ಪಾಲಿಸಿದೆಯೇ? ಇಲ್ಲ.

ಇನ್ನು ಅಮ್ನೆಸ್ಟಿ ಇಂಟರ್‌ನ್ಯಾಷನಲ್ ( ) ಮತ್ತು ಹ್ಯೂಮನ್ ರೈಟ್ಸ್ ವಾಚ್ () ನಂತಹ ಜಾಗತಿಕ ಸಂಸ್ಥೆಗಳು ತಮ್ಮ ವರದಿಗಳಲ್ಲಿ, ಈ ಕಾರ್ಯಾಚರಣೆಯು ವಿರೋಧಿ ದನಿಗಳನ್ನು ಅಡಗಿಸಲು ಮತ್ತು ನಿರ್ದಿಷ್ಟ ಸಮುದಾಯಗಳನ್ನು ಗುರಿಯಾಗಿಸಲು ಬಳಸಲಾಗುತ್ತಿರುವ ಅಸ್ತ್ರ ಎಂದು ಕಳವಳ ವ್ಯಕ್ತಪಡಿಸಿವೆ. ಆದರೆ ಬಿಜೆಪಿ ಸರ್ಕಾರ ಮಾತ್ರ ಅತಿಕ್ರಮಣದ ನೆಪವೊಡ್ಡುತ್ತಿದೆ. ಸರ್ಕಾರದ ಧೋರಣೆಗಳ ವಿರುದ್ಧ ಧ್ವನಿ ಎತ್ತಿದಾಗಲೇ ಸಾಮಾಜಿಕ ಹೋರಾಟಗಾರರು, ಮುಸ್ಲಿಮರ ಮನೆಗಳು ಅತಿಕ್ರಮಣವಾಗುವುದು ಹೇಗೆ ಎಂಬ ಪ್ರಶ್ನೆ ನಾವು ಎತ್ತಲೇಬೇಕಾಗುತ್ತದೆ.

ವಿರೋಧಿ ದನಿ ಎದುರಿಸಲು ಕೊಳಚೆ ಅಸ್ತ್ರ

ಸ್ಟಂಕ್ ಕೆಮಿಕಲ್ ಸ್ಪ್ರೇ ಅಥವಾ ಕೊಳಚೆ ಅಸ್ತ್ರ ( ) ಎಂಬುದು ಪ್ರತಿಭಟನಾಕಾರರನ್ನು ಚದುರಿಸಲು ಬಳಸಲಾಗುವ ಅತ್ಯಂತ ದುರ್ನಾತ ಬೀರುವ ಒಂದು ರಾಸಾಯನಿಕ ದ್ರವವಾಗಿದೆ. ಇದನ್ನು ಇಸ್ರೇಲ್‌ನ ಆಡೋರ್‌ಟೆಕ್ () ಎಂಬ ಸಂಸ್ಥೆಯು ಅಭಿವೃದ್ಧಿಪಡಿಸಿತು. 2008ರಲ್ಲಿ ಇಸ್ರೇಲಿ ಭದ್ರತಾ ಪಡೆಗಳು ಪಶ್ಚಿಮ ದಂಡೆಯಲ್ಲಿ ( ) ಇದನ್ನು ಮೊದಲ ಬಾರಿಗೆ ಬಳಸಿದವು.

ಇದು ಈಸ್ಟ್ (), ಬೇಕಿಂಗ್ ಪೌಡರ್ ಮತ್ತು ನೀರಿನಂತಹ ಸಾವಯವ ಘಟಕಗಳ ಮಿಶ್ರಣವಾಗಿದೆ. ಇದು ಕೊಳೆತ ಶವ, ಚರಂಡಿಯ ನೀರು ಮತ್ತು ಕೊಳೆತ ಆಹಾರದ ತೀವ್ರ ದುರ್ನಾತವನ್ನು ಹೋಲುತ್ತದೆ. ಇದು ಜೈವಿಕವಾಗಿ ಜೀವಕ್ಕೆ ತಕ್ಷಣದ ಅಪಾಯ ತರದಿದ್ದರೂ, ತೀವ್ರವಾದ ವಾಂತಿ, ತಲೆಸುತ್ತು, ಚರ್ಮ ಕಿರಿಕಿರಿ ಮತ್ತು ಕಣ್ಣು ಉರಿಯನ್ನು ಉಂಟುಮಾಡುತ್ತದೆ. ಈ ದ್ರವ ಬಿದ್ದ ಬಟ್ಟೆ ಅಥವಾ ಸ್ಥಳಗಳಿಂದ ವಾಸನೆ ವಾರಗಟ್ಟಲೆ ಹೋಗುವುದಿಲ್ಲ.

ಮಾನವ ಹಕ್ಕುಗಳ ಸಂಸ್ಥೆಗಳಾದ ಆಮ್ನೆಸ್ಟಿ ಇಂಟರ್‌ನ್ಯಾಷನಲ್ ಮತ್ತು ಬಿಸೇಲಮ್ () ನ ವರದಿಗಳ ಪ್ರಕಾರ, ಇಸ್ರೇಲ್ ಪಡೆಗಳು ಈ ದ್ರವವನ್ನು ಕೇವಲ ಪ್ರತಿಭಟನಾಕಾರರ ಮೇಲಷ್ಟೇ ಅಲ್ಲದೆ, ಪ್ಯಾಲೆಸ್ತೀನಿಯನ್ನರ ಮನೆಗಳು, ಅಂಗಡಿಗಳು ಮತ್ತು ಬೀದಿಗಳ ಮೇಲೆಯೂ ಸ್ಪ್ರೇ ಮಾಡಿವೆ. ಇದನ್ನು ''ಸಾಮೂಹಿಕ ಶಿಕ್ಷೆ'' ರೂಪದಲ್ಲಿ ಬಳಸಲಾಗುತ್ತಿದೆ ಎಂದು ಮಾನವ ಹಕ್ಕುಗಳ ಸಂಘಟನೆಗಳು ಕಳವಳ ವ್ಯಕ್ತಪಡಿಸಿವೆ.

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR